ಸೋಮವಾರ, ಜನವರಿ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 13 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಅಧ್ಯಯನಶೀಲ ವ್ಯಕ್ತಿತ್ವ ನಿಮ್ಮದಾಗಬೇಕೇ?



ಆಳ-ಅಗಲ
ಮಹಾಕುಂಭ ಮೇಳ ಜಗತ್ತಿನ ದೊಡ್ಡ ಉತ್ಸವ
ಕೆಲಸ ಮಾಡುವ ಮಹಿಳೆಯರಿಗೆ ಬೆಂಗಳೂರು ಅತ್ಯುತ್ತಮ 10
ಎಎಪಿಗೆ 'ಕೈ' ಘಟಾನುಘಟಗಳ ಪೈಪೋಟಿ 11
ಮಾರ್ಚ್ 23ರಿಂದ ಐಪಿಎಲ್ 11
ಬೆಂಕಿ ನಂದಿಸಲು ಹರಸಾಹಸ 10

ಇಂದು ಸಿಎಲ್‌ಪಿ, ಕೆಪಿಸಿಸಿ ಸಭೆ: ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಭಾಗಿ

ಕಾಂಗ್ರೆಸ್ ಬೇಗುದಿ ಶಮನಕ್ಕೆ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯಲ್ಲಿ ನಡೆಯುವ 'ಗಾಂಧಿ ಭಾರತ' ಸಮಾವೇಶದ ಸಿದ್ಧತೆಗಾಗಿ ಸೋಮವಾರ (ಜ.13) ಕರೆದಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಮತ್ತು ಕೆಪಿಸಿಸಿ ಸರ್ವ ಸದಸ್ಯರ ಸಭೆಯನ್ನು ಅಧಿಕಾರ ಹಂಚಿಕೆ ವಿಚಾರವಾಗಿ ಉದ್ಭವಿಸಿರುವ ಒಳ ಬೇಗುದಿ ಶಮನಕ್ಕೆ ಕಾಂಗ್ರೆಸ್ ವರಿಷ್ಠರು ಬಳಸಿಕೊಳ್ಳಲಿದ್ದಾರೆ.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿಯೂ ಆದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಈ ಸಭೆಗಳಲ್ಲಿ ಭಾಗವಹಿಸಲಿದ್ದಾರೆ. ಕೆಪಿಸಿಸಿ ಸರ್ವ ಸದಸ್ಯರ ಸಭೆಯ ಬಳಿಕ ಹೋಟೆಲ್ ರ‍್ಯಾಡಿಸನ್ ಬ್ಲೂನಲ್ಲಿ ಸಂಜೆ 7ಕ್ಕೆ ಶಾಸಕಾಂಗ ಪಕ್ಷದ ಸಭೆಯೂ ನಡೆಯಲಿದೆ.

'ಯಾರೂ ಬಹಿರಂಗ ಹೇಳಿಕೆಗಳನ್ನು ನೀಡಬಾರದು. ಬಣ ರಾಜಕೀಯದ ಬಗ್ಗೆ ಹೈಕಮಾಂಡ್ ತೀವ್ರ ಅಸಮಾಧಾನಗೊಂಡಿದೆ. ಪಕ್ಷದಲ್ಲಿ ಒಡಕು ಮೂಡಿಸುವ ಚಟುವಟಿಕೆಗಳನ್ನು ತಕ್ಷಣವೇ ನಿಲ್ಲಿಸಬೇಕು. ಯಾರೂ ಲಕ್ಷ್ಮಣ ರೇಖೆ ದಾಟಬಾರದು' ಎಂದು ಎಚ್ಚರಿಕೆಯ ಸಂದೇಶ ಇದೇ ವೇಳೆ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

7ನೇ ಪುಟ ನೋಡಿ

'ಶಿವಕುಮಾರ್ ಸಿ.ಎಂ ಆಗಬೇಕು'

ಕಾಂಗ್ರೆಸ್ ಅಧಿಕಾರಕ್ಕೆ ಬರುವಲ್ಲಿ ಡಿ.ಕೆ. ಶಿವಕುಮಾರ್ ಅವರ ಶ್ರಮವಿದೆ. ಅವರೇ ಮುಖ್ಯಮಂತ್ರಿ ಆಗಬೇಕು ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ತಿಳಿಸಿದರು. ಸುದ್ದಿಗಾರರ ಜತೆ ಮಾತನಾಡಿ, 'ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಅರ್ಹತೆ ಇದೆ. ಕಾಂಗ್ರೆಸ್ ಹೈಕಮಾಂಡ್ ಯಾರ ಪರ ವಹಿಸಲಿದೆ ಎನ್ನುವುದನ್ನು ಕಾದು ನೋಡುತ್ತೇವೆ. ನಂತರ ಹೋರಾಟ' ಎಂದು ಅವರು ಹೇಳಿದರು.

ವಿಧಾನಸಭಾ ಚುನಾವಣೆಯ ಬಳಿಕ ನಡೆದ ಕೆಲ ಬೆಳವಣಿಗೆಗಳಿಂದ ಸಿದ್ದರಾಮಯ್ಯ ಅವರಿಗೆ ಸಿ.ಎಂ ಹುದ್ದೆ ಒಲಿದಿದೆ. ಕುರ್ಚಿ ಖಾಲಿಯಾದ ತಕ್ಷಣ ಶಿವಕುಮಾರ್ ಸಿ.ಎಂ ಆಗಲಿದ್ದಾರೆ
ಬಸವರಾಜು ವಿ. ಶಿವಗಂಗಾ, ಶಾಸಕ

ಸಿ.ಎಂ ಕುರ್ಚಿ ಖಾಲಿ ಇಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದು, ಅವರೇ ಮುಂದುವರಿಯುತ್ತಾರೆ
ಎಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವ

ಅಧ್ಯಕ್ಷಗಿರಿ ಕೊಡ್ತಾರೆ ಅಂದ್ರೆ ಸಚಿವ ಸ್ಥಾನ ಬಿಡಲು ಸಿದ್ಧ. ಎಲ್ಲೂ ಅರ್ಜಿ ಹಾಕೊಂಡು ಕೇಳುವ ಪ್ರಮೇಯ ಇಲ್ಲ
ಕೆ.ಎನ್. ರಾಜಣ್ಣ
ಸಹಕಾರ ಸಚಿವ

ಏಪ್ರಿಲ್ ಒಳಗೆ ಜೆಡಿಎಸ್‌ಗೆ ನೂತನ ರಾಜ್ಯಾಧ್ಯಕ್ಷ

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೆ ಇದೇ ಏಪ್ರಿಲ್ ಒಳಗೆ ಚುನಾವಣೆ ನಡೆಸಲು ಪಕ್ಷವು ತೀರ್ಮಾನಿಸಿದೆ. ಅದಕ್ಕೂ ಮುನ್ನ ಪಕ್ಷದ ಜಿಲ್ಲಾ ಘಟಕಗಳ ಪದಾಧಿಕಾರಿಗಳ ಚುನಾವಣೆ ನಡೆಯಲಿದೆ.

ನಗರದಲ್ಲಿನ ಪಕ್ಷದ ಕೇಂದ್ರ ಕಚೇರಿ ಜೆ.ಪಿ.ಭವನದಲ್ಲಿ ಭಾನುವಾರ ನಡೆದ ಜೆಡಿಎಸ್ ಸಾಂಸ್ಥಿಕ ಚುನಾವಣೆ ಕುರಿತ ಸಭೆಯಲ್ಲಿ ಈ ತೀರ್ಮಾನವಾಗಿದೆ. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹೊರತುಪಡಿಸಿ ಉಳಿದ ಬಹುತೇಕ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಘಟಕಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು. ಎಚ್.ಡಿ.ದೇವೇಗೌಡ, ನಿಖಿಲ್ ಕುಮಾರಸ್ವಾಮಿ ಹಾಜರಿದ್ದರು.

'ಪಕ್ಷದ ಚುನಾವಣೆ ಮತ್ತು ಸದಸ್ಯತ್ವ ನೋಂದಣಿ ಕುರಿತ ಚರ್ಚೆಗಿಂತ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಸಂಬಂಧವೇ ಹೆಚ್ಚು ಚರ್ಚೆ ನಡೆಯಿತು' ಎಂದು ಪಕ್ಷದ ಮೂಲಗಳು ಹೇಳಿವೆ.

7ನೇ ಪುಟ ನೋಡಿ

ಪಕ್ಷದ ಯಾವ ಶಾಸಕರೂ ಆಪರೇಷನ್ ಹಸ್ತಕ್ಕೆ ಬಲಿಯಾಗುವುದಿಲ್ಲ. ಯಾರಿಗೂ ಅಂತಹ ಗತಿ ಬಂದಿಲ್ಲ. ಪಕ್ಷವನ್ನು ಯಾರೂ ಏನೂ ಮಾಡಲಾಗುವುದಿಲ್ಲ
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹಸುಗಳ ಕೆಚ್ಚಲು ಕೊಯ್ದು, ಕಾಲುಗಳಿಗೆ ಮಚ್ಚಿನೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ವಿನಾಯಕ ನಗರದ ಓಲ್ಡ್ ಪೆನ್ಷನ್ ಮೊಹಲ್ಲಾದ ರಸ್ತೆ ಬದಿ ಶೆಡ್‌ನಲ್ಲಿ ಮಲಗಿದ್ದ ಮೂರು ಹಸುಗಳ ಕೆಚ್ಚಲು ಕೊಯ್ದು, ಮಚ್ಚಿನಿಂದ ಕಾಲಿಗೆ ಶನಿವಾರ ತಡರಾತ್ರಿ ಹೊಡೆಯಲಾಗಿದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಹಸುಗಳಿಗೆ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಕಿಡಿಗೇಡಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿ ಸ್ಥಳೀಯರು, ಬಿಜೆಪಿ ಮುಖಂಡರು ಇಲ್ಲಿ ಜಮಾಯಿಸಿದ್ದು, ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ದುಷ್ಕೃತ್ಯಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

5ನೇ ಪುಟ ನೋಡಿ

ಹಸು ಕೊಡಿಸಿದ ಸಚಿವ ಜಮೀರ್

ಸ್ಥಳೀಯ ಶಾಸಕರೂ ಆಗಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಕಾಟನ್ ಪೇಟೆ ಪಶು ಆಸ್ಪತ್ರೆಗೆ ಭೇಟಿ ನೀಡಿ ಹಸುಗಳ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಂಡರು.

'ನೀಡಿದ್ದ ಭರವಸೆಯಂತೆ ಕರ್ಣ ಅವರಿಗೆ ಭಾನುವಾರವೇ ಮೂರು ಹಸುಗಳನ್ನು ಕೊಡಿಸಿದ್ದಾರೆ' ಎಂದು ಸಚಿವರ ಕಚೇರಿ ಮೂಲಗಳು ತಿಳಿಸಿವೆ.

₹7,000 ಕೋಟಿ ಮೇಳಕ್ಕೆ ಉತ್ತರ ಪ್ರದೇಶ ಸರ್ಕಾರ ಮೀಸಲಿಟ್ಟ ಮೊತ್ತ

45 ಕೋಟಿ ಭಾಗವಹಿಸಲಿರುವ ಭಕ್ತರ ಅಂದಾಜು ಸಂಖ್ಯೆ

ಕುಂಭಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಪ್ರಯಾಗ್‌ರಾಜ್‌ನ ಗಂಗಾ ನದಿ ತಟದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವ ಮಹಾಕುಂಭ ಮೇಳ ಸೋಮವಾರದಿಂದ (ಜ.13) ಆರಂಭವಾಗಲಿದೆ.

ಫೆ.26ರವರೆಗೆ 45 ದಿನ ನಡೆಯುವ ಮೇಳದಲ್ಲಿ ಸಾಧು–ಸಂತರು ಸೇರಿ ದೇಶ–ವಿದೇಶಗಳಿಂದ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದ ಆಸುಪಾಸು 10 ಸಾವಿರ ಎಕರೆಯಷ್ಟು ವಿಸ್ತೀರ್ಣದಲ್ಲಿ ಸಿದ್ಧತೆ ಕೈಗೊಳ್ಳಲಾಗಿದ್ದು, 25 ವಲಯಗಳನ್ನಾಗಿ ವಿಂಗಡಿಸಲಾಗಿದೆ.

7ನೇ ಪುಟ ನೋಡಿ

ಜೀವನದ ಪ್ರತಿಕ್ಷಣವನ್ನೂ ಹೊಸ ಉತ್ಸಾಹದೊಂದಿಗೆ ಜೀವಿಸಿ. ಸದಾ ನಿಮ್ಮೊಂದಿಗಿದೆ ಅಮೃತ್ ನೋನಿ ಡಿ-ಪ್ಲಸ್
AMRITH NONI
ಕ್ಲಿನಿಕಲ್ ಟ್ರಯಲ್‌ನಲ್ಲಿ ಯಶಸ್ವಿ ಫಲಿತಾಂಶ
(CTRI Reg: CTRI/2022/03/041199)
Sugar Free Tonic

ಸ್ವಲ್ಪ ನಡೆದರೂ ತುಂಬಾ ಸುಸ್ತ್ ಆಗ್ತಿತ್ತು. ಪದೇ ಪದೇ ಮೂತ್ರ ವಿಸರ್ಜನೆ, ಬಾಯಾರಿಕೆ, ಪಾದ ಉರಿ, ಕಣ್ಣು ಮಂಜಾಗೋದು ಇದರಿಂದ ಜೀವನದಲ್ಲಿ ಉತ್ಸಾಹನೇ ಕಳೆದುಕೊಂಡು ಬಿಟ್ಟಿದ್ದೆ.
ಅಮೃತ್‌ನೋನಿ ಶುಗರ್ ಫ್ರೀ ಔಷಧಿ ತೆಗೆದುಕೊಳ್ಳೋಕೆ ಶುರು ಮಾಡಿದ ಮೇಲೆ ಇದ್ಯಾವ ಸಮಸ್ಯೇನು ಇಲ್ಲ ತುಂಬಾ ಆರೋಗ್ಯವಾಗಿದ್ದೀನಿ. ಹರೆಯದ ಕಾಲದಲ್ಲಿ ನನಗಿದ್ದ ಸಾಮರ್ಥ್ಯ ಈಗ ಮರಳ ಬಂದಿದೆ.

For Doctor Consultation : +91 99866 00304
ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ.
To order online: www.amrithnoni.com
ALSO AVAILABLE ON amazon.in | JioMart | Flipkart TATA 1mg | netmeds.com
ISO GMP

DRIVE HOME THE DYNAMIC
MERCEDES-BENZ GLA

CELEBRATING 200000 STARS IN INDIA
Chance to witness the Formula 1 Monaco Grand Prix*
Special Celebratory Benefit**
EMI starting from ₹45 000
8-Year Warranty on Engine & Transmission***
Visit Akshaya Motors for exclusive benefits. Valid for limited period only.
Akshaya Motors Showrooms & Service Centers: Bengaluru - Koramangala (New Showroom), Hosur Road (New Showroom) & Mysore Road - **+919513727171**
Mysuru - Hebbal Industrial Area - **+91 9019455055 | Hubballi** - PB Road Rayapur - **+919015089089**
Scan the QR code to connect with us on WhatsApp.
Website: www.akshayamotors.mercedes-benz.co.in (CIN: U34300KA1998PTC023605)
Accessories, colors and fitments shown may not be a part of standard specifications. For technical specifications of the model available in India, please refer to the product brochure or contact the nearest Mercedes-Benz Franchise Partner. The Mercedes-Benz GLA meet Bharat Stage VI emission norms. *Terms & conditions for a chance to witness the Formula 1 Monaco Grand Prix displayed on the Mercedes-Benz official website will apply. **Special celebratory benefits of up to ₹ 200 000/- as per applicability of terms & conditions. ***Warranty on Engine & Transmission are subject to prescribed Mercedes-Benz warranty terms & conditions of GLA. Finance is at the sole discretion of the financier, Mercedes-Benz Financial Services India Pvt. Ltd. (MBFSI) (CIN U67190TN2010FTC077890). EMI is subject to change.

ಕ್ಯಾನ್ಸರ್ ವಿರುದ್ಧ ಜಾಗೃತಿಗೆ ಬೈಕಥಾನ್

ಪೀಣ್ಯ ದಾಸರಹಳ್ಳಿ: ಇಲ್ಲಿನ ಪ್ರಕ್ರಿಯ ಆಸ್ಪತ್ರೆ ಮತ್ತು ಅದ್ವಿಕಾ ಕೇರ್ ಫೌಂಡೇಷನ್ ಸಹಯೋಗದಲ್ಲಿ ಕ್ಯಾನ್ಸರ್ ವಿರುದ್ಧ ಜಾಗೃತಿ ಮೂಡಿಸುವುದಕ್ಕಾಗಿ ಬೈಕ್ ರ‍್ಯಾಲಿ ಆಯೋಜಿಸಲಾಗಿತ್ತು.

ಪ್ರಕ್ರಿಯ ಆಸ್ಪತ್ರೆಯ ಸಿಇಒ ಡಾ. ಶ್ರೀನಿವಾಸ್ ಚಿರುಕುರಿ ಅವರು ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿ, 'ಕ್ಯಾನ್ಸರ್ ವಿರುದ್ಧ ಸವಾರಿ' ಎಂಬ ವಿಷಯದೊಂದಿಗೆ ಬೈಕಥಾನ್ ಆಯೋಜಿಸಿದ್ದೇವೆ' ಎಂದು ಹೇಳಿದರು.

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧೀಕರಣ, ಬೆಂಗಳೂರು ಪೀಠ, ಬೆಂಗಳೂರು
ಕಂಪನಿ ಅರ್ಜಿ ಸಿ.ಪಿ. ನಂ. 95/ಬಿಬಿ/2024
ಈ ವಿಚಾರದಲ್ಲಿ
ಕಂಪನಿ ಕಾಯ್ದೆ 2013 ರ ಕಲಂ 66ರ ಜೊತೆಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧೀಕರಣ ನಿಯಮ 2 ರೊಂದಿಗೆ (ಷೇರು ಬಂಡವಾಳದ ರಿಯಾಯಿತಿಗಾಗಿ ಕ್ರಮಗಳು) ನಿಯಮಗಳು, 2016
ಮತ್ತು
ಅಮೆಜ್ಹಾನ್ ಡೆವಲಪ್‌ಮೆಂಟ್ ಸೆಂಟರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿ ಕಾಯ್ದೆ 1956ರ ನಿಯಮಗಳಡಿಯಲ್ಲಿ ಸ್ಥಾಪಿಸಲ್ಪಟ್ಟ ಒಂದು ಕಂಪನಿ, ಇದರ ನೊಂದಾಯಿತ ಕಛೇರಿಯು, ನಂ. 26/1, ಬ್ರಿಗೇಡ್ ವರ್ಲ್ಡ್ ಟ್ರೇಡ್ ಸೆಂಟರ್, 10ನೇ ಮಹಡಿ, ಡಾ: ರಾಜ್‌ಕುಮಾರ್ ರಸ್ತೆ, ಬೆಂಗಳೂರು, ಕರ್ನಾಟಕ – 560055.
ಪ್ರತಿನಿಧಿಸುವವರು ಇದರ ಅಧಿಕೃತ ಸಹಿದಾರರು ಪ್ರಿಯಾಂಕ ರಾಮಚಂದ್ರನ್ ...ಅರ್ಜಿದಾರ ಕಂಪನಿ
ಷೇರು ಬಂಡವಾಳದ ರಿಯಾಯಿತಿಗೆ ಸಂಬಂಬಂಧಿಸಿದಂತೆ ತಿಳುವಳಿಕೆ
ಅಮೆಜ್ಹಾನ್ ಡೆವಲಪ್‌ಮೆಂಟ್ ಸೆಂಟರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಇವರು ಮೇಲೆ ಶೀರ್ಷಿಕೆಯಲ್ಲಿ ಹೇಳಿರುವ ಕಂಪನಿ ಅರ್ಜಿಯನ್ನು ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧೀಕರಣ, ಬೆಂಗಳೂರು ಪೀಠ, ಬೆಂಗಳೂರು, ರವರ ಮುಂದೆ 14ನೇ ಸೆಪ್ಟೆಂಬರ್ 2024 ರಂದು ಅರ್ಜಿದಾರ ಕಂಪನಿ ಷೇರು ಬಂಡವಾಳವನ್ನು ರೂ. 2,25,880 ರಿಂದ ರೂ. 1,71,280 ಗಳಿಗೆ ರಿಯಾಯಿತಿಯನ್ನು ದೃಢೀಕರಿಸುವ ಸಲುವಾಗಿ ದಾಖಲಿಸಿರುತ್ತಾರೆ.
ಸಾಲ ಕೊಡಲಾದ ಪ್ರತಿಯೊಬ್ಬರಿಗೆ ವೈಯಕ್ತಿಕವಾಗಿ ತಿಳುವಳಿಕೆಗಳನ್ನು ಜಾರಿ ಮಾಡಲಾಗಿದೆ. 31ನೇ ಆಗಸ್ಟ್ 2024 ರಂದಿಗೆ ಅರ್ಜಿದಾರ ಕಂಪನಿ ಸಾಲ ಕೊಟ್ಟವರ ಪಟ್ಟಿಯನ್ನು ಸಿದ್ದಪಡಿಸಿ ಕಂಪನಿ ನೊಂದಾಯಿತ ಕಛೇರಿಯಲ್ಲಿ ಸೋಮವಾರದಿಂದ ಶುಕ್ರವಾರದ ದಿನಗಳಲ್ಲಿ ಬೆಳಿಗೆ 11 ಗಂಟೆ ಯಿಂದ ಸಂಜೆ 4 ಗಂಟೆಯ ಅವಧಿಯಲ್ಲಿ ಎಲ್ಲ ಕೆಲಸದ ದಿನಗಳಂದು ಪರಿಶೀಲನೆಗಾಗಿ ಲಭ್ಯಗೊಳಿಸುವುದು.
ಒಂದು ವೇಳೆ ಯಾವುದೇ ಸಾಲ ಕೊಟ್ಟವರು ಕಂಪನಿ ಅರ್ಜಿಗೆ ಅಥವಾ ಸಾಲಕೊಟ್ಟವರ ಪಟ್ಟಿಯಲ್ಲಿರುವ ವಿವರಗಳಿಗೆ ಯಾವುದೇ ತಕರಾರನ್ನು ಸಲ್ಲಿಸುವುದಾದಲ್ಲಿ (ಪೂರಕ ದಸ್ತಾವೇಜುಗಳೊಂದಿಗೆ) ಅದನ್ನು ಕಳುಹಿಸುವುದು ಮತ್ತು ಸಾಲ ಕೊಟ್ಟವರ ಹೆಸರು ಮತ್ತು ವಿಳಾಸದ ಕುರಿತಾದ ವಿವರಗಳನ್ನು ಮತ್ತು ಅವರನ್ನು ಪ್ರತಿನಿಧಿಸುವ ಅಧಿಕಾರಿಗಳ ಹೆಸರು ಮತ್ತು ವಿಳಾಸಗಳನ್ನು ಯಾವುದಾದರೂ ಇದ್ದಲ್ಲಿ, ಭಾರತ, ಕರ್ನಾಟಕ 560055, ಬೆಂಗಳೂರು, ಮಲ್ಲೇಶ್ವರಂ (ಪ), ಡಾ: ರಾಜ್‌ಕುಮಾರ್ ರಸ್ತೆ, 10ನೇ ಮಹಡಿ, ಬ್ರಿಗೇಡ್ ವರ್ಲ್ಡ್ ಟ್ರೇಡ್ ಸೆಂಟರ್, ನಂ. 26/1 ರಲ್ಲಿರುವ ಅಮೆಜ್ಹಾನ್ ಸಹಕಾರಿ ಸಂಸ್ಥೆಯ ಕಾರ್ಯಕಾರಿ ತಂಡದ ಅಧಿಕೃತ ಸಹಿದಾರರಿಗೆ ಈ ತಿಳುವಳಿಕೆಯ ದಿನಾಂಕದಿಂದ 3 ತಿಂಗಳೊಳಗಾಗಿ ಕಳುಹಿಸುವುದು.
ಒಂದು ವೇಳೆ ಮೇಲೆ ನಮೂದಿಸಿದ ನಿಗದಿತ ಸಮಯದೊಳಗೆ ಸಾಲ ಕೊಟ್ಟವರ ಪಟ್ಟಿಯಲ್ಲಿರುವ ನಮೂದುಗಳಿಗೆ ಯಾವುದೇ ತಕರಾರನ್ನು ಪಡೆಯದಿದ್ದಲ್ಲಿ, ಮೇಲ್ಕಂಡ ಅರ್ಜಿ ಅಡಿಯಲ್ಲಿ ಅರ್ಜಿದಾರ ಕಂಪನಿ ಷೇರು ಬಂಡವಾಳವನ್ನು ಇಳಿಸಲು ನಡೆಸಿದ ಎಲ್ಲಾ ನಡವಳಿಗಳು ಸರಿಯಾಗಿದೆ ಎಂದು ಪರಿಗಣಿಸಲಾಗುವುದು.
ಈ ಮೂಲಕ ಮುಂದುವರಿದು ಸೂಚಿಸುವುದೇನೆಂದರೆ, ಈ ಪ್ರಕರಣವು 3ನೇ ಏಪ್ರಿಲ್ 2025 ರಂದು ನಿಗದಿಪಡಿಸಲಾಗಿದ್ದು, ನ್ಯಾಯಮಂಡಳಿಯು ಅರ್ಜಿಯನ್ನು ವಿಚಾರಣೆ ಮಾಡುತ್ತದೆ. ಒಂದು ವೇಳೆ ಯಾವುದೇ ಸಾಲ ಕೊಟ್ಟವರು ವಿಚಾರಣೆಗೆ ಹಾಜರಾಗುವ ಇರಾದೆಯನ್ನು ಹೊಂದಿದ್ದಲ್ಲಿ ಸದರಿ ಸಾಲ ಕೊಟ್ಟವರು ಅವರುಗಳ ಕೋರಿಕೆಯನ್ನು ಒಂದು ವೇಳೆ ಯಾವುದೇ ತಕರಾರು ಇದ್ದಲ್ಲಿ ಅದರೊಂದಿಗೆ ಸಲ್ಲಿಸುವುದು.
ಅಮೆಜ್ಹಾನ್ ಡೆವಲಪ್‌ಮೆಂಟ್ ಸೆಂಟರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್,
ಪ್ರತಿನಿಧಿಸುವವರು ಅವರ ವಕೀಲರುಗಳು,
ಎಝುಡ್‌ಬಿ & ಪಾರ್ಟನರ್ಸ್
37 ಕನ್ನಿಂಗ್‌ಹ್ಯಾಂ, 5ನೇ ಮಹಡಿ
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560052

ಸಾಂವಿಧಾನಿಕ ಸಂಘರ್ಷಕ್ಕೆ ದಾರಿ: ಗೃಹ ಸಚಿವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಪತ್ರ

ಸಿ.ಟಿ.ರವಿ ಪ್ರಕರಣ ಸಿಐಡಿಗೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಸದನದೊಳಗೆ ಅವಾಚ್ಯ ಪದಗಳಿಂದ ನಿಂದಿಸಿದರು ಎಂಬ ಆರೋಪದ ಪ್ರಕರಣದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗದ ನಡುವಣ ಸಂಘರ್ಷ ಮತ್ತಷ್ಟು ಹೆಚ್ಚಾಗಿದೆ. ಈ ಸಂಬಂಧ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾತಿಗೆ ಗೃಹ ಸಚಿವ ಜಿ.ಪರಮೇಶ್ವರ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ಬಸವರಾಜ ಹೊರಟ್ಟಿ

'ಸದನದಲ್ಲಿ ತೀರ್ಮಾನವಾದ ಪ್ರಕರಣವನ್ನು ಸಿಐಡಿಗೆ ವಹಿಸಿದ್ದು ಸರಿಯಲ್ಲ. ಇದು ಸಾಂವಿಧಾನಿಕ ಸಂಘರ್ಷಕ್ಕೆ ಕಾರಣವಾಗುತ್ತದೆ' ಎಂದು ಬಸವರಾಜ ಹೊರಟ್ಟಿ ಅವರು ಜಿ.ಪರಮೇಶ್ವರ ಅವರಿಗೆ ಪತ್ರ ಬರೆದಿದ್ದಾರೆ.

ಅವಾಚ್ಯ ಶಬ್ದ ಬಳಕೆ ಸಂಬಂಧ ಯಾವುದೇ ಸಾಕ್ಷ್ಯ ಇಲ್ಲ ಎಂದು ತಾವು ತೀರ್ಮಾನ ಮಾಡಿದ ನಂತರವೂ ಸರ್ಕಾರವು ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿದ್ದರ ಬಗ್ಗೆ ಹೊರಟ್ಟಿ ಅವರು ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಗೃಹ ಸಚಿವರಿಗೆ ಬರೆದ ಪತ್ರದಲ್ಲಿ, 'ಸಭಾಪತಿಯ ಅಧಿಕಾರಕ್ಕೆ ಚ್ಯುತಿ ಬರುವಂತೆ ಕಾರ್ಯಾಂಗ ವರ್ತಿಸಬಾರದು. ಸದನದ ಹಾಗೂ ಸಭಾಪತಿಯ ಸಾರ್ವಭೌಮತ್ವವನ್ನು ಬಲಿ ಕೊಡಬಾರದು. ರೂಲಿಂಗ್ ನೀಡಿದ ಬಳಿಕವೂ ಸಿಐಡಿ ತನಿಖೆಗೆ ಒಪ್ಪಿಸುವ ಔಚಿತ್ಯವೇನಿತ್ತು' ಎಂದು ಪ್ರಶ್ನಿಸಿದ್ದಾರೆ.

'ಸುವರ್ಣ ವಿಧಾನಸೌಧದ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ಸಭಾಪತಿಯ ಪೀಠದಿಂದ ತೀರ್ಪು ನೀಡುವುದಕ್ಕೂ ಮುನ್ನ ಸಂವಿಧಾನ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳು, ಕೌಲ್ ಅಂಡ್ ಶಕ್ದರ್ ಅವರ 'ಪ್ರಾಕ್ಟಿಸ್ ಅಂಡ್ ಪ್ರೊಸಿಜರ್ ಆಫ್ ಪಾರ್ಲಿಮೆಂಟ್' ಅನ್ನು ಪರಾಮರ್ಶಿಸಲಾಗಿದೆ' ಎಂದು ವಿವರಿಸಿದ್ದಾರೆ.

'ಸಂಸದೀಯ ಪದ್ಧತಿ, ಪ್ರಕ್ರಿಯೆ ಹಾಗೂ ಸಂವಿಧಾನದ ಮೂಲಕ ಶಾಸಕಾಂಗಕ್ಕೆ ಮತ್ತು ಸಭಾಪತಿಗೆ ದತ್ತವಾಗಿರುವ ಅಧಿಕಾರಕ್ಕೆ ಚ್ಯುತಿ ಬರುವ ರೀತಿಯಲ್ಲಿ ಕಾರ್ಯಾಂಗವು ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿದೆ. ಈ ಮೂಲಕ ಸಾಂವಿಧಾನಿಕ ಸಂಘರ್ಷಕ್ಕೆ ಅವಕಾಶ ಮಾಡಿಕೊಟ್ಟಿದೆ. ತಾವೂ ಹಲವು ಸಾಂವಿಧಾನಿಕ ಹುದ್ದೆಗಳನ್ನು ನಿಭಾಯಿಸಿದ ಅನುಭವ ಹೊಂದಿದ್ದೀರಿ. ಇಂತಹ ಸಂಘರ್ಷಕ್ಕೆ ಅವಕಾಶ ಮಾಡಿಕೊಡದಂತೆ ಈ ಪ್ರಕರಣವನ್ನು ನಿಭಾಯಿಸುತ್ತೀರಿ ಎಂಬ ವಿಶ್ವಾಸದಲ್ಲಿದ್ದೇನೆ' ಎಂದಿದ್ದಾರೆ.

'ಕಾನೂನಿನ ಚೌಕಟ್ಟಿನಲ್ಲಿ ತನಿಖೆ'

ಜಿ.ಪರಮೇಶ್ವರ

'ಸಭಾಪತಿ ಅವರು ಕಾನೂನಿನ ಚೌಕಟ್ಟಿನಲ್ಲೇ ತೀರ್ಪು ನೀಡಿದ್ದಾರೆ. ನಾವೂ ಕಾನೂನಿನ ಚೌಕಟ್ಟಿನಲ್ಲೇ ತನಿಖೆ ನಡೆಸುತ್ತಿದ್ದೇವೆ. ಅವರ ಪತ್ರವನ್ನು ನೋಡಬೇಕು. ಆನಂತರ ಕಾನೂನು ಸಲಹೆ ಪಡೆಯುತ್ತೇವೆ. ಕಾನೂನು ಚೌಕಟ್ಟಿನಲ್ಲಿ ಏನು ಮಾಡಬೇಕೋ ಮಾಡುತ್ತೇವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, 'ಶಾಸಕಾಂಗದ ಸಾರ್ವಭೌಮತೆಗೆ ಧಕ್ಕೆಯಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಈ ಪ್ರಕರಣದಲ್ಲಿ ಅನವಶ್ಯಕ ಗೊಂದಲ ಇದ್ದ ಕಾರಣ ಸಿಐಡಿ ತನಿಖೆಗೆ ಒಪ್ಪಿಸಿದ್ದೇವೆ. ಇದರಿಂದ ಸಾಂವಿಧಾನಿಕ ಸಂಘರ್ಷವೇನೂ ಆಗುವುದಿಲ್ಲ' ಎಂದು ಸಭಾಪತಿ ಅವರ ಟೀಕೆಯನ್ನು ಅಲ್ಲಗೆಳೆದರು.

ಕಾರುಗಳ ಮಧ್ಯೆ ಡಿಕ್ಕಿ ಆರು ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಕೆಎಫ್‌ಸಿ ಜಂಕ್ಷನ್ ಬಳಿ ಭಾನುವಾರ ಸಂಭವಿಸಿದ ಸರಣಿ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಸೇರಿ ಆರು ಮಂದಿ ಗಾಯಗೊಂಡಿದ್ದಾರೆ.

ಇಂದಿರಾನಗರದ ಕೆಎಫ್‌ಸಿ ಜಂಕ್ಷನ್ ಕಡೆಗೆ ಹೊರಟಿದ್ದ ಔಡಿ ಕಾರು, ಮುಂದೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಬಳಿಕ ಚಾಲಕನ ನಿಯಂತ್ರಣ ತಪ್ಪಿದ ಕಾರು, ರಸ್ತೆ ಮಧ್ಯದ ವಿಭಜಕವನ್ನು ಹಾದು ಎದುರು ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಎರಡು ಕಾರುಗಳು ಜಖಂಗೊಂಡಿವೆ. ಕಾರಿನಲ್ಲಿದ್ದ ಐವರು ಪ್ರಯಾಣಿಕರು ಹಾಗೂ ಬೈಕ್ ಸವಾರ ಗಾಯಗೊಂಡಿದ್ದಾರೆ.

ಜೀವನಭೀಮಾ ನಗರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ನಗರದಲ್ಲಿ ಏರ್ಪಡಿಸಿದ್ದ 'ಕೈಗಾರಿಕಾಶೈಕ್ಷಣಿಕ ಸಮಾವೇಶ'ದಲ್ಲಿ ಬಿಎನ್‌ಎಂಟಿಯು ಜಿಟಿಟಿಸಿಯೊಂದಿಗೆ ಶೈಕ್ಷಣಿಕ ಒಪ್ಪಂದ ಮಾಡಿಕೊಂಡಿತು. ಸಚಿವರಾದ ಡಾ.ಎಂ.ಸಿ. ಸುಧಾಕರ್, ಡಾ. ಶರಣ ಪ್ರಕಾಶ ಪಾಟೀಲ, ಪ್ರಿಯಾಂಕ್ ಖರ್ಗೆ ಮತ್ತು ಬಿಎನ್‌ಎಂಐಟಿ ಅಧ್ಯಕ್ಷ ನಾರಾಯಣರಾವ್ ಮಾನೆ, ಪ್ರಾಧ್ಯಾಪಕರಾದ ಯಶಾ ಜ್ಯೋತಿ, ಸ್ಮಿತಾ ಗಾಯಿತ್ರಿ ಉಪಸ್ಥಿತರಿದ್ದರು

ಒಂದು ವಾರದೊಳಗೆ ಉತ್ತರ ನೀಡುವಂತೆ ಡಿಸಿಪಿ ಸೂಚನೆ

ಬಂದೂಕು ಪರವಾನಗಿ: ದರ್ಶನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್ ಅವರ ಬಳಿಯಿರುವ ಬಂದೂಕು ಪರವಾನಗಿ (ಗನ್ ಲೈಸೆನ್ಸ್) ರದ್ದುಗೊಳಿಸಲು ಪೊಲೀಸ್ ಇಲಾಖೆ ಮುಂದಾಗಿದೆ.

ದರ್ಶನ್

ಈ ಸಂಬಂಧ ದರ್ಶನ್‌ಗೆ ನೋಟಿಸ್ ಜಾರಿ ಮಾಡಿರುವ ಪೊಲೀಸ್ ಆಡಳಿತ ವಿಭಾಗದ ಡಿಸಿಪಿ ಪದ್ಮಿನಿ ಸಾಹೂ, ಗನ್ ಲೈಸೆನ್ಸ್ ಬಗ್ಗೆ ವಾರದಲ್ಲಿ ಸ್ಪಷ್ಟನೆ ನೀಡುವಂತೆ ಸೂಚಿಸಿದ್ದಾರೆ.

'ಕೊಲೆ ಪ್ರಕರಣದ ಆರೋಪಿ ಆಗಿರುವ ನೀವು ಜಾಮೀನಿನ ಮೇಲೆ ಹೊರಗಿರುವುದರಿಂದ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿವೆ. ನಿಮ್ಮ ಬಳಿಯಿರುವ ಪರವಾನಗಿ ಹೊಂದಿರುವ ಬಂದೂಕು ಬಳಸಿ ಸಾಕ್ಷಿಗಳನ್ನು ಬೆದರಿಸುವ ಬಗ್ಗೆ ಅನುಮಾನಗಳಿವೆ. ಶಸ್ತ್ರಾಸ್ತ್ರ ಪರವಾನಗಿ ರದ್ದು ಮಾಡಬೇಕಿದೆ. ಆದ್ದರಿಂದ ಈ ಬಗ್ಗೆ ಒಂದು ವಾರದೊಳಗೆ ಉತ್ತರ ನೀಡಬೇಕು' ಎಂದು ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಜನವರಿ 7ರಂದು ಕಳುಹಿಸಿರುವ ನೋಟಿಸ್ ಅನ್ನು ದರ್ಶನ್ ಜನವರಿ 10ರಂದು ಸ್ವೀಕರಿಸಿದ್ದಾರೆ.

'ನೋಟಿಸ್‌ಗೆ ಉತ್ತರ ನೀಡಿದ ಬಳಿಕ ಬಂದೂಕು ಪರವಾನಗಿ ರದ್ದುಪಡಿಸುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಹಣ ನೀಡಲು ಮನವಿ

ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ವೇಳೆ ಪೊಲೀಸರು ಜಪ್ತಿ ಮಾಡಿರುವ ತಮ್ಮ ಹಣವನ್ನು ವಾಪಸ್ ನೀಡಲು ಸೂಚಿಸುವಂತೆ ಆರೋಪಿಗಳಾದ ದರ್ಶನ್ ಹಾಗೂ ಪ್ರದೂಷ್ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ದರ್ಶನ್ ಮತ್ತು ಅವರ ಪತ್ನಿ ವಿಜಯಲಕ್ಷ್ಮಿ ಹಾಗೂ ಮತ್ತೊಬ್ಬ ಆರೋಪಿ ಪ್ರದೋಷ್ ಮನೆಯಲ್ಲಿದ್ದ ₹40 ಲಕ್ಷ ನಗದನ್ನು ಪೊಲೀಸರು ಜಪ್ತಿ ಮಾಡಿದ್ದರು.

ಪ್ರಸ್ತುತ ಹಣದ ತುರ್ತು ಅವಶ್ಯಕತೆ ಇದೆ ಎಂಬ ಕಾರಣದೊಂದಿಗೆ ಜಪ್ತಿ ಮಾಡಲಾದ ಹಣವನ್ನು ವಾಪಸ್ ನೀಡುವಂತೆ ಕೋರಿ ತಮ್ಮ ವಕೀಲರ ಮೂಲಕ ಆರೋಪಿಗಳು ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿ ಕುರಿತು ಆಕ್ಷೇಪಣೆ ಸಲ್ಲಿಸುವಂತೆ ಎಸ್‌ಪಿಪಿ ಅವರಿಗೆ ಕೋರ್ಟ್ ಸೂಚಿಸಿದೆ. ಮತ್ತೊಂದೆಡೆ ಪೊಲೀಸರು ಜಪ್ತಿ ಮಾಡಿರುವ ಹಣದ ಕುರಿತು ತನಿಖೆಯ ಅಗತ್ಯವಿದ್ದು, ತನ್ನ ವಶಕ್ಕೆ ನೀಡುವಂತೆ ಆದಾಯ ತೆರಿಗೆ ಇಲಾಖೆ ಅರ್ಜಿ ಸಲ್ಲಿಸಿದೆ. ಆದಾಯ ತೆರಿಗೆ ಇಲಾಖೆಯ ಅರ್ಜಿ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ದರ್ಶನ್ ಪರ ವಕೀಲರಿಗೆ ಕೋರ್ಟ್ ಸೂಚಿಸಿದೆ.

ಹುಟ್ಟು ಹಬ್ಬ ದಿನವೇ ಸಂಭವಿಸಿದ ದುರಂತ

ಟ್ರಕ್ ಹರಿದು ಬಾಲಕ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇದಾಧ್ಯಯನ ಮಾಡಲು ಆಂಧ್ರಪ್ರದೇಶದಿಂದ ನಗರಕ್ಕೆ ಬಂದಿದ್ದ 12 ವರ್ಷದ ಬಾಲಕ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಹೆಣ್ಣೂರು ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಜನ್ಮದಿನದ ಸಂಭ್ರಮದಲ್ಲಿದ್ದ ಚಿತ್ತೂರು ನಿವಾಸಿ ಭಾನುತೇಜನ ತಲೆಯ ಮೇಲೆ ಟ್ರಕ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟರೆ, ಗಾಯಗೊಂಡಿರುವ ದ್ವಿಚಕ್ರ ವಾಹನ ಸವಾರ ಚಕ್ರಧರಣ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಚಿತ್ತೂರಿನ ಭಾನುತೇಜ ತನ್ನ ಸಹೋದರನೊಂದಿಗೆ ಒಂದು ತಿಂಗಳಿನಿಂದ ವೇದಗುರು ಚಕ್ರಧರಣ್ ಅವರ ಬಳಿ ಆರ್.ಟಿ.ನಗರದ ಸತ್ಯಾಂಜನೇಯ ಸ್ವಾಮಿ ದೇವಸ್ಥಾನದಲ್ಲಿದ್ದುಕೊಂಡು ವೇದಾಧ್ಯಯನ ಮಾಡಿಕೊಂಡಿದ್ದ. ಶನಿವಾರ ಭಾನುತೇಜನ ಹುಟ್ಟುಹಬ್ಬವಿದ್ದರಿಂದ ಇಬ್ಬರೂ ಹೊರಮಾವು ಬಳಿ ಇರುವ ಅಕ್ಕನ ಮನೆಗೆ ಹೋಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಹುಟ್ಟುಹಬ್ಬ ಆಚರಿಸಿದ ಬಳಿಕ ಆರ್.ಟಿ.ನಗರ ಕಡೆಗೆ ತೆರಳುತ್ತಿದ್ದ ಚಕ್ರಧರಣ್ ಅವರ ದ್ವಿಚಕ್ರ ವಾಹನಕ್ಕೆ ಹೆಣ್ಣೂರು ಬಂಡೆ ಮುಖ್ಯ ರಸ್ತೆಯಲ್ಲಿ ಟ್ರಕ್ ಡಿಕ್ಕಿಯಾಗಿತ್ತು. ನೆಲಕ್ಕೆ ಬಿದ್ದ ಭಾನುತೇಜನ ತಲೆ ಮೇಲೆ ಟ್ರಕ್ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಚಕ್ರಧರಣ್ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ' ಎಂದು ಹೇಳಿದರು.

ಭಾನುತೇಜ

ಮೃತ ಬಾಲಕನ ಪೋಷಕರು ನಗರಕ್ಕೆ ಬಂದಿದ್ದು, ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಹಸ್ತಾಂತರಿಸಲಾಯಿತು.

ಈ ಬಗ್ಗೆ ಹೆಣ್ಣೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ಬಳಿಕ ಪರಾರಿ ಆಗಿರುವ ಟ್ರಕ್ ಚಾಲಕನಿಗಾಗಿ ಶೋಧ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಆನ್‌ಲೈನ್ ಗೇಮ್ ಗೀಳು ಇಬ್ಬರು ಆತ್ಮಹತ್ಯೆ

ಬೆಂಗಳೂರು: ಆನ್‌ಲೈನ್ ಆಟದ ಗೀಳಿಗೆ ಬಿದ್ದು ಒಂದೇ ದಿನ ಇಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ನಗರದಲ್ಲಿ ವರದಿಯಾಗಿದೆ.

ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಲ್ಲಿಕಾರ್ಜುನ (25) ಹಾಗೂ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಟೊ ಚಾಲಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ಸಹಾಯಕನಾಗಿರುವ ವಿಜಯನಗರದ ಮಲ್ಲಿಕಾರ್ಜುನ, ನಾಲ್ಕು ವರ್ಷಗಳಿಂದ ಆನ್‌ಲೈನ್ ಆಟವಾಡುವ ಹವ್ಯಾಸ ಹೊಂದಿದ್ದರು. ಲಕ್ಷಾಂತರ ರೂಪಾಯಿ ಗೇಮಿಂಗ್ ಆ್ಯಪ್‌ನಲ್ಲಿ ಕಳೆದುಕೊಂಡಿದ್ದರು. ಆರ್ಥಿಕ ಸಂಕಷ್ಟ ತಾಳಲಾರದೆ ಶನಿವಾರ ತನ್ನ ಪಿ.ಜಿ.ಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ವೈಟ್ ಫೀಲ್ಡ್ ವಿಭಾಗದ ಡಿಸಿಪಿ ಡಾ. ಶಿವಕುಮಾರ್ ಗುಣಾರೆ ಮಾತನಾಡಿ, 'ಆನ್‌ಲೈನ್ ಗೇಮ್ಸ್‌ನಲ್ಲಿ ಹಣ ಹೂಡಿ ಆರ್ಥಿಕ ಸಂಕಷ್ಟ ತಾಳಲಾರದೆ ಆಟೊ ಚಾಲಕರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳ್ಳಂದೂರು ಠಾಣಾ ವ್ಯಾಪ್ತಿಯಲ್ಲಿ ಪತ್ನಿ ಹಾಗೂ ಮಕ್ಕಳೊಂದಿಗೆ ವಾಸವಿದ್ದ ಚಾಲಕ, ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ತಿಳಿಸಿದರು.

ಅನುದಾನವಿಲ್ಲ, ಮೂಲಸೌಕರ್ಯ ಕಲ್ಪಿಸಲಾಗುತ್ತಿಲ್ಲ: ಶಾಸಕ

ಕೆ.ಆರ್.ಪುರ: 'ಅನುದಾನವಿಲ್ಲದೆ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳು ಕಲ್ಪಿಸಲು ಆಗದಿರುವುದು ನೋವಿನ ಸಂಗತಿ' ಎಂದು ಶಾಸಕ ಬೈರತಿ ಬಸವರಾಜ್ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಕ್ಷೇತ್ರದ ಬಸವನಪುರದ ಹ್ಯಾಪಿ ಗಾರ್ಡನ್, ಒರಿಜಿನ್ ಬಡಾವಣೆ ಹಾಗೂ ಹೊರಮಾವಿನ ಹೊಯ್ಸಳನಗರದಲ್ಲಿ ಕಾವೇರಿ ನೀರು ಪೂರೈಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಸರ್ಕಾರದಲ್ಲಿ ಅನುದಾನವಿಲ್ಲದೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲು ಅನುದಾನ ನೀಡದೆ ತಾರತಮ್ಯ ಮಾಡಲಾಗುತ್ತಿದೆ. ಎರಡು ವರ್ಷಗಳಲ್ಲಿ ಕೇವಲ ₹10 ಕೋಟಿ ಅನುದಾನ ಮಾತ್ರ ನೀಡಿದ್ದಾರೆ. ಈ ಮೊತ್ತದಲ್ಲಿ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಒಂದು ವಾರ್ಡ್‌ಗೆ ಕನಿಷ್ಠ ₹25 ಕೋಟಿಯಿಂದ ₹30 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಹಲವಾರು ಬಾರಿ ಪತ್ರಗಳ ಮೂಲಕ ಮತ್ತು ಸಭೆಗಳಲ್ಲಿ ಮನವಿ ಮಾಡಿದ್ದೇನೆ. ಕ್ಷೇತ್ರ ವ್ಯಾಪ್ತಿಗೆ ₹10 ಕೋಟಿಯಷ್ಟೇ ಅನುದಾನ ನೀಡಿದ್ದಾರೆ. ಇದರಿಂದ ಸರ್ಕಾರ ಎಷ್ಟರ ಮಟ್ಟಿಗೆ ದಿವಾಳಿಯಾಗಿದೆ ಎಂಬುದು ಗೊತ್ತಾಗುತ್ತದೆ' ಎಂದು ವಾಗ್ದಾಳಿ ನಡೆಸಿದರು.

ವಾಹನ ಡಿಕ್ಕಿ: ಜಿಂಕೆ ಮರಿ ಸಾವು

ಗೌರಿಬಿದನೂರು: ನಗರದ ಬೈಪಾಸ್ ರಸ್ತೆಯಲ್ಲಿ ಶನಿವಾರ ರಾತ್ರಿ ವಾಹನವೊಂದು ಡಿಕ್ಕಿಯಾಗಿ ಎರಡು ವರ್ಷದ ಜಿಂಕೆ ಮರಿ ಸಾವಿಗೀಡಾಗಿದೆ.

ಜಿಂಕೆಯ ಕಳೇಬರ ಮರಣೋತ್ತರ ಪರೀಕ್ಷೆ ನಡೆಸಿ ಇಲಾಖೆ ಸುಪರ್ದಿಗೆ ಪಡೆಯಲಾಗಿದೆ ಎಂದು ಅರಣ್ಯಾಧಿಕಾರಿ ತಿಳಿಸಿದ್ದಾರೆ.

CONNECT

ನಮ್ಮ ಕೆಂಗೇರಿಯಲ್ಲಿ ಶ್ರೀ ಗುರು ಎಂಟರ್‌ಪ್ರೈಸಸ್ ವತಿಯಿಂದ
ಅಂತರಾಷ್ಟ್ರೀಯ ರೋಬೋಟಿಕ್ ಬರ್ಡ್ಸ್ ವರ್ಲ್ಡ್
"ಕಾಡು ಪಕ್ಷಿಗಳ ಲೋಕ"
ಶುಭಾರಂಭ ದಿನಾಂಕ 12-1-2025 ಭಾನುವಾರ
ಸಮಯ: ಸಂಜೆ 5:00 ರಿಂದ ರಾತ್ರಿ 9:00 ವರೆಗೆ
ಸ್ಥಳ: ಬಿ.ಎಂ.ಟಿ.ಸಿ ಬಸ್ ಸ್ಟ್ಯಾಂಡ್ ಪಕ್ಕ, ಕೆಂಗೇರಿ ಮೆಟ್ರೋ ಸ್ಟೇಷನ್, ಕೆಂಗೇರಿ, ಬೆಂಗಳೂರು-560060
ನಿಮಗೂ ನಿಮ್ಮ ಕುಟುಂಬ ಮತ್ತು ನಿಮ್ಮ ಸ್ನೇಹಿತರಿಗೂ ಆತ್ಮೀಯ ಸ್ವಾಗತ

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

TOURS & TRAVEL
Travel
VISIT BHUTAN, the most Wonderful Country with Expert Guide and Best Arrangements.
GANESH SHENOY
8310028157

DH Classifieds ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಮರು ಭೂಮಾಪನ ಯೋಜನೆ ರಾಜ್ಯದೆಲ್ಲೆಡೆ ವಿಸ್ತರಣೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): 'ಜಮೀನಿನ ಹಳೆ ದಾಖಲೆಗಳಿಗೆ ಆಧುನಿಕ ಸ್ಪರ್ಶ ನೀಡಲು ಕಂದಾಯ ಇಲಾಖೆ ರಾಜ್ಯದಲ್ಲೇ ಮೊದಲಿಗೆ ಉಯ್ಯಂಬಳ್ಳಿ ಹೋಬಳಿಯಲ್ಲಿ ಕೈಗೊಂಡಿದ್ದ ಮರು ಭೂಮಾಪನ ಯೋಜನೆಯನ್ನು ಕನಕಪುರ ತಾಲ್ಲೂಕು ಸೇರಿದಂತೆ, ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಮ್ಮ ಸ್ವಗ್ರಾಮ ದೊಡ್ಡಆಲಹಳ್ಳಿಯಲ್ಲಿ ಭಾನುವಾರ ಕಂದಾಯ ಇಲಾಖೆ ಹಮ್ಮಿಕೊಂಡಿದ್ದ, ಮರು ಭೂಮಾಪನ ಪ್ರಾಯೋಗಿಕ ಯೋಜನೆಯಡಿ ಸಿದ್ದಪಡಿಸಿರುವ ಡಿಜಿಟಲ್ ಪಹಣಿಗಳನ್ನು ಜಮೀನು ಮಾಲೀಕರಿಗೆ ವಿತರಣೆ ಹಾಗೂ ನಾಡ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹಿಂದೆ ಬ್ರಿಟಿಷರು ಭೂ ಮಾಪನ ಮಾಡಿ ದಾಖಲೆಗಳನ್ನು ಸೃಷ್ಟಿಸಿದ್ದರು. ಸಾಮಾನ್ಯರಿಗೆ ಅರ್ಥವಾಗದ ಭಾಷೆಯಲ್ಲಿದ್ದ ದಾಖಲೆಗಳಿಂದಾಗಿ ಜನ ಪೊಲೀಸ್ ಠಾಣೆ ಮೆಟ್ಟಿಲೇರುವುದು ಸಾಮಾನ್ಯವಾಗಿತ್ತು. ನಮ್ಮ ಸರ್ಕಾರ ಜಾರಿಗೆ ತಂದಿರುವ ತಂತ್ರಜ್ಞಾನ ಆಧಾರಿತ ಪ್ರಾಯೋಗಿಕ ಯೋಜನೆ ಯಶಸ್ವಿಯಾಗಿದೆ. ಇದರಿಂದ ಮುಂದಿನ ತಲೆಮಾರಿಗೆ ಅನುಕೂಲವಾಗಲಿದೆ' ಎಂದರು.

ವೈದ್ಯಕೀಯ ಕಾಲೇಜು: 'ತಾಲ್ಲೂಕಿನಲ್ಲಿ ಶೀಘ್ರ ವೈದ್ಯಕೀಯ ಕಾಲೇಜು ಆರಂಭವಾಗಲಿದೆ. ಈಗ ಕನಕಪುರದ ಕರಿಯಪ್ಪ ಕಾಲೇಜಿನಲ್ಲಿ ಕೃಷಿ ಕಾಲೇಜು ಆರಂಭಿಸಿದ್ದೇನೆ. ಕಾವೇರಿ ನದಿಯ ಸಂಗಮದಿಂದ 21 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಮಾಡಲಾಗಿದ್ದು, ಟೆಂಡರ್‌ಗೆ ಅನುಮತಿ ನೀಡಲಾಗಿದೆ. ಕ್ಷೇತ್ರದ 40 ಸಾವಿರ ಜನ ಬೆಂಗಳೂರಿನಲ್ಲಿದ್ದು, ವಲಸೆ ತಪ್ಪಿಸಲು ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು' ಎಂದು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕಂದಾಯ ಹಾಗೂ ಭೂ ದಾಖಲೆಗಳ ಇಲಾಖೆ ಆಯುಕ್ತ ಮಂಜುನಾಥ್ ಕೆ., 'ಮರು ಭೂಮಾಪನ ಪ್ರಾಯೋಗಿಕ ಯೋಜನೆಯಡಿ ಹಿಂದೆ ಇದ್ದ ಪಹಣಿಯ ಫಾರಂ- 16 ಅನ್ನು ಬದಲಿಸಿ ಫಾರಂ -16ಎ ಎಂದು ಮಾಡಿದ್ದೇವೆ. ಪಹಣಿಯಲ್ಲಿ ಜಮೀನಿನ ನಕ್ಷೆ, ಅಳತೆ, ಗೂಗಲ್ ಚಿತ್ರ ಸಹಿತ ನಿಮ್ಮ ಜಮೀನಿನ ಅಕ್ಕಪಕ್ಕದ ಜಮೀನು ಯಾವುದೆಂದು ಗೊತ್ತಾಗಲಿದೆ. ಪೋಡಿಯನ್ನು ಸರಳಗೊಳಿಸಲಾಗಿದೆ' ಎಂದರು.

'ಬೆಂಗಳೂರು ದಕ್ಷಿಣ ಜಿಲ್ಲೆ ಶೀಘ್ರ ಅಸ್ತಿತ್ವಕ್ಕೆ'

'ರಾಮನಗರ ಜಿಲ್ಲೆ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ದೆಹಲಿಗೆ ಕಳಿಸಲಾಗಿದೆ. ಶೀಘ್ರದಲ್ಲೇ ಬೆಂಗಳೂರು ದಕ್ಷಿಣ ಜಿಲ್ಲೆ ಅಸ್ತಿತ್ವಕ್ಕೆ ಬರಲಿದೆ' ಎಂದು ಉಪ ಮುಖ್ಯಮಂತ್ರಿ ಶಿವಕುಮಾರ್ ಹೇಳಿದರು.

'ಈ ವಿಚಾರಕ್ಕೆ ಸಂಬಂಧಿಸಿದಂತೆ ಕೆಲವು ಆಡಳಿತಾತ್ಮಕ ಪ್ರಕ್ರಿಯೆಗಳು ಬಾಕಿ ಇವೆ. ಈ ಕುರಿತು ಕೇಂದ್ರ ಸಚಿವರು ಹಾಗೂ ಪ್ರಧಾನಿಗೆ ಪತ್ರ ಬರೆಯುವೆ. ನಂತರ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಘೋಷಣೆಯಾಗಲಿದೆ. ರಾಮನಗರ ಜಿಲ್ಲಾ ಕೇಂದ್ರವಾಗಿಯೇ ಉಳಿಯಲಿದೆ' ಎಂದರು.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ರಸ್ತೆಯಲ್ಲಿ ಕಸ ತೆರವುಗೊಳಿಸಿ'

ಯಲಹಂಕ ರಸ್ತೆಯ ಪಕ್ಕದಲ್ಲಿ ಹಾಕಿರುವ ಕಸ

ಯಲಹಂಕ ವಿಧಾನಸಭೆ ಕ್ಷೇತ್ರದ ಕೆಂಪೇಗೌಡ ವಾರ್ಡ್ ಸಂಖ್ಯೆ 1ರ ಸುಗ್ಗಪ್ಪ ಬಡಾವಣೆಯ ಮೂರನೇ ರಸ್ತೆಯಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯರು ತಮ್ಮ ಮನೆಗಳಲ್ಲಿ ಉತ್ಪತ್ತಿ ಆಗುವ ಕಸವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿಕೊಂಡು ಬಂದು ಮುಖ್ಯ ರಸ್ತೆಯಲ್ಲಿ ಎಸೆದು ಹೋಗುತ್ತಿದ್ದಾರೆ. ಬೀದಿ ನಾಯಿಗಳು, ಬೀಡಾಡಿ ದನಗಳು ಕಸವನ್ನು ರಸ್ತೆಗೆ ಎಳೆದು ತರುತ್ತಿವೆ. ಇದರಿಂದ ಸಂಚಾರ ದಟ್ಟಣೆಯೂ ಹೆಚ್ಚುತ್ತಿದೆ. ಕೂಡಲೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ರಾಘವೇಂದ್ರ, ಸುಗ್ಗಪ್ಪ ಬಡಾವಣೆ,

'ಕುಮಾರಕೃಪಾ: ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ನಗರದ ಕುಮಾರಕೃಪಾ ಮುಖ್ಯ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿರುವ ಚಪ್ಪಡಿ ಕಲ್ಲುಗಳು ಕುಸಿದು ಬಿದ್ದಿವೆ. ಈ ಪಾದಚಾರಿ ಮಾರ್ಗದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾಕ್ಕೆ ಸಂಪರ್ಕ ಕಲ್ಪಿಸುವ ಹಾದಿಯ ದುಃಸ್ಥಿತಿ ಇದಾಗಿದೆ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ವೃದ್ಧರು, ಮಕ್ಕಳು ಮತ್ತು ಮಹಿಳೆಯರು ಮುಖ್ಯರಸ್ತೆಯಲ್ಲಿ ಸಂಚರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಸಂಬಂಧಪಟ್ಟ ಬಿಬಿಎಂಪಿ ಅಧಿಕಾರಿಗಳು ಇಲ್ಲಿನ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಗಾಂಧಿ ನಗರ

ಕುಮಾರಕೃಪಾ ಮುಖ್ಯರಸ್ತೆ ಪಾದಚಾರಿ ಮಾರ್ಗಕ್ಕೆ ಅಳವಡಿಸಿರುವ ಚಪ್ಪಡಿ ಕಲ್ಲು ಕುಸಿದಿರುವುದು

'ರಸ್ತೆಯಲ್ಲಿರುವ ವಿದ್ಯುತ್ ಕಂಬ ತೆರವುಗೊಳಿಸಿ'

ಸರ್ವಜ್ಞನಗರ ವಿಧಾನಸಭೆ ಕ್ಷೇತ್ರದ ಕಮ್ಮನಹಳ್ಳಿ ವಾರ್ಡ್ ಸಂಖ್ಯೆ 28ರ ರಾಮಸ್ವಾಮಿಪಾಳ್ಯದ ಹಳೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಮಧ್ಯದಲ್ಲಿ ವಿದ್ಯುತ್ ಕಂಬ ಅಳವಡಿಸಲಾಗಿದೆ. ಇದರಿಂದ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳು ಈ ವಿದ್ಯುತ್ ಕಂಬವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕು.

ಬಿ. ಗೋಪಾಲ್ ರೆಡ್ಡಿ, ರಾಮಸ್ವಾಮಿಪಾಳ್ಯ

ರಾಮಸ್ವಾಮಿಪಾಳ್ಯದ ಹಳೆ ಗ್ರಾಮದ ರಸ್ತೆ ಮಧ್ಯದಲ್ಲಿರುವ ವಿದ್ಯುತ್ ಕಂಬ

'ತೆರೆದ ಸ್ಥಿತಿಯಲ್ಲಿ ಶೌಚಾಲಯದ ಗುಂಡಿ'

ಚಾಮರಾಜಪೇಟೆಯ ಒಂಬತ್ತನೇ ಕ್ರಾಸ್‌ನ 2ನೇ ಮೇನ್‌ನಲ್ಲಿರುವ ಶೌಚಾಲಯದ ಗುಂಡಿಯೊಂದನ್ನು ತೆರೆದ ಸ್ಥಿತಿಯಲ್ಲಿ ಹಾಗೆಯೇ ಬಿಡಲಾಗಿದೆ. ಸ್ಥಳೀಯ ನಿವಾಸಿಗಳು ಮೂಗು ಮುಚ್ಚಿಕೊಂಡು ಇರಬೇಕಾದ ಸ್ಥಿತಿ ಇದೆ. ಎರಡು ತಿಂಗಳಿಂದ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಇದನ್ನು ಸರಿಪಡಿಸುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ.

ಚಾಮರಾಜಪೇಟೆ ನಿವಾಸಿಗಳು

ಚಾಮರಾಜಪೇಟೆ ತೆರೆದ ಸ್ಥಿತಿಯಲ್ಲಿರುವ ಶೌಚಾಲಯದ ಗುಂಡಿ

'ರಸ್ತೆ ಗುಂಡಿ ಮುಚ್ಚಿ'

ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಸಪ್ತಗಿರಿ ಆಸ್ಪತ್ರೆ ಸಮೀಪದ ಎಜಿಬಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ನಾಲ್ಕು ವರ್ಷಗಳಿಂದ ಇಲ್ಲಿನ ರಸ್ತೆಗೆ ಡಾಂಬರೀಕರಣವಾಗಿಲ್ಲ. ರಸ್ತೆ ಹಾಳಾಗಿರುವುದರಿಂದ ಪ್ರತಿನಿತ್ಯ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತವೆ. ಈ ಬಗ್ಗೆ ಸ್ಥಳೀಯ ಶಾಸಕರಿಗೆ ಮನವಿ ಸಲ್ಲಿಸಲಾಗಿದೆ. ಎಜಿಬಿ ಬಡಾವಣೆಗೆ ಮೂರು ವರ್ಷಗಳಿಂದ ನೀರಿನ ಪೂರೈಕೆ ಮಾಡುತ್ತಿಲ್ಲ. ಸ್ಥಳೀಯರು ಕೊಳವೆ ಬಾವಿಗಳನ್ನು ಅವಲಂಬಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು.

ದಾಸರಹಳ್ಳಿ ನಿವಾಸಿಗಳು

ದಾಸರಹಳ್ಳಿಯ ಎಜಿಬಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

‘ಊಹಾ ಮಾಧ್ಯಮ ಅಪಾಯಕಾರಿ’

ಬೆಂಗಳೂರು ಪ್ರೆಸ್ ಕ್ಲಬ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಿಗಾರರು ವಸ್ತುನಿಷ್ಠರಾಗಿರಬೇಕು. ಸತ್ಯವನ್ನು ತಿಳಿಸಬೇಕು. ಆದರೆ, ಇತ್ತೀಚೆಗೆ ಊಹಾ ಪತ್ರಿಕೋದ್ಯಮ ಹೆಚ್ಚಾಗಿದೆ. ಇದು ಅಪಾಯಕಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್ ಭಾನುವಾರ ಹಮ್ಮಿಕೊಂಡಿದ್ದ 2024ನೇ ಸಾಲಿನ ವರ್ಷದ ವ್ಯಕ್ತಿ, ವಿಶೇಷ ಪ್ರಶಸ್ತಿ, ಸುವರ್ಣ ಮಹೋತ್ಸವ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮಲ್ಲಿ ಯಾವುದೇ ಗೊಂದಲ ಇಲ್ಲದೇ ಇದ್ದರೂ, ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲದಿದ್ದರೂ ನೀವೇ ಸೃಷ್ಟಿಸಿ ಸುದ್ದಿ ಮಾಡುತ್ತೀರಿ. ನಾವು ಸೇರಿ ಊಟ ಮಾಡಿದರೂ ಏನೇನೋ ಕಲ್ಪಿಸಿಕೊಳ್ಳುತ್ತೀರಿ. ನಾವು ಅಲ್ಲಿ ಆಡುವ ಮಾತೇ ಬೇರೆಯಾಗಿರುತ್ತದೆ. ನೀವೇ ಊಹಿಸಿಕೊಂಡು ನಮ್ಮ ಸಂಭಾಷಣೆ ಬರೆದು ಹಾಕುತ್ತೀರಿ. ಇದರಿಂದ ಜನರಿಗೆ ಏನಾದರೂ ಒಳ್ಳೆಯದಾಗುತ್ತಾ’ ಎಂದು ಪ್ರಶ್ನಿಸಿದರು.

‘ನನ್ನ ಬಗ್ಗೆ, ಸರ್ಕಾರದ ಬಗ್ಗೆ ಏನೇ ಟೀಕೆ ಮಾಡಿದರೂ ಇಲ್ಲಿವರೆಗೆ ಯಾಕೆ ಟೀಕೆ ಮಾಡಿದ್ರಿ ಎಂದು ಯಾವ ಮಾಧ್ಯಮವನ್ನೂ ಪ್ರಶ್ನಿಸಿಲ್ಲ. ಇನ್ನು ಮುಂದೆಯೂ ಪ್ರಶ್ನಿಸಲ್ಲ. ಆದರೆ, ನೀವು ಸುದ್ದಿ ಮಾಡುವಾಗ ನಿಮ್ಮ ಮನಃಸಾಕ್ಷಿಗೆ ಅನುಗುಣವಾಗಿ ಮಾಡಿ. ಆರೋಗ್ಯಕರ ಸುದ್ದಿ ಮಾಡಿ. ಆಗ ನಮಗೂ ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಊಹೆಯಿಂದ, ರಾಜಕೀಯ ಪ್ರೇರಿತವಾಗಿ, ಟೀಕೆಗಾಗಿ ಟೀಕೆ ಮಾಡಿದರೆ ಮಾಧ್ಯಮಗಳ ವಿಶ್ವಾಸಾರ್ಹತೆಯೇ ಕಡಿಮೆಯಾಗುತ್ತದೆ. ಜನರು ಇಟ್ಟ ನಂಬಿಕೆ ಕಡಿಮೆಯಾಗುತ್ತದೆ’ ಎಂದರು.

‘ಪ್ರಧಾನಮಂತ್ರಿಯಿಂದ ಹಿಡಿದು ಸ್ಥಳೀಯ ನಾಯಕರವರೆಗೆ ಎಲ್ಲ ನಾಯಕರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದರು. ಇದನ್ನು ಜಾರಿ ಮಾಡಲು ಸಾಧ್ಯವೇ ಇಲ್ಲ ಎಂದು ಭವಿಷ್ಯ ನುಡಿದರು. ಅದೆಲ್ಲ ಇಂದು ಸುಳ್ಳಾಗಿದೆ. ನಾವು ಪರಿಣಾಮಕಾರಿಯಾಗಿ ಜಾರಿ ಮಾಡಿದ್ದೇವೆ. ಸುಳ್ಳೇ ಟೀಕಿಸಿದವರು ಈಗ ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ’ ಎಂದು ಹೇಳಿದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರಿಗೆ ವರ್ಷದ ವ್ಯಕ್ತಿ ಪ್ರಶಸ್ತಿ, ಸಚಿವರಾದ ಕೆ.ಜೆ. ಜಾರ್ಜ್, ಕೆ.ಎಚ್. ಮುನಿಯಪ್ಪ, ಲಕ್ಷ್ಮೀ ಹೆಬ್ಬಾಳಕರ ಅವರಿಗೆ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಾಣಗೆರೆ ವೆಂಕಟರಾಮಯ್ಯ, ಇಂದೂಧರ ಹೊನ್ನಾಪುರ, ಸುಭಾಶ್ ಕೆವಿನ್ ರೈ, ಜಿ.ಎಸ್. ಕೃಷ್ಣಮೂರ್ತಿ, ನಾಗೇಶ್ ಬಸವರಾಜ್ ಅವರಿಗೆ ಪ್ರೆಸ್‌ಕ್ಲಬ್ ಸುವರ್ಣಮಹೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ‘ಪ್ರಜಾವಾಣಿ’ಯ ಸಹಾಯಕ ಸಂಪಾದಕ ಉದಯಕುಮಾರ್ ಎನ್., ಸುಧಾ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ‘ಪ್ರಜಾವಾಣಿ’ ಮುಖ್ಯ ವರದಿಗಾರ ರಾಜೇಶ್ ರೈ ಚಟ್ಲ ಮತ್ತು ವಿವಿಧ ಮಾಧ್ಯಮಗಳ ಸಾಧಕರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜ್, ನಸೀರ್ ಅಹಮದ್, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನುಂ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್. ಶ್ರೀಧರ ಉಪಸ್ಥಿತರಿದ್ದರು.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ನೀಡುವ ‘2024ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ಸಚಿವ ಎಂ.ಬಿ.ಪಾಟೀಲ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಸಚಿವ ಕೆ.ಎಚ್.ಮುನಿಯಪ್ಪ, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ, ಸಚಿವ ಕೆ.ಜೆ.ಜಾರ್ಜ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜ್ ಇದ್ದರು ಪ್ರಜಾವಾಣಿ ಚಿತ್ರ

ಬೆಂ.ವಿ.ವಿ: ನಿಗದಿಯಂತೆ ಬಿ.ಕಾಂ, ಸ್ನಾತಕ ಪದವಿ ಪರೀಕ್ಷೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ಬೆಂಗಳೂರು ವಿಶ್ವವಿದ್ಯಾಲಯದ ಬಿ.ಕಾಂ ಮತ್ತು ಸ್ನಾತಕ ಪದವಿಗಳ ಪರೀಕ್ಷೆ ನಿಗದಿತ ವೇಳಾಪಟ್ಟಿಯಂತೆ ನಡೆಯಲಿದೆ ಎಂದು ವಿ.ವಿ ಕುಲಸಚಿವ (ಮೌಲ್ಯಮಾಪನ) ಸಿ. ಶ್ರೀನಿವಾಸ್ ತಿಳಿಸಿದ್ದಾರೆ.

ಬಿ.ಕಾಂ ಮತ್ತು ಸ್ನಾತಕ ಪದವಿಗಳ ಪರೀಕ್ಷೆಯನ್ನು ಮುಂದೂಡಬೇಕೆಂದು ಕೋರಿ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ನಿಗದಿತ ವೇಳಾಪಟ್ಟಿಯಂತೆ ಪರೀಕ್ಷೆ ನಡೆಸಲು ಮಧ್ಯಂತರ ಆದೇಶ ನೀಡಿದೆ ಎಂದು ಅವರು ಹೇಳಿದ್ದಾರೆ.

ಹೈಕೋರ್ಟ್ ಆದೇಶದಂತೆ ಬಿ.ಕಾಂ ಮತ್ತು ಸ್ನಾತಕ ಪದವಿಗಳ 1, 3 ಮತ್ತು 5 ನೇ ಸೆಮಿಸ್ಟರ್ ಪರೀಕ್ಷೆಗಳು ಮತ್ತು ಮುಂದಿನ ಎಲ್ಲಾ ಪರೀಕ್ಷೆಗಳು ನಿಗದಿತ ವೇಳಾಪಟ್ಟಿಯಂತೆ ನಡೆಯಲಿವೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರಿ, ಐಎಲ್‌ಐ ಪ್ರಕರಣಗಳ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರೋಗ್ಯ ಇಲಾಖೆಯಿಂದ ಪ್ರಕರಣಗಳ ವಿಶ್ಲೇಷಣೆ
- ಚಳಿ ಹೆಚ್ಚಾದ ಪರಿಣಾಮ ಪ್ರಕರಣಗಳು ಏರುಗತಿ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ 7,966 ತೀವ್ರ ಉಸಿರಾಟ ಸಮಸ್ಯೆ ಪ್ರಕರಣ (ಸಾರಿ) ಹಾಗೂ 3,888 ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ ಪ್ರಕರಣಗಳು (ಐಎಲ್‌ಐ) ವರದಿಯಾಗಿವೆ.

ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಡಿ (ಐಎಚ್‌ಐಪಿ) ಸೋಂಕು ರೋಗಗಳ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಇದರ ಆಧಾರದ ಮೇಲೆ ಆರೋಗ್ಯ ಇಲಾಖೆಯು ಪ್ರಕರಣಗಳ ಏರಿಳಿತವನ್ನು ವಿಶ್ಲೇಷಿಸಿದೆ.

2024ರ ಜನವರಿಯಲ್ಲಿ ವಾರವೊಂದರಲ್ಲಿ ಸರಾಸರಿ ದೃಢಪಡುತ್ತಿದ್ದ ಸಾರಿ ಪ್ರಕರಣಗಳು 500ರ ಗಡಿಯ ಆಸುಪಾಸಿನಲ್ಲಿದ್ದವು. ಮಾರ್ಚ್ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಜೂನ್ ನಂತರ ವಾರವೊಂದರಲ್ಲಿ ದೃಢಪಡುತ್ತಿದ್ದ ಪ್ರಕರಣ ಸಂಖ್ಯೆ ನೂರರ ಗಡಿಯೊಳಗಿತ್ತು. ಡಿಸೆಂಬರ್ ಅಂತ್ಯದಲ್ಲಿ ಚಳಿ ಹೆಚ್ಚಾದ ಪರಿಣಾಮ ಮತ್ತೆ ಪ್ರಕರಣಗಳು ಏರುಗತಿ ಪಡೆದಿವೆ. ಈ ವರ್ಷ (2025) ಮೊದಲ ವಾರದಲ್ಲಿ 126 ಸಾರಿ ಪ್ರಕರಣಗಳು ವರದಿಯಾಗಿವೆ.

ಐಎಲ್‌ಐ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 11,341 ಮಂದಿಗೆ ಪರೀಕ್ಷೆಗಳನ್ನು ನಡೆಸಲಾಗಿದೆ. ಜೂನ್ ಬಳಿಕ ಏರುಗತಿ ಪಡೆದ ಐಎಲ್‌ಐ ಪ್ರಕರಣಗಳು, ಆಗಸ್ಟ್‌ನಲ್ಲಿ ಗರಿಷ್ಠ ಸಂಖ್ಯೆಗೆ ತಲುಪಿದ್ದವು. ವಾರವೊಂದರಲ್ಲಿ ಖಚಿತ ಪಡುತ್ತಿದ್ದ ಪ್ರಕರಣಗಳು 200ರ ಗಡಿ ದಾಟಿದ್ದವು. ಅಕ್ಟೋಬರ್ ಬಳಿಕ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. ಈ ವರ್ಷ ಮೊದಲ ವಾರದಲ್ಲಿ 50 ಪ್ರಕರಣಗಳು ದೃಢಪಟ್ಟಿವೆ.

ನಾಯಿ ಹಾಗೂ ಹಾವು ಕಡಿತದ ಪ್ರಕರಣಗಳೂ ಕಳೆದ ವರ್ಷ ಅಧಿಕ ಸಂಖ್ಯೆಯಲ್ಲಿ ವರದಿಯಾಗಿವೆ. 3.57 ಲಕ್ಷ ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದು, ಅವರಲ್ಲಿ ಐವರು ಮೃತಪಟ್ಟಿದ್ದಾರೆ. 13,102 ಜನರಿಗೆ ಹಾವುಗಳು ಕಡಿದಿದ್ದು ದೃಢಪಟ್ಟಿದ್ದು, ಅವರಲ್ಲಿ 98 ಮಂದಿ ಮೃತಪಟ್ಟಿದ್ದಾರೆ.

ಪ್ರಾಣಿಗಳ ಮೂಲಕ ಹರಡುವ ಬ್ಯಾಕ್ಟೀರಿಯಾ ಸೋಂಕು (ಲೆಪ್ಟೊಸ್ಪಿರೋಸಿಸ್) ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 12,092 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, 2,149 ಪ್ರಕರಣಗಳು ದೃಢಪಟ್ಟಿವೆ. ಮಂಗನ ಕಾಯಿಲೆಗೆ (ಕೆಎಫ್‌ಡಿ) ಸಂಬಂಧಿಸಿದಂತೆ 16,464 ಮಂದಿಗೆ ಪರೀಕ್ಷೆ ಮಾಡಲಾಗಿದೆ. 456 ಮಂದಿಯಲ್ಲಿ ಈ ಕಾಯಿಲೆ ಖಚಿತಪಟ್ಟಿದೆ.

|| ಶ್ರೀ ಗುರು ಬಸವಲಿಂಗಾಯ ನಮಃ || || ಕಾಯಕವೇ ಕೈಲಾಸ || || ಶ್ರೀ ಗುರುಸಿದ್ಧರಾಮೇಶ್ವರ ನಮಃ ||

ಶ್ರೀ ಗುರು ಸಿದ್ಧರಾಮೇಶ್ವರರ
852ನೇ ಜಯಂತಿ ಮಹೋತ್ಸವ

14 ಮತ್ತು 15ನೇ ಜನವರಿ, 2025, ಮಂಗಳವಾರ ಮತ್ತು ಬುಧವಾರ

ಸದರಿ ಜಯಂತಿಯ ಕಾರ್ಯಕ್ರಮವು ದಿನಾಂಕ 14ರಂದು ಬೆ.11 ಗಂಟೆಗೆ ಉದ್ಘಾಟನಾ ಸಮಾರಂಭವಿದ್ದು , ಮಧ್ಯಾಹ್ನ 3 ಗಂಟೆಗೆ ಸಾಹಿತ್ಯ ಗೋಷ್ಠಿ, ಸಂಜೆ 7 ಗಂಟೆಗೆ ಶಿವಯೋಗಿ ಸಿದ್ಧರಾಮರ ಬಗ್ಗೆ ಶಿವಕುಮಾರ ಕಲಾಸಂಘ ಸಾಣೇಹಳ್ಳಿರವರಿಂದ ನಾಟಕವಿರುತ್ತದೆ. ದಿನಾಂಕ 15ರಂದು ಬೆ. 10.30ಕ್ಕೆ ಮಹಿಳಾ ಮತ್ತು ಕೃಷಿಗೋಷ್ಠಿ, ಮಧ್ಯಾಹ್ನ 3ಗಂಟೆಗೆ ಜಯಂತಿಯ ಸಮಾರೋಪ ಸಮಾರಂಭವಿದ್ದು ಈ ಕಾರ್ಯಕ್ರಮಗಳಲ್ಲಿ ರಾಜ್ಯದ ವಿವಿಧ ಮಠದ ಹರಗುರು ಚರಮೂರ್ತಿಗಳು ಮತ್ತು ರಾಜ್ಯದ ಪ್ರಮುಖ ರಾಜಕೀಯ ನಾಯಕರು ಭಾಗವಹಿಸುವರು ಹಾಗೂ ಸಾಹಿತ್ಯ ಮತ್ತು ಕೃಷಿ ಬಗ್ಗೆ ಪರಿಣಿತರಿಂದ ಉಪನ್ಯಾಸವಿರುತ್ತದೆ.

ಸ್ಥಳ : ತ್ರಿಪುರವಾಸಿನಿ, ಅರಮನೆ ಮೈದಾನ ಗೇಟ್ ನಂ. 2 ಮತ್ತು 3, ಮೇಕ್ರಿ ವೃತ್ತ, ಬೆಂಗಳೂರು

ಸರ್ವರಿಗೂ ಆದರದ ಸುಸ್ವಾಗತ

ಸ್ವಾಗತ ಬಯಸುವವರು
ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು

ಜಾಗೃತಿ ನಡಿಗೆ

ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಬಸವೇಶ್ವರನಗರದ ಹಾವನೂರು ವೃತ್ತದಿಂದ ಶಂಕರಮಠದ ವಿವೇಕಾನಂದ ಉದ್ಯಾನದವರೆಗೆ ಭಾನುವಾರ ನಡೆದ ಯುವ ಜಾಗೃತಿ ನಡಿಗೆಯಲ್ಲಿ ಶಾಸಕ ಕೆ. ಗೋಪಾಲಯ್ಯ, ಮಾಜಿ ಶಾಸಕ ನೆ.ಲ. ನರೇಂದ್ರ ಬಾಬು, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ರಾಜ್ಯ ಕಾರ್ಯಾಲಯದ ಸಹ ಕಾರ್ಯದರ್ಶಿ ವಿಶ್ವನಾಥ ಅಣಜಿ ಪಾಲ್ಗೊಂಡಿದ್ದರು

ಬನಶಂಕರಿ ಉತ್ಸವ: ಸಂಚಾರ ಮಾರ್ಗದಲ್ಲಿ ಬದಲು

ಬೆಂಗಳೂರು: ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಜನವರಿ 13ರಂದು ನಡೆಯುವ ಬ್ರಹ್ಮ ರಥೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ಕಾರಣ ಕನಕಪುರ ರಸ್ತೆ ಬನಶಂಕರಿ ಸುತ್ತಮುತ್ತ ವಾಹನ ಸಂಚಾರ ಮಾರ್ಗದಲ್ಲಿ ಮಾರ್ಪಾಡು ಮಾಡಲಾಗಿದೆ.

ಬನಶಂಕರಿ ದೇವಸ್ಥಾನದಿಂದ ಸಾರಕ್ಕಿ ಮಾರುಕಟ್ಟೆ ಜಂಕ್ಷನ್‌ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಪರ್ಯಾಯವಾಗಿ ಕನಕಪುರ ಮುಖ್ಯ ರಸ್ತೆಯಲ್ಲಿ ಕೋಣನಕುಂಟೆ ಕಡೆಯಿಂದ ಬನಶಂಕರಿ ಬಸ್ ನಿಲ್ದಾಣದ ಕಡೆಗೆ ಹೋಗುವ ವಾಹನಗಳು ಜೆ.ಪಿ.ನಗರ ಮೆಟ್ರೊ ಜಂಕ್ಷನ್ ಹತ್ತಿರ ಬಲ ತಿರುವು ಪಡೆದು ಸಿಂಧೂರ ವೃತ್ತದ ಮೂಲಕ ಸಂಚರಿಸಬಹುದು.

ಸಾರಕ್ಕಿ ಮಾರುಕಟ್ಟೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಇಂದಿರಾಗಾಂಧಿ ಸರ್ಕಲ್ ಹತ್ತಿರ ಎಡ ತಿರುವು ಪಡೆದು ಆರ್.ವಿ.ಆಸ್ಟರ್ ಮೂಲಕ ಸಂಚರಿಸಬಹುದು. ಬನಶಂಕರಿ ಬಸ್ ನಿಲ್ದಾಣದ ಕಡೆಯಿಂದ ಸಾರಕ್ಕಿ ಸಿಗ್ನಲ್ ಕಡೆ ಸಂಚರಿಸುವ ವಾಹನಗಳು ಕೆ.ಎಸ್. ಲೇಔಟ್ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಸಾಗಬಹುದು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

‘ವಿವೇಕಾನಂದ ಯುವಜನರ ಪ್ರೇರಣಾ ಶಕ್ತಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮಲ್ಲಸಂದ್ರದ ಪೈಪ್‌ಲೈನ್ ರಸ್ತೆಯ ಅಪ್ಪು ಸರ್ಕಲ್‌ನಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ 'ರಾಷ್ಟ್ರೀಯ ಯುವ ದಿನ' ಆಚರಿಸಲಾಯಿತು.

'ದೇಶದ ಆಧ್ಯಾತ್ಮಿಕ ಶಕ್ತಿಯನ್ನು ಜಗತ್ತಿಗೇ ಪಸರಿಸಿದ ಅದಮ್ಯ ಚೇತನ ಸ್ವಾಮಿ ವಿವೇಕಾನಂದರು. ಯುವ ಮನಸ್ಸುಗಳ ಪ್ರೇರಣಾ ಶಕ್ತಿ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಪೈಪ್‌ಲೈನ್ ರಸ್ತೆಯಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ವಿವೇಕಾನಂದ ಕುರಿತು ಪುಸ್ತಕಗಳು ಮತ್ತು ಫೋಟೊಗಳನ್ನು ವಿತರಿಸಿ, ಸಿಹಿ ಹಂಚಲಾಯಿತು. ಕನ್ನಡ ಪರ ಚಿಂತಕ ಬಸವರಾಜ ಅರಬಘಟ್ಟ ಅವರು ವಿವೇಕಾನಂದರ ಕುರಿತು ಮಾತನಾಡಿದರು.

ಕಾರ್ಯಕ್ರಮದ ಆಯೋಜಕ ವಿನೋದ್‌ಗೌಡ, ಬಿಜೆಪಿ ಮುಖಂಡರಾದ ಶೆಟ್ಟಿಹಳ್ಳಿ ಬಿ. ಸುರೇಶ್, ಸೋಮಶೇಖರ್, ಗುರುಪ್ರಸಾದ್, ಸಾಹಿತಿ ವೈ.ಬಿ.ಎಚ್ ಜಯದೇವ್, ಮೋಹನ್ ಕುಮಾರ್, ರಘು, ಸಿ.ಎನ್. ದಯಾನಂದ್, ನಾಗಣ್ಣ, ಸ್ಥಳೀಯರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

‘ರಾಷ್ಟ್ರೀಯ ಯುವ ದಿನ’ದ ಅಂಗವಾಗಿ ದಾಸರಹಳ್ಳಿಯ ಪೈಪ್‌ಲೈನ್ ರಸ್ತೆಯಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು.

Karnataka Golf Association
No.1, Golf Avenue, Kodihalli,
Bengaluru - 560 008.

NOTICE

Notice is hereby given under Rule 19.7 of the Karnataka Golf Association read in conjunction with section 11 (3) of the Karnataka Societies Registration Act 1960 that a Special General Meeting of the Karnataka Golf Association will be held on **Wednesday** the **05th February 2025** at **5:00 PM** at the KGA Club House to consider and pass certain resolutions circulated to Members individually.

Sd/-
Date: 13.01.2025 **Col. C P Nanjappa (Retd)**
Place: Bengaluru Hon. Secretary

ನಕಲಿ ದಾಖಲೆ: ಬಿಡಿಎ ನಿವೇಶನ ಕಬಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ನಕಲಿ ದಾಖಲೆಗಳನ್ನು ಸಲ್ಲಿಸಿ ನಿವೇಶನ ಮಂಜೂರು ಮಾಡಿಸಿಕೊಂಡಿದ್ದ ಕುಟುಂಬದ ಸದಸ್ಯರು, ಬಿಡಿಎ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಡಿಎ ವಿಚಕ್ಷಣ ದಳದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎಸ್. ಆರ್.ಸೌಮ್ಯಾ ನೀಡಿದ ದೂರಿನ ಮೇರೆಗೆ ಅನಿಲ್ ಕುಮಾರ್ ಅಗರ್ವಾಲ್, ಸೋನು ಅಗರ್ವಾಲ್ , ರಾಮ್ ಪ್ರತಾಪ್ ಅಗರ್ವಾಲ್, ಸಂತೋಷ್ ದೇವಿ ಅಗರ್ವಾಲ್, ಸ್ನೇಹಲತಾ ಅಗರ್ವಾಲ್ ಮತ್ತು ಬಿಡಿಎ ಅಧಿಕಾರಿ, ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ನಕಲಿ ದಾಖಲೆ ಮತ್ತು ಬೇರೆ ವಿಳಾಸ ಕೊಟ್ಟು 2001ರ ಜುಲೈ 7 ರಿಂದ 2003 ಮಾರ್ಚ್ 24ರ ಮಧ್ಯೆ ತಮ್ಮ ಕುಟುಂಬದ ಸದಸ್ಯರಿಗೆ ಅನಿಲ್ ಕುಮಾರ್ ಅವರು ಅಂಜನಾಪುರ 8ನೇ ಬ್ಲಾಕ್ , 4ನೇ ಬ್ಲಾಕ್, 2ನೇ ಬ್ಲಾಕ್ , 6ನೇ ಬ್ಲಾಕ್, ಬನಶಂಕರಿ 6ನೇ ಬ್ಲಾಕ್ ಮತ್ತು 4ನೇ ಬ್ಲಾಕ್‌ನಲ್ಲಿ ತಲಾ ಒಂದು ನಿವೇಶನ ಮಂಜೂರು ಮಾಡಿಸಿಕೊಂಡಿದ್ದರು’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಅನಿಲ್ ಕುಮಾರ್, ಬೇರೆ ಬೇರೆ ವಿಳಾಸ ಕೊಟ್ಟು ಒಂದೇ ಕುಟುಂಬಕ್ಕೆ ಐದು ನಿವೇಶನ ಮಂಜೂರು ಮಾಡಿಸಿಕೊಂಡು ನಂಬಿಕೆ ದ್ರೋಹ ಮಾಡಿದ್ದಾರೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಕೋರಲಾಗಿದೆ.

ಕಗ್ಗಲೀಪುರ ಗ್ರಾ.ಪಂ: ಜಬೀನತಾಜ್ ಅಧ್ಯಕ್ಷೆ, ಸಾವಿತ್ರಮ್ಮ ಉಪಾಧ್ಯಕ್ಷೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕಗ್ಗಲೀಪುರ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಜಬೀನತಾಜ್ ಪರ್ವೀಜ್ ಅಧ್ಯಕ್ಷರಾಗಿ ಮತ್ತು ಸಾವಿತ್ರಮ್ಮ ಕೃಷ್ಣಪ್ಪ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಒಟ್ಟು 38 ಸದಸ್ಯರ ಪೈಕಿ ಜಬೀನತಾಜ್ ಪರ್ವೀಜ್ ಅವರಿಗೆ 28 ಮತಗಳು, ಪ್ರತಿಸ್ಪರ್ಧಿ ಬಿಜೆಪಿಯ ಪದ್ಮಾವತಿಯವರಿಗೆ 10 ಮತಗಳು ಬಂದಿದ್ದವು. ಉಪಾಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿದ ಸಾವಿತ್ರಮ್ಮ ಕೃಷ್ಣಪ್ಪ ಅವರಿಗೆ 26 ಮತಗಳು, ಪ್ರತಿಸ್ಪರ್ಧಿ ಶಶಿಕುಮಾರಿ.ಡಿ.ಎಂ ಅವರಿಗೆ 12 ಮತಗಳು ಬಂದಿದ್ದವು. ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಎಚ್.ಶ್ರೀನಿವಾಸ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಕಬ್ಬಿನ ಜಲ್ಲೆ ಅವರೆಕಾಯಿ ನೆಲಗಡಲೆ ಗೆಣಸಿಗೆ ಭಾರಿ ಬೇಡಿಕೆ

ಸಂಕ್ರಾಂತಿ ಹಬ್ಬಕ್ಕೆ ಖರೀದಿ ಭರಾಟೆ

ಸಂಕ್ರಾಂತಿ ಹಬ್ಬದ ಅಂಗವಾಗಿ ಗಾಂಧಿಬಜಾರ್‌ನಲ್ಲಿ ಮಹಿಳೆಯರು ಎಳ್ಳು, ಬೆಲ್ಲ, ಸಕ್ಕರೆ ಅಚ್ಚುಗಳನ್ನು ಖರೀದಿಸಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕ್ರಾಂತಿ ಹಬ್ಬದ ಆಚರಣೆಗೆ ನಗರ ಸಜ್ಜಾಗಿದೆ. ಇಲ್ಲಿನ ವಿವಿಧ ಮಾರುಕಟ್ಟೆಗಳಲ್ಲಿ ಸಂಕ್ರಾಂತಿ ಹಬ್ಬಕ್ಕಾಗಿ ಕಬ್ಬು, ಗೆಣಸು ಹಾಗೂ ಅವರೆಕಾಯಿ ಖರೀದಿಯ ಭರಾಟೆ ಭಾನುವಾರ ಜೋರಾಗಿತ್ತು.

ಹಬ್ಬಕ್ಕೂ ಎರಡು ದಿನ ಮೊದಲೇ ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಕಪ್ಪು, ಕೆಂಪು ಬಣ್ಣದ ಕಬ್ಬಿನ ಜಲ್ಲೆಗಳ ರಾಶಿ ಬಂದಿದೆ. ಕಬ್ಬಿನ ಜಲ್ಲೆ ತಲಾ ₹80ರಂತೆ ಮಾರಾಟ ಆಗುತ್ತಿದೆ. ನಗರದ ಪ್ರಮುಖ ಬಡಾವಣೆಗಳಲ್ಲೂ ಕಬ್ಬು, ಕಡಲೆಕಾಯಿ, ಅವರೆಕಾಯಿ, ಗೆಣಸು ರಾಶಿ ಹಾಕಲಾಗಿದ್ದು, ಮಾರುಕಟ್ಟೆ ಕಳೆಗಟ್ಟಿದೆ.

ಗುಣಮಟ್ಟದ ಕಡಲೆಕಾಯಿ ಕೆ.ಜಿ.ಗೆ ₹100ರಂತೆ ಮಾರಾಟ ವಾಗುತ್ತಿದೆ. ಗಾಂಧಿ ಬಜಾರ್, ಮಲ್ಲೇಶ್ವರ, ಜಯನಗರ, ಯಶವಂತಪುರ, ರಾಜಾಜಿನಗರ, ಮಡಿವಾಳ, ಚಾಮರಾಜಪೇಟೆ, ಚಿಕ್ಕಪೇಟೆಗಳಲ್ಲಿ ರಸ್ತೆಬದಿ ತಾತ್ಕಾಲಿಕ ಮಳಿಗೆಗಳು ಆರಂಭವಾಗಿವೆ. ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು, ಸಕ್ಕರೆ ಹಾಗೂ ಬೆಲ್ಲದ ಅಚ್ಚುಗಳನ್ನೂ ಮಾರಲಾಗುತ್ತಿದೆ.

ಬಹುತೇಕ ಜನವಸತಿ ಪ್ರದೇಶಗಳ ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ಕಬ್ಬಿನ ಜಲ್ಲೆಗಳು, ಹೂವು, ಹಣ್ಣು, ಅವರೆಕಾಯಿ, ಗೆಣಸು, ನೆಲಗಡಲೆಯನ್ನು ತಂದು ರಾಶಿ ಹಾಕಿಕೊಂಡು ಮಾರಾಟ ಮಾಡಲಾಗುತ್ತಿದೆ. ಶನಿವಾರ ದಿಂದಲೇ ವ್ಯಾಪಾರ ಆರಂಭವಾಗಿದ್ದು, ಭಾನುವಾರ ಎಲ್ಲೆಡೆ ಖರೀದಿ ಜೋರಾಗಿತ್ತು. ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು ವಿವಿಧ ಗಾತ್ರಗಳಲ್ಲಿ ಲಭ್ಯ ಇವೆ. ಸಣ್ಣ ಪೊಟ್ಟಣದ ದರ ₹50. ಮಳಿಗೆಗಳಲ್ಲಿ ಒಂದು ಕೆ.ಜಿ.ಯ ಎಳ್ಳುಬೆಲ್ಲ ಮಿಶ್ರಿತ ಪೊಟ್ಟಣದ ದರ ₹ 320ರಿಂದ ₹ 350 ಇದೆ. ಅರ್ಧ ಕೆ.ಜಿ ಸಕ್ಕರೆ ಅಚ್ಚು ₹150ರಂತೆ ಮಾರಾಟವಾಗುತ್ತಿದೆ.

ಹೂವಿನ ದರ ಏರಿಕೆ: 'ಹೂವಿನ ದರಗಳು ಸ್ವಲ್ಪ ಏರಿಕೆ ಕಂಡಿವೆ. ಪ್ರತಿ ಕೆ.ಜಿ. ಕನಕಾಂಬರ ₹1,200, ಮಲ್ಲಿಗೆ ₹1,000, ಚೆಂಡು ₹60, ಸೇವಂತಿಗೆ ₹150, ಗುಲಾಬಿ ₹200 ಮತ್ತು ಸುಗಂಧರಾಜ ₹120ರಂತೆ ಮಾರಾಟ ವಾಗುತ್ತಿವೆ' ಎಂದು ಹೂವಿನ ವರ್ತಕ ವಿಜಯ್ ತಿಳಿಸಿದರು.

ಕೆ.ಆರ್. ಮಾರುಕಟ್ಟೆಯ ದರಗಳು ಪ್ರತಿ ಕೆಜಿಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಮಲ್ಲಿಗೆ	600	1,000
ಕನಕಾಂಬರ	400	1,200
ಗುಲಾಬಿ	150	200
ಸೇವಂತಿಗೆ	100	150
ಸುಗಂಧರಾಜ	70	120
ಹಣ್ಣುಗಳ ದರ ಪ್ರತಿ ಕೆ.ಜಿಗೆ		
ಸೇಬು	120	180
ದಾಳಿಂಬೆ	80	100
ಏಲಕ್ಕಿ ಬಾಳೆ	50	70
ಬಾಳೆ	40	30
ತರಕಾರಿ ದರಗಳು ಪ್ರತಿ ಕೆಜಿಗೆ		
ಬಟಾಣಿ	100	80
ಕ್ಯಾರೆಟ್	50	80
ಕ್ಯಾಪ್ಸಿಕಮ್	40	60
ಈರುಳ್ಳಿ	60	40
ಬೀನ್ಸ್	60	80
ಟೊಮೆಟೊ	40	20
ಆಲೂಗಡ್ಡೆ	20	35
ಹೀರೇಕಾಯಿ	40	60
ಸೌತೆಕಾಯಿ	30	30
ಹಾಗಲಕಾಯಿ	40	60
ಬದನೆಕಾಯಿ	30	80
ಮೆಣಸಿನಕಾಯಿ	80	80
ಬಿಟ್‌ರೂಟ್	30	60
ಬೆಳ್ಳುಳ್ಳಿ	250	300
ಶುಂಠಿ	200	80
ಗೆಣಸು	40	60
ಅವರೆಕಾಯಿ	80	120
ಬೆಂಡೆಕಾಯಿ	50	60
ನುಗ್ಗೆಕಾಯಿ	120	160
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	20
ಪುದೀನಾ	10	10
ಪಾಲಕ್	10	20
ಸಬ್ಬಕ್ಕಿ	15	20
ಸಂಕ್ರಾಂತಿ ವಿಶೇಷ		
ಬಾಳೆಕಂಬ ಜೋಡಿಗೆ (ಮಧ್ಯಮ ಗಾತ್ರ)		100
ಮಾವಿನ ತೋರಣ		20
ಕಬ್ಬು ಜೋಡಿಗೆ		150

ನಾಳೆ ಸೀತಾ ಕಲ್ಯಾಣ ಮಹೋತ್ಸವ

ದಾಬಸ್ ಪೇಟೆ: ಸೋಂಪುರ ಹೋಬಳಿ ರಾಮೇನಹಳ್ಳಿಗೆ ಸೇರುವ ಶ್ರೀ ರಾಮದೇವರ ಬೆಟ್ಟದಲ್ಲಿ ಮಕರ ಸಂಕ್ರಾಂತಿಯ ಪ್ರಯುಕ್ತ ಜ.14ರಂದು 'ಸೀತಾ ಕಲ್ಯಾಣ ಮಹೋತ್ಸವ' ಹಮ್ಮಿಕೊಳ್ಳಲಾಗಿದೆ.

ಶ್ರೀರಾಮ ದೇವರಿಗೆ ಫಲ ಪಂಚಾಮೃತ ಅಭಿಷೇಕ ಹಾಗೂ ಸುದರ್ಶನ ಹೋಮ ಸೀತಾ ಕಲ್ಯಾಣ ಪ್ರಾಕಾರೋತ್ಸವ ನಡೆಯುತ್ತದೆ. ಅರ್ಚಕರಾದ ಆನಂದ್ ಪೂಜಾ ಕಾರ್ಯಕ್ರಮ ಗಳನ್ನು ನಡೆಸಿಕೊಡಲಿದ್ದಾರೆ.

ಬ್ಯಾಟರಾಯನಪುರ- 'ಸುಗ್ಗಿ-ಹುಗ್ಗಿ' ಸಂಭ್ರಮ

ಯಲಹಂಕ: ಜಾನಪದ ಕಲೆಗಳ ಅನಾವರಣ, ರಾಶಿಪೂಜೆ, ಆಹಾರಮೇಳ, ಎತ್ತುಗಳ ಪ್ರದರ್ಶನ, ಚಿತ್ತಾರದ ರಂಗೋಲಿಗಳು, ಬಾನಂಗಳದಲ್ಲಿ ಹಾರಾಡಿದ ಗಾಳಿಪಟಗಳು, ಗ್ರಾಮೀಣ ಕ್ರೀಡೆ, ವಸ್ತುಪ್ರದರ್ಶನ, ಎತ್ತಿನ ಬಂಡಿಯಲ್ಲಿ ಸವಾರಿ ಮಾಡಿ ಸಂಭ್ರಮಿಸಿದ ನಾಗರಿಕರು... ಒಟ್ಟಾರೆ ಅಲ್ಲಿ ಸಂಕ್ರಾಂತಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು...!

ಕೆಬಿಜಿ ಸ್ವಯಂಸೇವಕರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಆಶ್ರಯದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಮೈದಾನದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ನಾಲ್ಕನೇ ವರ್ಷದ 'ಸುಗ್ಗಿ-ಹುಗ್ಗಿ' ಕಾರ್ಯಕ್ರಮದಲ್ಲಿ ಕಂಡು ಬಂದ ದೃಶ್ಯಗಳಿವು.

ಕಬಡ್ಡಿ, ಹಗ್ಗ-ಜಗ್ಗಾಟ, ರಂಗೋಲಿ, ಮಕ್ಕಳಿಗಾಗಿ ಚಿತ್ರಕಲೆ ಮತ್ತು ಜಾನಪದ ನೃತ್ಯ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮಕ್ಕಳು ಮತ್ತು ಪೋಷಕರು, ಲಗೋರಿ, ಚಿನ್ನಿದಾಂಡು, ಚೂರ್‌ಚೆಂಡು, ಕುಂಟೆಬಿಲ್ಲೆ, ಗೋಲಿ, ಮಡಿಕೆ ಹೊಡೆಯುವ ಆಟಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ಖುಷಿಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಡೊಳ್ಳುಕುಣಿತ, ಪಟದಕುಣಿತ, ವೀರಗಾಸೆ, ಯಕ್ಷಗಾನ ಸೇರಿದಂತೆ ವಿವಿಧ ಜಾನಪದ ಕಲೆಗಳ ಪ್ರದರ್ಶನ, ಜನರ ಗಮನ ಸೆಳೆಯಿತು. ಸಾರ್ವಜನಿಕರಿಗೆ ಎಳ್ಳು-ಬೆಲ್ಲ, ಅವರೇಕಾಯಿ, ಕಬ್ಬು, ಗೆಣಸು ಹಾಗೂ ಸಿಹಿ-ಖಾರ ಪೊಂಗಲ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ನಗರದವರಿಗೆ ಗ್ರಾಮೀಣ ಸೊಗಡಿನ ಸಂಕ್ರಾಂತಿಹಬ್ಬದ ಪರಿಚಯ ಮಾಡಬೇಕೆಂಬ ಹಿನ್ನಲೆಯಲ್ಲಿ, ಇಲ್ಲಿ ಹಬ್ಬದ ವಾತಾವರಣವನ್ನು ಇಲ್ಲಿ ಸೃಷ್ಟಿಸಲಾಗಿದೆ. ನಾಡಿನ ವಿವಿಧೆಡೆಯಿಂದ ಕಲಾವಿದರನ್ನು ಆಹ್ವಾನಿಸಿ, ಜಾನಪದ ಕಲೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ' ಎಂದು ತಿಳಿಸಿದರು.

ವಸ್ತುಪ್ರದರ್ಶನ: ಗೃಹಪಯೋಗಿ ವಸ್ತುಗಳು, ಬಟ್ಟೆ, ಸಿರಿಧಾನ್ಯ, ಮಣ್ಣಿನ ಮಡಕೆ, ಪಿಒಪಿ ಬೊಂಬೆಗಳು, ಕೃತಕ ಅಭರಣಗಳು, ಅಲಂಕಾರಿಕ ವಸ್ತುಗಳು, ತಿಂಡಿ-ತಿನಿಸುಗಳು, ಸಿರಿಧಾನ್ಯಗಳು, ಸಾವಯವ ಪದಾರ್ಥಗಳೂ ಸೇರಿ ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ 100 ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಎತ್ತುಗಳು ಮತ್ತು ಕುರಿಗಳ ಪ್ರದರ್ಶನ, ಧಾನ್ಯಗಳ ರಾಶಿ, ಮನೆಗಳಲ್ಲಿ ಮತ್ತು ಕೃಷಿಯಲ್ಲಿ ಬಳಸುತ್ತಿದ್ದ ಹಳೆಯ ಉಪಕರಣಗಳು, ಮಂಡ್ಯದ 'ಬೆಲ್ಲದ ಪರಿಷೆ' ಅವರೇ ಮೇಳದ ಮಳಿಗೆಗಳು ಜನರನ್ನು ಆಕರ್ಷಿಸಿದವು.

ಸಂಗೀತ ನಿರ್ದೇಶಕ ವಾಸುಕಿ ವೈಭವ್ ಅವರ ಸಂಗೀತ ಕಾರ್ಯಕ್ರಮ ಹಾಗೂ ಸೋನು ವೇಣುಗೋಪಾಲ್ ಅವರ ಸ್ಟ್ಯಾಂಡ್‌ಅಪ್ ಕಾಮಿಡಿ ಶೊ ವೀಕ್ಷಕರನ್ನು ರಂಜಿಸಿದವು. ಪಂಜಿನ ಪ್ರದರ್ಶನ ಹಾಗೂ ಕಿಚ್ಚು ಹಾಯಿಸಿದ ದೃಶ್ಯಗಳು, ಜನರನ್ನು ರೋಮಾಂಚನಗೊಳಿಸಿದವು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಪಾಲಿಕೆ ಮಾಜಿ ಸದಸ್ಯ ಪಾರ್ತಿಬರಾಜನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಎನ್.ಕೆ. ಮಹೇಶ್‌ಕುಮಾರ್, ರವಿಕುಮಾರ್, ಆರ್.ಎಂ.ಶ್ರೀನಿವಾಸ್, ಎಚ್.ಎ.ಶಿವಕುಮಾರ್, ಗೌರೀಶ್, ಪಳನಿ ವೆಂಕಟೇಶ್, ಜಯಕುಮಾರ್, ಗ್ರಾಮಪಂಚಾಯಿತಿ ಅಧ್ಯಕ್ಷ ಪಿ.ರಾಹುಲ್, ಸದಸ್ಯ ಚೇತನ್‌ಕುಮಾರ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಜೈಲಿಂದ ಬಂದವರಿಗೆ ಸೇಬಿನ ಹಾರ'

ಬೆಂಗಳೂರು: 'ಜಾಮೀನು ಮೇಲೆ ಜೈಲಿನಿಂದ ಹೊರಬರುವ ವ್ಯಕ್ತಿಗೂ ಸೇಬಿನ ಹಾರ ಹಾಕಿ ಬರಮಾಡಿಕೊಳ್ಳುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದ ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಕೊಬಾಲ್ಟ್ ಕಲೆ ಮತ್ತು ಸಂಗೀತ ವೇದಿಕೆ ಹಾಗೂ ಮೈಸೂರಿನ ಮಹಿಮಾ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗ.ನಾ. ಭಟ್ಟ ಅವರ 'ಸಮ್ಮುಖ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಅಪರಾಧಗಳು ಹಾಗೂ ಭ್ರಷ್ಟಾಚಾರವನ್ನು ಹತ್ತಿರದಿಂದ ಕಂಡಿದ್ದೇನೆ. ವಿವಿಧ ಹಗರಣಗಳಲ್ಲಿ ಅಧಿಕಾರದಲ್ಲಿ ಇದ್ದವರು ಸಾವಿರಾರು ಕೋಟಿ ರೂಪಾಯಿ ಲೂಟಿ ಹೊಡೆದರು. ಈ ಹಗರಣಗಳ ಒಟ್ಟು ಮೊತ್ತವು ದೇಶದ ವಾರ್ಷಿಕ ಬಜೆಟ್ ಗಾತ್ರಕ್ಕಿಂತ ದೊಡ್ಡದಾಗಲಿದೆ. ರಾಜಕೀಯದಲ್ಲಿ ಆಡಳಿತದಲ್ಲಿರುವವರ ಸ್ವಾರ್ಥ-ದುರಾಸೆ ಇವುಗಳಿಗೆಲ್ಲಾ ಕಾರಣ' ಎಂದು ಹೇಳಿದರು.

ಪುಸ್ತಕದ ಬಗ್ಗೆ ಮಾತನಾಡಿದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಶುಭಾ ಮರವಂತೆ, 'ಪುಸ್ತಕದಲ್ಲಿ ವ್ಯಕ್ತಿಚಿತ್ರ ಮತ್ತು ತತ್ವಗಳಿವೆ. ರಾಮಾಯಣ ಮತ್ತು ಮಹಾಭಾರತದ ಬಗ್ಗೆ ವಿಶಾಲ ನೋಟವನ್ನು ಕಟ್ಟಿಕೊಡಲಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಿತ್ರಕಲಾವಿದ ಗಣಪತಿ ಎಸ್. ಹೆಗಡೆ, ಪ್ರಕಾಶಕ ಕೆ.ವಿ. ಶ್ರೀನಿವಾಸ ಹಾಗೂ ಉದ್ಯಮಿ ಪೊಲ್ಯ ಉಮೇಶ ಡಿ. ಶೆಟ್ಟಿ ಉಪಸ್ಥಿತರಿದ್ದರು.

'ಗುಣಮಟ್ಟದ ಶಿಕ್ಷಣ ನೀಡಿ'

ಬೆಂಗಳೂರು: 'ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಇತ್ತೀಚೆಗೆ ಮಕ್ಕಳು ಮೊಬೈಲ್ ಗೀಳಿಗೆ ತುತ್ತಾಗುತ್ತಿದ್ದಾರೆ. ಮೊಬೈಲ್ ಮೋಹದಿಂದ ಮುಕ್ತಗೊಳಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದಾಗಿದೆ' ಎಂದು ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಹೇಳಿದರು.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಭಾನುವಾರ ಆಯೋಜಿಸಿದ್ದ ಅನಿತಾಕೌಲ್ ಸ್ಮರಣೆ ಹಾಗೂ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಬೆರೆತು ಪಾಠ-ಪ್ರವಚನಗಳನ್ನು ಮಾಡುವ ಮೂಲಕ ಅವರ ಮನಸು ಗೆಲ್ಲಬೇಕು' ಎಂದು ಸಲಹೆ ನೀಡಿದರು.

ಪ್ರಾಥಮಿಕ ಶಾಲೆಗಳ 20 ಶಿಕ್ಷಕರು ಹಾಗೂ ಪ್ರೌಢಶಾಲೆಗಳ 17 ಶಿಕ್ಷಕರಿಗೆ 'ರಾಜ್ಯಮಟ್ಟದ ಉತ್ತಮ ಶಿಕ್ಷಕ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮಿತಿಯ ಅಧ್ಯಕ್ಷ ಡಾ.ಸಿ.ಆರ್. ಚಂದ್ರಶೇಖರ್ ಮಾತನಾಡಿದರು. ಸಮಿತಿಯ ಕಾರ್ಯದರ್ಶಿ ಈ. ಬಸವರಾಜು, ಉಪಾಧ್ಯಕ್ಷರಾದ ಆರ್.ಎನ್. ರಾಜಾನಾಯಕ್, ಎಚ್.ಕೆ.ಎಸ್. ಸ್ವಾಮಿ, ಜಿ. ಶ್ರೀನಿವಾಸ್, ಬೆಂಗಳೂರು ನಗರ ಘಟಕದ ಅಧ್ಯಕ್ಷ ನಾ. ಶ್ರೀಧರ್, ಪ್ರಬುದ್ಧ ಮನಸು ಪ್ರಬುದ್ಧ ಸಮಾಜದ ಎಚ್.ಕೆ. ವಿವೇಕಾನಂದ ಉಪಸ್ಥಿತರಿದ್ದರು.

ನಗರದಲ್ಲಿ ಜೀವನ್ಮುಖಿ ಪ್ರಕಾಶನ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ (ಬಲ ಭಾಗದವರು) ಅವರ 'ಆಡಳಿತದ ಅಂಗಳದಲ್ಲಿ' ಪುಸ್ತಕವನ್ನು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ (ಎಡದಿಂದ ಐದನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ನಿವೃತ್ತ ಐಎಎಸ್ ಅಧಿಕಾರಿಗಳಾದ ಟಿ.ಎಂ. ವಿಜಯಭಾಸ್ಕರ್, ಚಿರಂಜೀವಿ ಸಿಂಘ್, ಕೃಷಿಕ್ ಸರ್ವೋದಯ ಫೌಂಡೇಶನ್‌ನ ಅಧ್ಯಕ್ಷ ವೈ.ಕೆ ಪುಟ್ಟಸೋಮೇಗೌಡ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಡಿ.ಎನ್. ಮುನಿಕೃಷ್ಣ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಲಾರಿಗೆ ವಾಹನ ಡಿಕ್ಕಿ: ಇಬ್ಬರು ಸಾವು

ಶಿರಾ: ರಾಷ್ಟ್ರೀಯ ಹೆದ್ದಾರಿ- 48ರ ಎಮ್ಮೇರಹಳ್ಳಿ ಸೇತುವೆ ಬಳಿ ಭಾನುವಾರ ಮುಂಜಾನೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಹಿರೇಬಾದರದಿನ್ನಿ ಗ್ರಾಮದ ವಾಹನ ಚಾಲಕ ಬಸವರಾಜು (48) ಮತ್ತು ಪ್ರಯಾಣಿಕ ಸುರೇಶ್ (28) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಎಲ್ಲರೂ ಹಿರೇಬಾದರದಿನ್ನಿ ಗ್ರಾಮದಿಂದ ಕೂಲಿ ಕೆಲಸಕ್ಕೆಂದು ವಾಹನದಲ್ಲಿ ಬೆಂಗಳೂರಿಗೆ ಹೊರಟಿದ್ದರು. ವೇಗದಲ್ಲಿದ್ದ ವಾಹನ ಎಮ್ಮೇರಹಳ್ಳಿ ಸೇತುವೆ ಬಳಿ ಮುಂದಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆಯಿತು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾಂಬರ್ ಕಾಣದ ರಸ್ತೆ, ಚರಂಡಿ ವ್ಯವಸ್ಥೆ ಅಧ್ವಾನ

ಪ್ರಜಾವಾಣಿ ವಾರ್ತೆ

ಚೌಡೇಶ್ವರಿ ನಗರ

ರಾಜರಾಜೇಶ್ವರಿನಗರ: ಕ್ಷೇತ್ರದ ಲಗ್ಗೆರೆ ವಾರ್ಡ್ ವ್ಯಾಪ್ತಿಯ ಚೌಡೇಶ್ವರಿನಗರದ ಬಿ.ಬೆಸ್ಟ್ ಶಾಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆಗಳು ಅಭಿವೃದ್ಧಿಯಾಗದೇ, ಚರಂಡಿ ವ್ಯವಸ್ಥೆ ಸರಿಯಾಗಿಲ್ಲದೇ ನಾಗರಿಕರು ನರಕಯಾತನೆ ಅನುಭವಿಸುತ್ತಿದ್ದಾರೆ.

ಚರಂಡಿ ವ್ಯವಸ್ಥೆಯಿಲ್ಲದ ಕಾರಣ, ಮಳೆ ಬಂದಾಗ ನೀರು ಮನೆಗಳಿಗೆ ನುಗ್ಗುತ್ತದೆ. ಮಳೆ ನೀರಿನೊಂದಿಗೆ ಮಣ್ಣು, ಕಲ್ಲುಗಳು ಕೊಚ್ಚಿಕೊಂಡು ಮನೆ ಅಂಗಳ ಸೇರುತ್ತವೆ' ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

ಬಡವರು, ಕೂಲಿ ಕಾರ್ಮಿಕರು, ಸಣ್ಣ ಕೈಗಾರಿಕೆಗಳಲ್ಲಿ ದುಡಿಯುವ ವರ್ಗದವರೆ ಹೆಚ್ಚಾಗಿ ವಾಸಿಸುವ ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಬಗ್ಗೆ ಜನಪ್ರತಿನಿಧಿಗಳು, ಅಧಿಕಾರಿಗಳು ತಾತ್ಸಾರ ಮಾಡುತ್ತಿದ್ದಾರೆ. ಬಿಡಿಎ ಬಡಾವಣೆ, ಖಾಸಗಿ ಬಡಾವಣೆಗಳಿಗೆ ತೋರುವ ಆಸಕ್ತಿಯನ್ನು ಬಡವರು ವಾಸಿಸುವ ಬಡಾವಣೆಗೆ ತೋರುವುದಿಲ್ಲ' ಎಂದು ನಿವಾಸಿ ವಸಂತ ಆಕ್ರೋಶ ವ್ಯಕ್ತಪಡಿಸಿದರು.

'ಹಲವು ವರ್ಷಗಳಿಂದ ನಮ್ಮ ಬಡಾವಣೆ ರಸ್ತೆಗೆ ಡಾಂಬರೀಕರಣ ಮಾಡಿಲ್ಲ. ಚರಂಡಿ ವ್ಯವಸ್ಥೆಯೂ ಇಲ್ಲ. ಮಳೆ ಬಂದಾಗ ರಸ್ತೆ ಕೆಸರು ಗದ್ದೆಯಂತಾಗುತ್ತದೆ. ಬೇಸಿಗೆಯಲ್ಲಿ ದೂಳು ತುಂಬುತ್ತದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

2010ರಿಂದ ಇಲ್ಲಿ ಮನೆಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದೇವೆ. ವಾರಕ್ಕೊಮ್ಮೆ ಕಾವೇರಿ ನೀರು ಬರುತ್ತದೆ. ಐದು ದಿನಕ್ಕೊಮ್ಮೆ ಬೋರ್‌ವೆಲ್ ನೀರು ಸಿಗುತ್ತದೆ. ಹಲವು ವರ್ಷಗಳ ಹಿಂದೆ ಒಳಚರಂಡಿ ವ್ಯವಸ್ಥೆ ಮಾಡಿದ್ದಾರೆ. ಆದರೆ ರಸ್ತೆ ಹಾಳಾಗಿದೆ' ಎನ್ನುತ್ತಾರೆ ಸ್ಥಳೀಯ ನಿವಾಸಿ ಸೋಮಶೇಖರ್.

'ಈ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಮಾಹಿತಿ ಇದೆ. ಈ ವರ್ಷದ ಕ್ರಿಯಾ ಯೋಜನೆಯ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು' ಎಂದು ಆರ್.ಆರ್.ನಗರ ಕ್ಷೇತ್ರದ ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ ಭರವಸೆ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಕಳವಳ

'ದೇಶದ ಸಂಸ್ಕೃತಿ ಮೇಲೆ ದಾಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಸಂಸ್ಕೃತಿ ಮೇಲೆ ನಡೆಯುತ್ತಿರುವ ದಾಳಿಯನ್ನು ತಡೆಯಲು ರಾಷ್ಟ್ರ ಪ್ರೇಮವನ್ನು ಜಾಗೃತಗೊಳಿಸಬೇಕು. ಈ ಮೂಲಕ ದೇಶದ ಅಸ್ಮಿತೆಯನ್ನು ಪುನರ್ ಸ್ಥಾಪಿಸಬೇಕು' ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಅಭಿಪ್ರಾಯಪಟ್ಟರು.

ಅದಮ್ಯ ಚೇತನ ಫೌಂಡೇಷನ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಅನಂತ ಸೇವಾ ಉತ್ಸವ'ದಲ್ಲಿ ಭಾಗವಹಿಸಿ, ಮಾತನಾಡಿದರು.

'ನಮ್ಮ ದೇಶ ಶಾಂತಿಗೆ ಹೆಸರುವಾಸಿ. ಯಾವುದೇ ದೇಶದ ಮೇಲೆ ಯುದ್ಧಕ್ಕೆ ಹೋಗಲಿಲ್ಲ. ಆದರೆ, ಈಗಲೂ ವಿಶ್ವದ ಹಲವು ದೇಶಗಳು ನಮ್ಮ ದೇಶದ ಸಂಸ್ಕೃತಿಯನ್ನು ನಾಶಪಡಿಸಲು ಸಮರ ಸಾರಿವೆ. ಸಾಂಸ್ಕೃತಿಕ ಯುದ್ಧ ಪ್ರಾರಂಭವಾಗಿದೆ. ಮಕ್ಕಳಲ್ಲಿ ವಿಷ ಬೀಜ ಬಿತ್ತುವ ಕೆಲಸವಾಗುತ್ತಿದೆ. ಇದರಿಂದಾಗಿ ನಮ್ಮ ದೇಶ ಸಂದಿಗ್ಧ ಪರಿಸ್ಥಿತಿಯಲ್ಲಿದ್ದು, ದೇಶದ ಅಸ್ಮಿತೆ, ರಾಷ್ಟ್ರಪ್ರಜ್ಞೆ ಮತ್ತು ಕ್ಷಾತ್ರ ತೇಜವನ್ನು ಮಕ್ಕಳಿಗೆ ತಿಳಿಸುವ ಅವಶ್ಯಕತೆ ಇದೆ' ಎಂದು ಹೇಳಿದರು.

'ವಿಶ್ವಕ್ಕೆ ಅದ್ಭುತ ಜ್ಞಾನ ಸಂಪತ್ತು, ಆಧ್ಯಾತ್ಮಿಕ ಕೊಡುಗೆ ಕೊಟ್ಟಿರುವ ಏಕೈಕ ರಾಷ್ಟ್ರ ಭಾರತ. ದೇಶದ ಅಸ್ಮಿತೆಗಾಗಿ ನಾವೆಲ್ಲರೂ ಇನ್ನಷ್ಟು ಜಾಗೃತಗೊಳ್ಳಬೇಕಿದೆ. ನಮ್ಮ ದೇಶದ ಇತಿಹಾಸವನ್ನು ತಿರುಚಿದ್ದು, ಅದನ್ನು ಸರಿಪಡಿಸುವ ಕೆಲಸವಾಗಬೇಕಿದೆ. ರಾಷ್ಟ್ರದ ಸಾಧನೆಗಳನ್ನು ಮೆಲುಕು ಹಾಕುವ ಮೂಲಕ ದೇಶದ ಅಸ್ಮಿತೆಯನ್ನು ಉಳಿಸುವಂತಾಗಬೇಕು' ಎಂದರು.

ಅದಮ್ಯ ಚೇತನ ಫೌಂಡೇಷನ್ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, 'ಸಂಸ್ಥೆಯು ಪ್ರತಿ ನಿತ್ಯ ಸಾವಿರಾರು ಜನರಿಗೆ ಹಸಿವು ನೀಗಿಸುವ ಕಾರ್ಯದಲ್ಲಿ ತೊಡಗಿದೆ. ಗ್ರಾಮೀಣಾಭಿವೃದ್ಧಿ, ಪರಿಸರ ಸಂರಕ್ಷಣೆ, ಹಸಿರು ಬೆಂಗಳೂರು, ಹಸಿರು ಭಾನುವಾರ, ಅನಂತವನ, ಮಳೆನೀರು ಕೊಯ್ಲು, ಚಾವಣಿ ಸೌರ ವಿದ್ಯುತ್ ಉತ್ಪಾದನೆ ಸೇರಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ನಮ್ಮ ಸಂಸ್ಥೆ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದೆ' ಎಂದು ಹೇಳಿದರು.

ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷ ಕೃಷ್ಣ ಭಟ್, ಶಾಸಕ ಸಿ.ಕೆ. ರಾಮಮೂರ್ತಿ, ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಉಪಸ್ಥಿತರಿದ್ದರು.

ಉತ್ಸವದಲ್ಲಿ 'ವಂದೇ ಮಾತರಂ' ಗೀತೆಯನ್ನು ಸಾಮೂಹಿಕವಾಗಿ ಪ್ರಸ್ತುತಪಡಿಸಲಾಯಿತು

ಜೈಲು ಹಕ್ಕಿಗಳಾಗಿದ್ದಾಗ ಮಾಡಿದ ನಾಟಕಗಳ ಅನುಭವ ಅನಾವರಣ

ಕೈದಿಗಳನ್ನು ಸಚ್ಚಾರಿತ್ರ್ಯರನ್ನಾಗಿಸಿದ ರಂಗಭೂಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವಾವಧಿ ಶಿಕ್ಷೆ ಅನುಭವಿಸುತ್ತಾ ಸಚ್ಚಾರಿತ್ರ್ಯ ತೋರಿದರೂ ಅದರ ಕಡತ ರಾಜ್ಯಪಾಲರ ಕಚೇರಿಗೆ ಹೋಗಿ ವಾಪಸ್ಸಾಗುತ್ತಿತ್ತು. ಒಂದು ಬಾರಿ ರಾಜ್ಯಪಾಲರೇ ಕೈದಿಗಳ ನಾಟಕ ನೋಡಿದ ಮೇಲೆ ಇಂಥವರು ಹೊರಗೆ ಇರಬೇಕು ಎಂದು ಕಡತಕ್ಕೆ ಸಹಿ ಹಾಕಿ ಬಿಡುಗಡೆ ಮಾಡಿದ್ದರು.

ಸುಮಾರು 25 ವರ್ಷಗಳ ಹಿಂದಿನ ಘಟನೆ ಇದು. ನಾಟಕ ನೋಡಿದವರು ಆಗಿನ ರಾಜ್ಯಪಾಲರಾದ ವಿ.ಎಸ್. ರಮಾದೇವಿ. ನಾಟಕ ಮಾಡಿಸಿದವರು 'ಸಂಕಲ್ಪ' ಮೈಸೂರು ಸಂಸ್ಥೆಯ ಸದಸ್ಯರು.

10 ವರ್ಷಕ್ಕಿಂತ ಅಧಿಕ ಸಜೆ ಅನುಭವಿಸಿದ, ಸನ್ನಡತೆ ಇರುವ ಎಲ್ಲ ಕೈದಿಗಳನ್ನು ಬಿಡುಗಡೆ ಮಾಡಿ ಎಂದು ಆಗ ರಮಾದೇವಿ ಸಹಿ ಹಾಕಿದ್ದನ್ನು, ಅದರಲ್ಲಿ ರಂಗಚಟುವಟಿಕೆಯಲ್ಲಿ ತೊಡಗಿಸಿಕೊಂಡವರೇ ಅಧಿಕ ಇದ್ದಿದ್ದನ್ನು ರಂಗನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಬಿಚ್ಚಿಟ್ಟರು. ಭಾನುವಾರ ನಡೆದ 'ಜೈಲಿನಿಂದ ಬಯಲಿಗೆ... ಬದಲಾದ ಬದುಕು' ಒಂದು ಮೆಲುಕು ಕಾರ್ಯಕ್ರಮ ಇದಕ್ಕೆ ವೇದಿಕೆಯಾಯಿತು.

'ಮಾರನಾಯಕನ ದೃಷ್ಟಾಂತ', 'ಜೂಲಿಯಸ್ ಸೀಸರ್', 'ಬ್ಯಾರಿಸ್ಟರ್ ಗಾಂಧಿ', 'ಬಸವಣ್ಣ', 'ಜೊತೆಗಿರುವನು ಚಂದಿರ' ಸಹಿತ ವಿವಿಧ ನಾಟಕಗಳಲ್ಲಿ ಪಾತ್ರಧಾರಿಗಳಾಗಿದ್ದ, ಆನಂತರ ಜೈಲಿನಿಂದ ಬಿಡುಗಡೆಗೊಂಡ ಮೈಸೂರು ಕರಿಮದ್ದನಹಳ್ಳಿಯ ಮಂಜೇಗೌಡ, ಪ್ರಕಾಶ್, ಸೋಮಶೇಖರ್, ಬೋಗಾದಿ ಮಹೇಶ್' ಆಡುವಳ್ಳಿ ಎಸ್.ವಿ. ರಮೇಶ್, ಗಣೇಶ್ ನಾಯ್ಕ್, ಪ್ರಶಾಂತ್ ಮೈಸೂರು, ಹಾಡುಗಾರ ಬಾಗಳಿ ಮಹೇಶ್ ಇನ್ನಿತರರು ಅನುಭವ ಹಂಚಿಕೊಂಡರು.

ಭಾರತೀಯ ವಿದ್ಯಾಭವನದಲ್ಲಿ ಭಾನುವಾರ ನಡೆದ 'ಜೈಲಿನಿಂದ ಬಯಲಿಗೆ ಬದಲಾದ ಬದುಕು' ಒಂದು ಮೆಲುಕು ಕಾರ್ಯಕ್ರಮದಲ್ಲಿ ಕಾರಾಗೃಹ ಇಲಾಖೆಯ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಅವರು ಅಪರಾಧ ಮುಕ್ತರಾಗಿ ಬಿಡುಗಡೆಗೊಂಡವರೊಂದಿಗೆ ಸಂವಾದ ನಡೆಸಿದರು ಪ್ರಜಾವಾಣಿ ಚಿತ್ರ

'ಕೊಲೆಗಾರನಾಗಿ ಜೈಲಲ್ಲಿದ್ದೆ. ನಾಟಕ ಮಾಡುತ್ತಿದ್ದೆ. ಒಂದು ಬಾರಿ ಪೆರೋಲ್‌ನಲ್ಲಿ ಹೊರಗೆ ಬಂದಿದ್ದೆ. ವಾಪಸ್ ಹೋಗಿ ನಾಟಕ ಮಾಡುವಾಗ ತಪ್ಪಾಗಿತ್ತು. ಆಗ ಕಟ್ಟಿಮನಿಯವರು ಮೂರು ದಿನ ಕುಡಿತ ಬಿಟ್ಟುಬಿಡು ಎಂದು ಸಲಹೆ ನೀಡಿದರು. ಅಂದು ಕುಡಿತ ಬಿಟ್ಟವನು ಇಂದಿನವರೆಗೆ ಕುಡಿದಿಲ್ಲ' ಎಂದು ಎಸ್.ವಿ. ರಮೇಶ್ ನೆನಪು ಮಾಡಿಕೊಂಡರು.

'ಕೊಲೆ ಆರೋಪದೊಂದಿಗೆ, ಹುಡುಗಿಯನ್ನು ಪ್ರೀತಿಸಿದ್ದ ಕಾರಣಕ್ಕೆ ದಾಖಲಿಸಿದ ಪ್ರಕರಣ ಸಹಿತ ಮೂರು ಪ್ರಕರಣಗಳು ದಾಖಲಾಗಿದ್ದವು. 2005ರಲ್ಲಿ ಜೈಲು ಸೇರಿದ್ದೆ. ಮಾನಸಿಕವಾಗಿ ಕುಗ್ಗಿ ಹೋಗಿದ್ದೆ. ಇಂಥ ಸಮಯದಲ್ಲಿ ನಾಟಕ ನನಗೆ ಹೊಸ ಬದುಕು ನೀಡಿತು. ಪಿಯುಸಿ ಮಾಡಿ ಜೈಲು ಸೇರಿದ್ದ ನಾನು ಬಿಡುಗಡೆಗೊಳ್ಳುವ ಹೊತ್ತಿಗೆ ದೂರಶಿಕ್ಷಣದ ಮೂಲಕ ಮನೋವಿಜ್ಞಾನ ವಿಷಯದಲ್ಲಿ ಪದವಿ ಪಡೆದೆ. ಇದಕ್ಕೆ ನಾಟಕ ಪ್ರೇರಣೆ' ಎಂದು ಪ್ರಶಾಂತ್ ಮೈಸೂರು ಸ್ಮರಿಸಿದರು.

'ಮನಪರಿವರ್ತನೆಗಾಗಿ ನಾಟಕ'

ಕೈದಿಯೊಬ್ಬ ಪರಿವರ್ತನೆಯಾದರೆ ಅವರ ಮನೆಗಷ್ಟೇ ಅಲ್ಲ, ಸಮಾಜಕ್ಕೂ ಒಳ್ಳೆಯದು ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಮಹಾನಿರ್ದೇಶಕಿ ಮಾಲಿನಿ ಕೃಷ್ಣಮೂರ್ತಿ ತಿಳಿಸಿದರು.

'ಸರ್ಕಾರದಿಂದ ಅನುದಾನ ಕಡಿಮೆಯಾದರೂ ಎಲ್ಲ ಜೈಲುಗಳಲ್ಲಿ ಕೈದಿಗಳ ಮನ ಪರಿವರ್ತನೆಗಾಗಿ ನಾಟಕ, ಕಲೆ ಸಹಿತ ಎಲ್ಲ ಚಟುವಟಿಕೆಗಳನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಪಡೆದಾದರೂ ಮುಂದುವರಿಸುತ್ತೇವೆ' ಎಂದು ಹೇಳಿದರು.

'ಕೈದಿ ಎಂಬ ಹಣೆಪಟ್ಟಿ ಇರುವವರು ನಾಟಕ, ಸಂಗೀತ, ಕಲೆಗಳ ಮೂಲಕ ಜನರಿಂದ ಚಪ್ಪಾಳೆ ಗಿಟ್ಟಿಸುವುದೇ ಪವಿತ್ರ ಕಾರ್ಯ' ಎಂದು ಸಾಹಿತಿ ಜಯಂತ ಕಾಯ್ಕಿಣಿ ಹೇಳಿದರು.

'ಕೈದಿಗಳ ಮನ ಪರಿವರ್ತನೆಯ ಜೊತೆಗೆ ಜೈಲಿನ ಅಧಿಕಾರಿಗಳ ಮನಸ್ಸೂ ಪರಿವರ್ತನೆಯಾಗಬೇಕು' ಎಂದು ಜಂಟಿ ಪೊಲೀಸ್ ಕಮಿಷನರ್ ಅನುಚೇತ್ ತಿಳಿಸಿದರು.

'ಸಂಕಲ್ಪ'ದ ಗೋಪಾಲ್ ಹೊಸೂರು, ನಿವೃತ್ತ ಜೈಲು ಸೂಪರಿಂಟೆಂಡೆಂಟ್ ಜಯರಾಮಯ್ಯ ಭಾಗವಹಿಸಿದ್ದರು.

ಮದ್ದೂರಿನ ಸೊಸೆ 'ಮಿಸೆಸ್ ಇಂಡಿಯಾ ಪ್ರೈಡ್ ಆಫ್ ನೇಷನ್'

ಮದ್ದೂರು (ಮಂಡ್ಯ ಜಿಲ್ಲೆ): ಇಲ್ಲಿನ ಡಾ.ಪ್ರಿಯಾ ಗೋಸ್ವಾಮಿ ನವದೆಹಲಿಯಲ್ಲಿ ಈಚೆಗೆ ನಡೆದ 'ಮಿಸೆಸ್ ಇಂಡಿಯಾ ಪ್ರೈಡ್ ಆಫ್ ನೇಷನ್ - 2024' ಆಗಿ ಹೊರಹೊಮ್ಮಿದ್ದಾರೆ.

ಐದು ದಿನಗಳು ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಪ್ರಿಯಾ ಅವರು 'ಎನ್‌ಚಾಂಟಿಂಗ್' ವಿಭಾಗದ ಕಿರೀಟ ತಮ್ಮದಾಗಿಸಿಕೊಂಡಿದ್ದಾರೆ. ಅದೇ ವೇದಿಕೆಯಲ್ಲಿ 'ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್' ಎಂಬ ಗೌರವಕ್ಕೂ ಪಾತ್ರರಾಗಿದ್ದಾರೆ.

ವೃತ್ತಿಯಲ್ಲಿ ಪಶು ವೈದ್ಯೆಯಾದ ಅವರು, ಪಂಜಾಬ್ ಮೂಲದವರು. ಗೋವಾದಲ್ಲಿ ಬೆಳೆದ ಅವರು, ಮದ್ದೂರಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿದ್ದರಾಜು ಅವರ ಪುತ್ರ ಭಾರತೀಯ ಸೇನೆಯಲ್ಲಿರುವ ಕರ್ನಲ್ ಸಂಜಿತ್ ಅವರನ್ನು ವರಿಸಿದ್ದಾರೆ. ಸಂಜಿತ್ ಪ್ರಸ್ತುತ ಉತ್ತರಾಖಂಡ್‌ನಲ್ಲಿ ಡೆಪ್ಯೂಟಿ ಕಮಾಂಡೆಂಟ್ ಆಗಿದ್ದಾರೆ ಎಂದು ಕುಟುಂಬದವರು ಮಾಹಿತಿ ನೀಡಿದರು.

ಡಾ.ಪ್ರಿಯಾ ಗೋಸ್ವಾಮಿ 'ಮಿಸೆಸ್ ಇಂಡಿಯಾ ಪ್ರೈಡ್ ಆಫ್ ನೇಷನ್ 2024' ಕಿರೀಟ ಪಡೆದುಕೊಂಡರು

ನಗರದಲ್ಲಿ ಇಂದು

'ಮನೆಗೊಂದು ಗ್ರಂಥಾಲಯ' ಯೋಜನೆಯ ಉದ್ಘಾಟನೆ, 'ಕುಮಾರವ್ಯಾಸ ಭಾರತ' ಸಂಪುಟಗಳ ಬಿಡುಗಡೆ: ಸಿದ್ದರಾಮಯ್ಯ, ಮುಖ್ಯಮಂತ್ರಿಯವರ ಮನೆಯ ಗ್ರಂಥಾಲಯಕ್ಕೆ ಚಾಲನೆ: ಹಂ.ಪ. ನಾಗರಾಜಯ್ಯ, ಗ್ರಂಥಾಲಯ ಫಲಕದ ಅನಾವರಣ: ಪುರುಷೋತ್ತಮ ಬಿಳಿಮಲೆ, ಶಿವರಾಜ ತಂಗಡಗಿ, ಅತಿಥಿಗಳು: ಎನ್. ಮಂಜುಳಾ, ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾ, ಕುಮಾರಕೃಪಾ, ಬೆಳಿಗ್ಗೆ 10.15

ಹಂ.ಪ. ನಾಗರಾಜಯ್ಯ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹೆಚ್ಚುವರಿ ಕಟ್ಟಡ ನಿರ್ಮಾಣದ ಶಿಲಾನ್ಯಾಸ, ಕೆಸೆಟ್-2024 ಪ್ರಮಾಣಪತ್ರ ವಿತರಣೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಡಾ.ಎಂ.ಸಿ. ಸುಧಾಕರ್, ಡಾ. ಶರಣಪ್ರಕಾಶ ಪಾಟೀಲ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ, ಸ್ಥಳ: ಕೆಇಎ ಕಚೇರಿ ಆವರಣ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

ಹುಣ್ಣಿಮೆ ಹಾಡು 'ತಬಲಾ ತರಂಗ್' ಉಸ್ತಾದ್ ಜಾಕಿರ್ ಹುಸೇನ್ ಅವರಿಗೆ ಸಂಗೀತ ಸಲಾಂ: ರಘುನಾಥ ನಾಕೋಡ ಧಾರವಾಡ, ತಬಲಾ: ವಿಶ್ವನಾಥ ನಾಕೋಡ, ರಾಜೇಂದ್ರ ನಾಕೋಡ, ರವಿಕಿರಣ ನಾಕೋಡ, ರಾಘವೇಂದ್ರ ನಾಕೋಡ, ಪಕವಾಜ: ಪ್ರಸಾದ ಮಡಿವಾಲರ, ಸಂವಾದಿನಿ: ಸತೀಶ್ ಕೊಳ್ಳಿ, ಸಂತೂರ: ಸುಮಾ ಹೆಗಡೆ, ಹಿಂದೂಸ್ತಾನಿ ಭಕ್ತಿ ಸಂಗೀತ: ರೇಣುಕಾ ನಾಕೋಡ, ಅತಿಥಿ: ಚಿತ್ರಾ ಸಂತೋಷ್, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ, ಯುವ ದಿನಾಚರಣೆ, ಸಂಕ್ರಾಂತಿ ಸಂಭ್ರಮದ ಉದ್ಘಾಟನೆ: ಸ್ವಾಮಿ ಜಪಾನಂದ ಮಹಾರಾಜ, ಉಪನ್ಯಾಸ: ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಸಮಾರೋಪ ಸಮಾರಂಭ: ಶಾಲಿನಿ ರಜನೀಶ್, ಸಂಕ್ರಾಂತಿ ಸಂಭ್ರಮದ ಅತಿಥಿಗಳು: ಪ್ರಮೀಳಾ ಬಾಯಿ, ಸಿಸ್ಟರ್ ಜೆನಿ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11ರಿಂದ

ರೈತರ ಎಲ್ಲ ಸಮಸ್ಯೆಗಳಿಗೂ ಒಂದೇ ಸಹಾಯವಾಣಿಯಲ್ಲಿ ಪರಿಹಾರ ಲಭ್ಯ

ಹೊಸ ಸ್ವರೂಪದಲ್ಲಿ ರೈತ ಕರೆ ಕೇಂದ್ರ

• ಗಾಣಧಾಳು ಶ್ರೀಕಂತ

ಬೆಂಗಳೂರು: ಕೃಷಿ ಇಲಾಖೆ ಆರಂಭಿಸಿರುವ 'ರೈತ ಕರೆ ಕೇಂದ್ರ' ಈಗ ಉನ್ನತೀಕರಣಗೊಂಡು ಹೊಸ ಸ್ವರೂಪದಲ್ಲಿ ಲಭ್ಯವಾಗುತ್ತಿದೆ. ಕರೆ ಮಾಡಿದವರು ತಮಗೆ ಬೇಕಾದ ವಿಭಾಗವನ್ನು ಆಯ್ಕೆ ಮಾಡಿಕೊಂಡು, ಅಗತ್ಯ ಮಾಹಿತಿ ಪಡೆಯುವಂತಹ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹಿಂದೆ ಕೀಟ-ರೋಗ, ಬೆಳೆ ವಿಮೆ ಸೇರಿದಂತೆ ಒಂದೊಂದು ವಿಭಾಗಕ್ಕೆ ಒಂದೊಂದು ಸಹಾಯವಾಣಿ ಇತ್ತು. ನಂತರದಲ್ಲಿ ಎಲ್ಲವನ್ನೂ ಒಗ್ಗೂಡಿಸಿ ಏಕೀಕೃತ ಶುಲ್ಕ ರಹಿತ ದೂರವಾಣಿ ಸಂಖ್ಯೆಯನ್ನಾಗಿ (18004253553) ಪರಿವರ್ತಿಸಿ (ಇಂಟಿಗ್ರೇಟೆಡ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ-ಐವಿಆರ್‌ಎಸ್), 2023ರ ಆಗಸ್ಟ್‌ನಲ್ಲಿ ಹೊಸ ರೂಪದಲ್ಲಿ 'ರೈತ ಕರೆ ಕೇಂದ್ರ'ವನ್ನು ಆರಂಭಿಸಲಾಯಿತು. ಪ್ರಾಯೋಗಿಕ ಹಂತದಲ್ಲಿದ್ದ ಈ ಕಾರ್ಯಾಚರಣೆ, ನಾಲ್ಕು ತಿಂಗಳಿನಿಂದ ಪರಿಪೂರ್ಣವಾಗಿ ಐವಿಆರ್‌ಎಸ್ ಮೂಲಕ ರೈತರಿಗೆ ಸೇವೆ ಒದಗಿಸಲು ಆರಂಭಿಸಿದೆ.

ಮುಖ್ಯಾಂಶಗಳು

- ಏಕೀಕೃತ ಶುಲ್ಕ ರಹಿತ ದೂರವಾಣಿ ಸಂಖ್ಯೆ
- ಒಂದು ಕರೆ, ನಾಲ್ಕು ಆಯ್ಕೆ
- ಇನ್ನಷ್ಟು ಉನ್ನತೀಕರಣದ ಹಾದಿಯಲ್ಲಿ

ಉನ್ನತೀಕರಿಸಿದ ಕರೆ ಕೇಂದ್ರದಲ್ಲಿ ಸದ್ಯ ಬೆಳೆ ಸಮೀಕ್ಷೆ, ಪ್ರಧಾನಮಂತ್ರಿ (ಪಿ.ಎಂ) ಕಿಸಾನ್ ಸಮ್ಮಾನ್, ಬೆಳೆ ವಿಮೆ ಮತ್ತು ಇತರೆ ಮಾಹಿತಿ ಎಂಬ ನಾಲ್ಕು ವಿಭಾಗಗಳಿವೆ. ಕರೆ ಮಾಡಿದವರಿಗೆ 'ಬೆಳೆ ಸಮೀಕ್ಷೆಗಾಗಿ ಒಂದು, ಪಿಎಂ ಕಿಸಾನ್ ಸಮ್ಮಾನ್‌ಗಾಗಿ ಎರಡು, ಬೆಳೆ ವಿಮೆ ಮಾಹಿತಿಗಾಗಿ ಮೂರು ಮತ್ತು ಇತರೆ ಮಾಹಿತಿಗಾಗಿ ನಾಲ್ಕನ್ನು ಒತ್ತಿ' ಎಂಬ ಸ್ವಯಂ ಚಾಲಿತ ಧ್ವನಿಯೊಂದು ಕೇಳುತ್ತದೆ. ರೈತರು ತಮಗೆ ಬೇಕಾದ ವಿಭಾಗವನ್ನು ಆಯ್ಕೆ ಮಾಡಿಕೊಂಡಾಗ, ಸಂಬಂಧಪಟ್ಟ ವಿಭಾಗದ ಸಿಬ್ಬಂದಿ ಕರೆ ಸ್ವೀಕರಿಸಿ ಮಾಹಿತಿ ನೀಡುತ್ತಾರೆ.

'ಸದ್ಯ ನಾಲ್ಕು ವಿಭಾಗಕ್ಕೆ ಮಾತ್ರ ಪ್ರತ್ಯೇಕ ಆಯ್ಕೆಗಳನ್ನು ನೀಡಲಾಗಿದೆ.

ಮುಂದೆ, ಉನ್ನತ ತಂತ್ರಜ್ಞಾನದೊಂದಿಗೆ ಕರೆ ಕೇಂದ್ರವನ್ನು ಇನ್ನಷ್ಟು ಉನ್ನತೀಕರಿಸಿ, ಮತ್ತಷ್ಟು ವಿಭಾಗಗಳನ್ನು ಸೇರಿಸಲಾಗುತ್ತದೆ. ಆ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ಕರೆ ಕೇಂದ್ರದ ಅಧಿಕಾರಿ ವಿವರಿಸಿದರು.

14 ಸಿಬ್ಬಂದಿ, 12 ಗಂಟೆ: ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ, ವಾರದ ಏಳು ದಿನಗಳೂ ಈ ಕೇಂದ್ರ ಕಾರ್ಯನಿರ್ವಹಿಸು ತ್ತದೆ. ಕೇಂದ್ರದ ನಿರ್ವಹಣೆಗಾಗಿ 14 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೆಳೆ ಸಮೀಕ್ಷೆ ವಿಭಾಗಕ್ಕೆ ಒಂಬತ್ತು, ಪಿಎಂ ಕಿಸಾನ್ ವಿಭಾಗಕ್ಕೆ ನಾಲ್ಕು ಮತ್ತು ಬೆಳೆ ವಿಮೆ ಮಾಹಿತಿಗೆ ಒಬ್ಬರನ್ನು ನಿಯೋಜಿಸಲಾಗಿದೆ. ಮೂರು ಪಾಳಿಯಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ.

'ನಿತ್ಯವೂ ರಾಜ್ಯದ ವಿವಿಧೆಡೆಯಿಂದ ಕರೆಗಳು ಬರುತ್ತಿವೆ. ಜುಲೈ- ಆಗಸ್ಟ್‌ನಲ್ಲಿ ಕರೆ ಸಂಖ್ಯೆಗಳು ಹೆಚ್ಚಿರುತ್ತವೆ. ಹದಿನೇಳು ತಿಂಗಳಿಂದ ಸುಮಾರು 1.48 ಲಕ್ಷ ಕರೆಗಳನ್ನು ಸ್ವೀಕರಿಸಿದ್ದೇವೆ. ಪಿಎಂ ಕಿಸಾನ್ ಸಮ್ಮಾನ್ ಮತ್ತು ಬೆಳೆ ವಿಮೆ ಪಾವತಿ ಬಗ್ಗೆ ಮಾಹಿತಿ ಕೋರಿ ಹೆಚ್ಚು ಕರೆಗಳು ಬರುತ್ತವೆ. ಬಹುತೇಕ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತದೆ. ಅಗತ್ಯವಿದ್ದರೆ, ಸಮೀಪದ ರೈತ ಸಂಪರ್ಕ ಕೇಂದ್ರ ಸಂಪರ್ಕಿಸಲು ಸಲಹೆ ನೀಡುತ್ತೇವೆ' ಎಂದು ಸಿಬ್ಬಂದಿ ತಿಳಿಸಿದರು.

ರೈತರಷ್ಟೇ ಅಲ್ಲ: ರೈತರಷ್ಟೇ ಅಲ್ಲದೇ, ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುವ ಕೃಷಿ ಅಧಿಕಾರಿಗಳು, ತಂತ್ರಾಂಶಗಳಲ್ಲಿ (ಅಪ್ಲಿಕೇಷನ್) ಉಂಟಾಗುವ ಸಮಸ್ಯೆಗಳ ಬಗ್ಗೆ ಪರಿಹಾರ ಕೇಳಲು ಕೇಂದ್ರಕ್ಕೆ ಕರೆ ಮಾಡುತ್ತಾರೆ. ಬೆಳೆ ಸಮೀಕ್ಷೆ ನಡೆಸುವ ಖಾಸಗಿ ಸಮೀಕ್ಷಾಕಾರರು, ರೈತ ಸಂಪರ್ಕ ಕೇಂದ್ರಗಳ ಸಿಬ್ಬಂದಿಯೂ ಕೆಲವೊಮ್ಮೆ ಕೇಂದ್ರದ ಸಹಾಯ ಪಡೆಯುತ್ತಾರೆ. ಹೀಗಾಗಿ, ರೈತ ಕರೆ ಕೇಂದ್ರಕ್ಕೆ ದಿನಪೂರ್ತಿ ಕರೆಗಳು ಬರುತ್ತವೆ ಎಂದು ಕೃಷಿ ಅಧಿಕಾರಿ ವಿವರಿಸಿದರು.

'ಮತ್ತಷ್ಟು ಸುಧಾರಣೆಗೆ ಕ್ರಮ'

'ಕೃತಕ ಬುದ್ಧಿಮತ್ತೆ(ಎಐ), ಮಷಿನ್ ಲರ್ನಿಂಗ್ ಲ್ಯಾಂಗ್ವೇಜ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡು, ಕರೆ ಕೇಂದ್ರವನ್ನು ಇನ್ನಷ್ಟು ಸುಧಾರಣೆ ಮಾಡುವ ಪ್ರಯತ್ನ ನಡೆಯುತ್ತಿದೆ. ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು, ಮಾರುಕಟ್ಟೆ ವಿಭಾಗ, ಹವಾಮಾನ ಇಲಾಖೆ ಸೇರಿದಂತೆ ಬೇರೆ ಇಲಾಖೆಗಳ ಸಮನ್ವಯ ಹಾಗೂ ಫ್ರೂಟ್ ಐಡಿ, ಇ-ಸ್ಯಾಪ್‌ನಂತಹ ತಂತ್ರಾಂಶಗಳ ದತ್ತಾಂಶಗಳನ್ನು ಬಳಸಿಕೊಂಡು ಕರೆ ಕೇಂದ್ರವನ್ನು ಉನ್ನತೀಕರಿಸಲಾಗುತ್ತದೆ' ಎಂದು ಕೃಷಿ ಇಲಾಖೆ ನಿರ್ದೇಶಕ ಜಿ.ಟಿ.ಪುತ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಶಸ್ತಿ ಪ್ರದಾನ

'ಪ್ರಜಾವಾಣಿ'ಯ ಮುಖ್ಯ ವರದಿಗಾರ ರಾಜೇಶ್ ರೈ ಚಟ್ಲ, 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ, 'ಪ್ರಜಾವಾಣಿ'ಯ ಸಹಾಯಕ ಸಂಪಾದಕ ಉದಯಕುಮಾರ್ ಎನ್. ಅವರು ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ನೀಡುವ ವಾರ್ಷಿಕ ಪ್ರಶಸ್ತಿಯನ್ನು ಭಾನುವಾರ ಪಡೆದುಕೊಂಡರು ಪ್ರಜಾವಾಣಿ ಚಿತ್ರ

'ಹಾಸನ ಜಿಲ್ಲೆಯಲ್ಲಿರುವುದು ಎರಡೇ ಪಕ್ಷ'

ಹಾಸನ:'ಹಾಸನ ಜಿಲ್ಲೆಯಲ್ಲಿ ಯಾವುದೇ ಪಕ್ಷ ಇಲ್ಲ. ಇರುವುದು ಎರಡೇ ಪಕ್ಷ. ಒಂದು ಎಚ್‌.ಡಿ. ದೇವೇಗೌಡರ ಪರ, ಇನ್ನೊಂದು ದೇವೇಗೌಡರ ವಿರುದ್ಧ ಪಕ್ಷ. ನಮ್ಮ ತಾತ ಹೇಳಿರುವ ಮಾತು ನನಗೆ ಈಗ ಅನುಭವಕ್ಕೆ ಬರುತ್ತಿದೆ' ಎಂದು ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಅಗ್ರಹಾರ ಗ್ರಾಮದಲ್ಲಿ ಶನಿವಾರ ರಾತ್ರಿ ತಮ್ಮ ಜನ್ಮದಿನದ ಸಂಭ್ರಮಾಚರಣೆಯಲ್ಲಿ ಮಾತನಾಡಿದ ಅವರು, ಪಕ್ಷ ವಿರೋಧಿಗಳನ್ನು ಅವಾಚ್ಯವಾಗಿ ನಿಂದಿಸಿದರು. 'ಪೆನ್‌ಡ್ರೈವ್ ಹಂಚಿ ನಾನು ಎಂಎಲ್‌ಸಿ ಆಗಿಲ್ಲ. ಪಕ್ಷದ ಕಾರ್ಯಕರ್ತರಿಗೆ ಯಾವುದೇ ಇಲಾಖೆಯಲ್ಲಿ ತೊಂದರೆ ಯಾದರೆ ನನ್ನ ಗಮನಕ್ಕೆ ತನ್ನಿ. ಯಾರು ಬರುತ್ತಾರೋ, ಬಿಡುತ್ತಾರೋ, ನಾನು ಮಾತ್ರ ಬರುತ್ತೇನೆ' ಎಂದು ಹೇಳಿದರು.

'ನಮ್ಮ ತಾತ ದೇವೇಗೌಡರು ಯಾವುದೇ ಜಾತಿ ನೋಡಬೇಡ ಎಂದಿದ್ದಾರೆ. ಒಮ್ಮೆ ಒಂದು ಸಮುದಾಯ ಕೈಬಿಡಬಹುದು. ಆದರೆ, ಅವರಿಗೆ ಅರ್ಥವಾದ ಬಳಿಕ ನಿನ್ನ ಕೈಹಿಡಿಯುತ್ತಾರೆ ಎಂದು ಹೇಳಿದ್ದಾರೆ' ಎಂದರು.

ಕೇಂದ್ರ ಸಚಿವ ಎಚ್‌. ಡಿ. ಕುಮಾರಸ್ವಾಮಿ ಹೇಳಿಕೆ

'ತೆರಿಗೆ ಪಾಲು; ಕಾಂಗ್ರೆಸ್‌ನದ್ದೇ ತಪ್ಪು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದ ತೆರಿಗೆ ಆದಾಯದ ಪಾಲಿನಲ್ಲಿ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಆದರೆ ಅಂತಹ ಅನ್ಯಾಯ ಆಗಿದ್ದು, ಕಾಂಗ್ರೆಸ್‌ನಿಂದಲೇ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನೆಹರೂ ಕಾಲದಲ್ಲಿ ಹಣಕಾಸು ಆಯೋಗದ ಪರಿಕಲ್ಪನೆಯನ್ನು ಜಾರಿಗೆ ತಂದು, ಆಯೋಗದ ಶಿಫಾರಸಿನಂತೆ ರಾಜ್ಯಗಳಿಗೆ ತೆರಿಗೆ ಪಾಲು ಕೊಡುವ ಪದ್ಧತಿ ಜಾರಿಗೆ ತರಲಾಯಿತು. ಈಗಲೂ ಅದೇ ಪದ್ಧತಿಯಂತೆ ರಾಜ್ಯಕ್ಕೆ ತೆರಿಗೆ ಹಣ ಹಂಚಲಾಗಿದೆ. ಇದನ್ನು ಕಾಂಗ್ರೆಸ್‌ನವರು ಆಗಲೇ ವಿರೋಧಿಸಬೇಕಿತ್ತು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಈಗ ತೆರಿಗೆ ಅನ್ಯಾಯ ಎಂದು ಕೂಗಾಡುವ ಬದಲಿಗೆ, ಹಣಕಾಸು ಆಯೋಗದ ನಿಯಮಗಳಿಗೆ ತಿದ್ದುಪಡಿ ತಂದು ತೆರಿಗೆ ಪಾಲು ಹೆಚ್ಚಿಸಿಕೊಳ್ಳ ಬೇಕಿತ್ತು. ಮನಮೋಹನ ಸಿಂಗ್ ಅವರ ಸರ್ಕಾರ ಹತ್ತು ವರ್ಷ ಇತ್ತು. ಆಗ ಏಕೆ ಈ ಅನ್ಯಾಯವನ್ನು ಸರಿಪಡಿಸಿಕೊಳ್ಳಲಿಲ್ಲ' ಎಂದು ಪ್ರಶ್ನಿಸಿದರು.

ನೈಸ್- ರೈತರಿಗೆ ಪರಿಹಾರವೆಲ್ಲಿ: 'ನೈಸ್ ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡಿ ಎಂದು ಸುಪ್ರೀಂ ಕೋರ್ಟ್ ಆದೇಶಿಸಿ ಎಷ್ಟು ದಿನಗಳಾದವು. ಈವರೆಗೆ ಪರಿಹಾರವನ್ನೇಕೆ ನೀಡಿಲ್ಲ' ಎಂದು ಪ್ರಶ್ನಿಸಿದರು. '22 ವರ್ಷ ಕಳೆದರೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಕೊಡದ ಅಧಿಕಾರಿಗಳ ಉದಾಸೀನತೆ ಬಗ್ಗೆ ಸುಪ್ರೀಂ ಕೋರ್ಟ್ ಕಿಡಿಕಾರಿತ್ತು. ಆದರೂ ಈ ರಾಜ್ಯ ಸರ್ಕಾರ ರೈತರ ಹಿತ ಮರೆತು ಗಾಢನಿದ್ರೆಯಲ್ಲಿದೆ. ಸಚಿವ ಎಂ.ಬಿ.ಪಾಟೀಲ ಏನು ಮಾಡುತ್ತಿದ್ದಾರೆ' ಎಂದರು.

ಒಕ್ಕಲಿಗರ ಸಭೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಗಣತಿ ವಿಚಾರಕ್ಕೆ ಈಗಲೇ ಸಭೆ ಕರೆದು ಗೊಂದಲ ಸೃಷ್ಟಿಸುವುದು ಬೇಡ, ಸಭೆಯನ್ನು ಸ್ವಲ್ಪ ಸಮಯ ಮುಂದೂಡಲು ಒಕ್ಕಲಿಗರ ಸಂಘದ ಪದಾಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಜಾತಿ ಗಣತಿ ವಿಚಾರವಾಗಿ ಪ್ರತ್ಯೇಕ ಸಭೆ ನಡೆಸಲು ಸಂಘದ ಮುಖಂಡರು ನಿರ್ಧರಿಸಿದ್ದರು. ಆ ಸಭೆಯಲ್ಲಿ ನಾನು ಭಾಗವಹಿಸುವುದಿಲ್ಲ. ಸಭೆ ಸದ್ಯಕ್ಕೆ ಬೇಡ ಎಂದು ಸ್ಪಷ್ಟಪಡಿಸಿದ್ದೇನೆ. ಜಾತಿಗಣತಿ ವಿಚಾರವಾಗಿ ಸಮಾಜದ ಶ್ರೀಗಳ ಜತೆ ಮಾತನಾಡುವ ಭರವಸೆ ನೀಡಿದ್ದೇನೆ' ಎಂದರು.

ಕಿತ್ತಾಡಿಕೊಂಡರೆ ಆಡಳಿತಾಧಿಕಾರಿ ನೇಮಕ: 'ಒಕ್ಕಲಿಗರ ಸಂಘದ ಹೊಸ ಪದಾಧಿಕಾರಿಗಳ ತಂಡ ರಾಜಿ ಮಾಡಿಕೊಂಡಿದ್ದಾರೆ. ಮತ್ತೆ ಪದಾಧಿಕಾರಿಗಳ ಮಧ್ಯೆ ಕಿತ್ತಾಟ ನಡೆದರೆ ಆಡಳಿತಾಧಿಕಾರಿ ನೇಮಿಸುವುದಾಗಿ ಎಚ್ಚರಿಕೆ ನೀಡಿದ್ದೇನೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡುವುದಾಗಿ ಹೇಳಿದ್ದಾರೆ' ಎಂದರು.

'ರಾಜ್ಯ ಸರ್ಕಾರದ ಜಾತಿ ಗಣತಿ ವರದಿ ದೋಷ ಪೂರಿತ'

'ರಾಜ್ಯ ಸರ್ಕಾರ 10 ವರ್ಷಗಳ ಹಿಂದೆ ನಡೆಸಿದ ಜಾತಿಗಣತಿಯ ವರದಿಯನ್ನು ಮತ್ತೆ -ಮತ್ತೆ ಪರಿಶೀಲನೆಗೆ ನೀಡಲಾಗುತ್ತಿದೆ. ಆ ವರದಿ ದೋಷಪೂರಿತವಾಗಿದೆ. ಅದನ್ನು ಬಿಡಿ. ರಾಜ್ಯ ಸರ್ಕಾರದಲ್ಲಿ ದುಡ್ಡಿಗೇನೂ ಬರವಿಲ್ಲ. ಗಂಜಿ ಕೇಂದ್ರಗಳಿಗಾಗಿ ಬಾಯಿಬಿಟ್ಟುಕೊಂಡು ಹಲವರು ಕಾದಿದ್ದಾರೆ. ಅವರನ್ನು ಸೇರಿಸಿಕೊಂಡು ಸಮಿತಿ ರಚಿಸಿ, ಅವರಿಂದ ಹೊಸದಾಗಿ ಗಣತಿ ಮಾಡಿಸಿ' ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

'ಜಾತಿಗಣತಿ ವರದಿ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುತ್ತಲೇ ಇರುತ್ತಾರೆ. ಆದರೆ, ಕಾಂತರಾಜ ವರದಿ ಸರ್ಕಾರದ ಕೈ ಸೇರಿ ಎಷ್ಟು ವರ್ಷವಾಯಿತು? ಜಾತಿಗಳ ಸಮಸ್ಯೆಗಳಿಗೆ ಇವರು ಪರಿಹಾರ ಕೊಟ್ಟಿದ್ದಾರೆಯೇ? ಸಿದ್ದರಾಮಯ್ಯ ಏಳು ವರ್ಷಗಳವರೆಗೆ ಮುಖ್ಯಮಂತ್ರಿ ಆಗಿದ್ದರು. ಹೀಗಿದ್ದರೂ ಏನೂ ಮಾಡಿಲ್ಲ' ಎಂದು ದೂರಿದರು.

'ಈ ಕೆಲಸ ಮಾಡಲು ಸಾಧ್ಯವಾಗದೇ ಇದ್ದರೆ, ಸ್ವಲ್ಪ ಕಾಯಿರಿ. ಕೇಂದ್ರ ಸರ್ಕಾರವೇ ಜಾತಿಗಣತಿ ನಡೆಸಲು ತೀರ್ಮಾನಿಸಿದೆ. ಅದು ಬರುವವರೆಗೂ ಕಾಯಿರಿ' ಎಂದರು.

ಹೊಸ ಗಣತಿಗೆ ಒತ್ತಾಯ

ಹೊಸದಾಗಿ ಜಾತಿಗಣತಿ ನಡೆಸಬೇಕು ಎನ್ನುವುದು ಒಕ್ಕಲಿಗ ಸಮುದಾಯದ ಒತ್ತಾಯ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಜಾತಿಗಣತಿ ವಿಚಾರವನ್ನು ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಹಾಗಾಗಿ, ಭಾನುವಾರ ನಡೆಯಬೇಕಿದ್ದ ಸಂಘದ ಸಭೆ ಮುಂದೂಡಿದ್ದೇವೆ' ಎಂದರು.

'ಸರ್ಕಾರವನ್ನು ಉರುಳಿಸುವ ತಾಕತ್ತು ಹೊಂದಿರುವ ಸಮುದಾಯ ನಮ್ಮದು. ಅದಕ್ಕೆ ಈ ಹಿಂದೆ ಅನೇಕ ಉದಾಹರಣೆಗಳಿವೆ. ಬೇಡಿಕೆ ಈಡೇರಿಕೆಗೆ ಸರ್ಕಾರ ಗಮನ ಕೊಡಬೇಕು' ಎಂದರು.

ಸಂಪುಟ ಸಭೆಯಲ್ಲಿ ತೀರ್ಮಾನ: ಮುಖ್ಯಮಂತ್ರಿ ಸಿದ್ದರಾಮಯ್ಯ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಜಾತಿ ಗಣತಿ ವರದಿಯ ಪರ, ವಿರೋಧ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ. ₹160 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಲಾದ ವರದಿಯನ್ನು ಸ್ವೀಕರಿಸಲಾಗಿದ್ದು, ವರದಿಯ ಜಾರಿಯ ಬಗ್ಗೆ ತೀರ್ಮಾನ ಕೈಗೊಳ್ಳಲು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಾತಿ ಗಣತಿ ವರದಿಗೆ ವಿರೋಧ ವ್ಯಕ್ತವಾಗಿರುವ ಬಗ್ಗೆ ಭಾನುವಾರ ಇಲ್ಲಿ ಪ್ರತಿಕ್ರಿಯಿಸಿದರು.

ಆರೋಪಿಗಳನ್ನು ಬಂಧಿಸದಿದ್ದರೆ; ಕರಾಳ ಸಂಕ್ರಾಂತಿ ಆಚರಣೆ: ಎಚ್ಚರಿಕೆ

ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ: ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ವ್ಯಾಪ್ತಿಯಲ್ಲಿ ಹಸುಗಳ ಕೆಚ್ಚಲುಗಳನ್ನು ಕೊಯ್ದು ರಾಕ್ಷಸೀಯ ಕೃತ್ಯ ಎಸಗಿರುವ ಆರೋಪಿಗಳನ್ನು ಪತ್ತೆ ಮಾಡಿ ಕಠಿಣ ಕ್ರಮ ತೆಗೆದುಕೊಳ್ಳದೇ ಇದ್ದರೆ ರಾಜ್ಯದಾದ್ಯಂತ ಕರಾಳ ಸಂಕ್ರಾಂತಿ ಆಚರಿಸಲಾಗುವುದು ಎಂದು ಬಿಜೆಪಿ ನಾಯಕರು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದ ಬಸವರಾಜ ಬೊಮ್ಮಾಯಿ ಮತ್ತಿತರ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ಅಶೋಕ ಅವರು ಸುದ್ದಿಗಾರರ ಜತೆ ಮಾತನಾಡಿ, 'ಇದು ಜಿಹಾದಿಗಳು ಕೃತ್ಯ. ಇಡೀ ದೇಶವೇ ಗೋವನ್ನು ಪವಿತ್ರ ಎಂದು ಪರಿಗಣಿಸಿದೆ. ಸಂಕ್ರಾಂತಿ ಹಬ್ಬದಲ್ಲಿ ಗೋವನ್ನು ಪೂಜಿಸಲಾಗುತ್ತದೆ. ಈ ಸಂದರ್ಭದಲ್ಲೇ ಕೆಚ್ಚಲು ಕೊಯ್ದಿರುವುದು ಆಘಾತ ಉಂಟು ಮಾಡಿದೆ. ಇಂತಹ ಜಿಹಾದಿ ಮನಸ್ಥಿತಿಯನ್ನು ನಾನು ಈವರೆಗೆ ನೋಡಿಲ್ಲ' ಎಂದು ಕಿಡಿಕಾರಿದರು.

ಆರ್‌ ಅಶೋಕ

ಬಿ.ಎಸ್‌ ಯಡಿಯೂರಪ್ಪ

'ನೂರಾರು ವರ್ಷಗಳಿಂದ ಚಾಮರಾಜಪೇಟೆಯಲ್ಲಿ ಪಶು ಆಸ್ಪತ್ರೆ ಇದೆ. ಈ ಭೂಮಿಯನ್ನು ವಕ್ಫ್ ಮಂಡಳಿಗೆ ಸೇರಿಸಲು ಪ್ರಯತ್ನ ನಡೆದಿತ್ತು. ಆಗ ಸರ್ಕಾರದ ವಿರುದ್ಧ ಪ್ರತಿಭಟಿಸುವುದರ ಜೊತೆಗೆ ಕೋರ್ಟ್ ಮೊರೆ ಹೋಗಲಾಯಿತು. ಪ್ರತಿಭಟನೆ ವೇಳೆ ಇವೇ ಹಸುಗಳನ್ನು ತೋರಿಸಲಾಗಿತ್ತು. ಅದಕ್ಕಾಗಿ ಮಚ್ಚು, ಡ್ರ್ಯಾಗರ್ ಬಳಸಿ ಹಸುಗಳ ಕೆಚ್ಚಲು ಕೊಯ್ದು, ಕಾಲು ಕತ್ತರಿಸಲಾಗಿದೆ' ಎಂದು ಹೇಳಿದರು.

ಕಾಂಗ್ರೆಸ್ ನಾಯಕರು ಮತಕ್ಕಾಗಿ ದೇವಸ್ಥಾನಕ್ಕೆ ಹೋಗುತ್ತಾರೆ. ಇವರಿಗೆ ಹಿಂದೂ ಧರ್ಮದ ಬಗ್ಗೆ ಶ್ರದ್ಧೆ ಇಲ್ಲ. ಹಿಂದೂಗಳಲ್ಲಿ ಭೀತಿ ಹುಟ್ಟಿಸಲು ಜಿಹಾದಿಗಳು ಇಂತಹ ದುಷ್ಕೃತ್ಯ ನಡೆಸಿದರೂ ಖಂಡಿಸುವುದಿಲ್ಲ. ಇವರು ಯಾವ ಮುಖ ಇಟ್ಟುಕೊಂಡು ಸಂಕ್ರಾಂತಿ ಆಚರಿಸುತ್ತಾರೆ ಎಂದು ಅಶೋಕ ಪ್ರಶ್ನಿಸಿದರು.

ಪರಮ ನೀಚ ಕೃತ್ಯ- ಬಿಎಸ್‌ವೈ: ಇದೊಂದು ಅನಾಗರಿಕ ಕೃತ್ಯ ಮಾತ್ರವಲ್ಲ, ನೀಚತನದ ಪರಮಾವಧಿ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕಿಡಿಕಾರಿದ್ದಾರೆ.

ಗೋಮಾತೆಯನ್ನು ಪೂಜಿಸುವ ಕೋಟ್ಯಂತರ ಜನರ ಭಾವನೆಗಳಿಗೆ ಧಕ್ಕೆ ಉಂಟಾಗುವುದೆಂದು ಗೊತ್ತಿದ್ದರೂ ದುರುಳರು ಇಂತಹ ದುಷ್ಕೃತ್ಯ ನಡೆಸುತ್ತಾರೆ ಎಂದರೆ ಅದು ರಾಜ್ಯದ ಕಾನೂನು ಸುವ್ಯವಸ್ಥೆಗೆ ಕನ್ನಡಿ ಹಿಡಿದಿದೆ ಎಂದೇ ಹೇಳಬೇಕು. ರಾಜ್ಯ ಸರ್ಕಾರ ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಿ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಇನ್ನೊಮ್ಮೆ ಯಾರೂ ಇಂತಹ ಅಮಾನವೀಯ ದುಷ್ಕೃತ್ಯ ನಡೆಸದಂತೆ ಎಚ್ಚರವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ನೆಮ್ಮದಿ ಕಸಿಯುತ್ತಿರುವ ಓಟ್ ಬ್ಯಾಂಕ್: 'ಕ್ರೌರ್ಯ ಮೆರೆದಿರುವ ಘಟನೆ ಎಲ್ಲರಲ್ಲೂ ತೀವ್ರ ವೇದನೆ ಸೃಷ್ಟಿಸಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಸೃಷ್ಟಿಸಿದೆ' ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಹೇಳಿದ್ದಾರೆ.

ಪುಂಡರನ್ನು ಬಂಧಿಸಿ, ಶಿಕ್ಷಿಸಿ: ಬೊಮ್ಮಾಯಿ

'ಹಸುಗಳ ಕೆಚ್ಚಲು ಕೊಯ್ದ ದುರುಳರ ಕೃತ್ಯ ಅತ್ಯಂತ ಅಮಾನವೀಯ. ಗೋಮಾತೆಯನ್ನು ತಾಯಿಯಂತೆ ಪೂಜಿಸುವ ನಮಗೆಲ್ಲ ಇದರಿಂದ ಘಾಸಿಯಾಗಿದೆ. ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿ ಸಂದರ್ಭದಲ್ಲಿ ರಾಜಧಾನಿಯಲ್ಲೇ ಇಂತಹ ಅಮಾನವೀಯ ಕೆಲಸ ಮಾಡಿರುವ ಪುಂಡರಿಗೆ ಸರ್ಕಾರದ ಭಯವೇ ಇಲ್ಲದಂತೆ ಕಾಣಿಸುತ್ತಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

'ಮೂಕ ಪ್ರಾಣಿಗಳ ಮೇಲೆ ಮಾಡಿರುವ ಇಂತಹ ಕೃತ್ಯವನ್ನು ಅಂತಃಕರಣ ಇರುವವರು ಯಾರೂ ಕ್ಷಮಿಸಲು ಸಾಧ್ಯವಿಲ್ಲ. ಈ ಸರ್ಕಾರಕ್ಕೆ ಗೋಮಾತೆಯ ಮೇಲೆ ಕಿಂಚಿತ್ತಾದರೂ ಗೌರವ ಇದ್ದರೆ ಇಂತಹ ಹೇಯ ಕೃತ್ಯ ಮಾಡಿರುವ ಪುಂಡರನ್ನು ಪತ್ತೆ ಹಚ್ಚಿ ತಕ್ಷಣ ಬಂಧಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

'ಕೃತ್ಯದ ಹಿಂದಿನ ಶಕ್ತಿಯನ್ನು ಬಗ್ಗು ಬಡಿಯಿರಿ'

'ಇರಿಯುವುದು, ಕತ್ತರಿಸುವುದನ್ನು ಕೇಳಿದ್ದೇವೆ. ಆದರೆ, ಮಾತೃ ಕೊರತೆ ನೀಗಿಸಲು ಕ್ಷೀರಧಾರೆ ಹರಿಸುವ ಕೆಚ್ಚಲನ್ನೇ ಕತ್ತರಿಸುವಷ್ಟು ಪರಮ ನೀಚ ಕೃತ್ಯಕ್ಕೆ ಇಳಿದಿರುವ ಘಟನೆ ಕರ್ನಾಟಕದ ರಾಜಧಾನಿಯಲ್ಲೇ ನಡೆಯುತ್ತಿದೆ. ಇದರ ಹಿಂದಿರುವ ಕುಮ್ಮಕ್ಕಿನ ಶಕ್ತಿ ಯಾವುದು ಎನ್ನುವುದು ಊಹಿಸಿಕೊಳ್ಳದಷ್ಟು ಕರುನಾಡಿನ ಜನತೆ ಮುಗ್ಧರಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

'ಕೃತ್ಯ ನಡೆದಿರುವ ಕ್ಷೇತ್ರ ಯಾರ ಮುಷ್ಠಿಯಲ್ಲಿದೆ. ಈ ರಾಜ್ಯ ಆಳುತ್ತಿರುವವರ ಮನಸ್ಥಿತಿ ಯಾರ ಪರವಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ದಿನೇದಿನೇ ಹಿಂದೂ ಆಚಾರ-ವಿಚಾರ ಹಾಗೂ ಜನರ ಮೇಲೆ ಅಟ್ಟಹಾಸ ಮೇರೆ ಮೀರುತ್ತಿದೆ. ಜನರ ತಾಳ್ಮೆ ಕಟ್ಟೆ ಒಡೆಯುವ ಮುನ್ನ ಸರ್ಕಾರ ಎಚ್ಚೆತ್ತು ಈ ಕೃತ್ಯದ ಹಿಂದಿನ ಶಕ್ತಿಯನ್ನು ಬಗ್ಗುಬಡಿಯಬೇಕು' ಎಂದು ಒತ್ತಾಯಿಸಿದ್ದಾರೆ.

ಹಸುಗಳ ಕೆಚ್ಚಲು ಕೊಯ್ದು, ಕಾಲುಗಳಿಗೆ ಮಚ್ಚಿನೇಟು

ಒಂದನೇ ಪುಟದಿಂದ...

ಚಿಕ್ಕಪೇಟೆ ಉಪ ವಿಭಾಗದ ಎಸಿಪಿ ಹಾಗೂ ಚಾಮರಾಜಪೇಟೆ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿ ಹಾಗೂ ಕಾಟನ್‌ಪೇಟೆ ಠಾಣೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಘಟನೆ ಸಂಬಂಧ ಹಸು ಮಾಲೀಕ ಕರ್ಣ ಅವರು ನೀಡಿದ ದೂರಿನ ಮೇರೆಗೆ ಬಿಎನ್‌ಎಸ್ 325 (ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ) ಅಡಿ ಕಾಟನ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಈ ಪ್ರದೇಶದಲ್ಲಿ ಹಲವರು ರಸ್ತೆಯಲ್ಲಿ ಹಸುಗಳನ್ನು ಕಟ್ಟುತ್ತಾರೆ. ಗಾಯಗೊಂಡ ಹಸುಗಳಿಗೆ ಚಿಕಿತ್ಸೆ ಮುಂದುವರಿದಿದೆ. ಘಟನೆ ಸಂಬಂಧ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ ಹಾಗೂ ಸ್ಥಳೀಯರಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದ ಪಿ.ಸಿ. ಮೋಹನ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಹಸುವಿನ ಮಾಲೀಕ ಕರ್ಣ ಅವರಿಗೆ ಸಾಂತ್ವನ ಹೇಳಿದರು.

ಹಸುಗಳಿಗೆ ಚಿಕಿತ್ಸೆ ನೀಡಿದ ಪಶುವೈದ್ಯರು

'ಹಲವು ದಶಕಗಳಿಂದ ಈ ಪ್ರದೇಶದಲ್ಲಿ ಪಶು ಆಸ್ಪತ್ರೆ ಇದೆ. ಆಸ್ಪತ್ರೆಗೆ ಸೇರಿದ ಜಮೀನನ್ನು ವಕ್ಫ್ ಮಂಡಳಿಗೆ ಸೇರಿಸಲು ಪ್ರಯತ್ನ ನಡೆದಿತ್ತು. ಆಸ್ಪತ್ರೆ ಮುಚ್ಚುವುದರ ವಿರುದ್ಧ ಹಸುಗಳ ಮಾಲೀಕ ಕರ್ಣ ಹಾಗೂ ಇತರರು ವಿರೋಧ ವ್ಯಕ್ತಪಡಿಸಿದ್ದರು. ಹಾಗಾಗಿ ಈ ಕೃತ್ಯವೆಸಗಲಾಗಿದೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

'ನನ್ನ ಎಂಟು ಹಸುಗಳ ಪೈಕಿ ಮೂರು ಹಸುಗಳ ಕೆಚ್ಚಲು ಕೊಯ್ದು, ಮಚ್ಚಿನಿಂದ ಕಾಲುಗಳಿಗೆ ಹೊಡೆದು ಗಾಯಗೊಳಿಸಲಾಗಿದೆ. ಮೂಕ ಪ್ರಾಣಿಗಳು ರಾತ್ರಿಯಿಂದ ನರಳಾಡಿವೆ. ನನ್ನನ್ನು ಸಾಯಿಸುವ ಬದಲು ಮೂಕ ಪ್ರಾಣಿಗಳ ಮೇಲೆ ದಾಳಿ ನಡೆಸಿದ್ದಾರೆ. ನನಗೆ ಹೇಳಿದ್ದರೆ ಈ ಜಾಗವನ್ನೇ ಬಿಟ್ಟು ಹೋಗುತ್ತಿದ್ದೆ. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕು. ಅವರನ್ನು ಹಿಡಿದು ನಮಗೆ ಒಪ್ಪಿಸಿ, ಬುದ್ಧಿ ಕಲಿಸುತ್ತೇವೆ' ಎಂದು ಕರ್ಣ ಹೇಳಿದರು.

ಕಣ್ಣೀರಿಟ್ಟ ಸ್ಥಳೀಯರು: 'ಈ ಪ್ರದೇಶದಲ್ಲಿ ಮಾದಕ ವ್ಯಸನಿಗಳು, ಪುಂಡರ ಹಾವಳಿ ಮಿತಿ ಮೀರುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಪೊಲೀಸರು ವಿಫಲರಾಗಿದ್ದಾರೆ. ಮೂಕ ಪ್ರಾಣಿಗಳ ಮೇಲೆ ವಿಕೃತಿ ಮೆರೆದಿರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿರುವ ಸ್ಥಳೀಯರು, ಮೂಕಪ್ರಾಣಿಗಳ ನೋವು ಕಂಡು ಕಣ್ಣೀರಿಟ್ಟರು.

ತಪ್ಪಿತಸ್ಥರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಆಯುಕ್ತರಿಗೆ ಸೂಚಿಸಲಾಗಿದೆ. ಹಿಂದೂ ಸಂಘಟನೆಗಳ ಪ್ರತಿಭಟನೆ ರಾಜಕೀಯ ಪ್ರೇರಿತ
ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾವು ಪೂಜಿಸುವ ಹಸುವಿನ ಕೆಚ್ಚಲು ಕೊಯ್ಯುವ ಹೇಯ ಕೃತ್ಯ ನಡೆದಿದೆ. ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದ ಸ್ಥಿತಿಗೆ ಇದೇ ಸಾಕ್ಷಿ. ಗೃಹ ಸಚಿವರೇ ನಿಮ್ಮ ಬೆಣ್ಣೆಯ ಮಾತು ನಡೆಯುವುದಿಲ್ಲ
ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

'ಮಾನವೀಯತೆ ಇಲ್ಲದ ಕ್ರೂರಿಗಳು ಈ ರೀತಿಯ ಕೃತ್ಯ ಎಸಗಿದ್ದಾರೆ. ಘಟನಾ ಸ್ಥಳದಲ್ಲಿ ಎಲ್ಲಿಯೂ ಸಿಸಿಟಿವಿ ಕ್ಯಾಮೆರಾ ಅಳವಡಿಸಿಲ್ಲ. ಸರ್ಕಾರ, ಪೊಲೀಸ್ ಇಲಾಖೆ ಸತ್ತುಹೋಗಿದೆ. ಈ ಪ್ರದೇಶದಲ್ಲಿ ಮಾದಕ ವ್ಯಸನಿಗಳ ಕಾಟ ಮಿತಿಮೀರಿದೆ. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕು' ಎಂದು ಪಿ.ಸಿ.ಮೋಹನ್ ಆಗ್ರಹಿಸಿದರು.

'ಒಂದು ಹಸು 20 ಲೀಟರ್ ಹಾಲು ನೀಡುತ್ತಿತ್ತು. ಈಗ ಯಾವುದೇ ಹಸು ಬದುಕುವ ಸ್ಥಿತಿಯಲ್ಲೇ ಇಲ್ಲ. ಹಸು ಮಾಲೀಕರಿಗೆ ವೈಯಕ್ತಿಕವಾಗಿ ಒಂದು ಲಕ್ಷ ರೂಪಾಯಿ ನೀಡುತ್ತಿದ್ದೇನೆ. ಸರ್ಕಾರ ಕೂಡ ನೆರವು ನೀಡಬೇಕು' ಎಂದು ಆರ್.ಅಶೋಕ ಹೇಳಿದರು.

'ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಅನುಭವ ಹಂಚಿಕೊಂಡ ಅನ್ಬುರಾಜ್‌; ಗುಂಡು ತಾಗಿದ್ದ ಗೋಪಾಲ್ ಹೊಸೂರು

ಸಾವಿಗೆ ಕಾದವರೂ, ಪಾರಾದವರೂ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗಳ್ಳ ವೀರಪ್ಪನ್ ತಂಡವನ್ನು ಹೆಡೆಮುರಿ ಕಟ್ಟಲು ಮಲೆಮಹದೇಶ್ವರ ಬೆಟ್ಟದಲ್ಲಿ ಕೂಂಬಿಂಗ್ ನಡೆಸುತ್ತಿದ್ದ ಪೊಲೀಸ್ ಅಧಿಕಾರಿ ಮೇಲೆ ದಾಳಿ ಮಾಡಿದ್ದವರೂ, ಗುಂಡು ತಾಗಿ ಸ್ವಲ್ಪದರಲ್ಲೇ ಪಾರಾದವರೂ ಒಟ್ಟಿಗೆ ನಿಂತು ಅನುಭವ ಹಂಚಿಕೊಳ್ಳುವ ಸಂದರ್ಭಕ್ಕೆ ಈ ಭಾನುವಾರ ಸಾಕ್ಷಿಯಾಯಿತು.

ವೀರಪ್ಪನ್ ಸಂಗಾತಿ ಅನ್ಬುರಾಜ್ ಮತ್ತು ಆಗ ವಿಶೇಷ ಕಾರ್ಯಪಡೆಯ ಎಸ್‌ಪಿ ಆಗಿದ್ದ ಗೋಪಾಲ್ ಹೊಸೂರು 'ಸಂಕಲ್ಪ ಮೈಸೂರು' ಹಮ್ಮಿಕೊಂಡಿದ್ದ 'ಜೈಲಿನಿಂದ ಬಯಲಿಗೆ.. ಬದಲಾದ ಬದುಕು' ಒಂದು ಮೆಲುಕು ಕಾರ್ಯಕ್ರಮದಲ್ಲಿ ಒಟ್ಟಿಗೆ ನಿಂತು ಮಾತನಾಡಿ ಅಚ್ಚರಿ ಮೂಡಿಸಿದರು.

ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಗೋಪಾಲ್ ಹೊಸೂರು ಮತ್ತು ತಂಡ ತೊಡಗಿಸಿಕೊಂಡಿತ್ತು. ಆಗ ವೀರಪ್ಪನ್ ತಂಡವು ಗುಂಡಿನ ದಾಳಿ ನಡೆಸಿತ್ತು. ಒಂದು ಗುಂಡು ಹೊಸೂರು ಅವರ ಕುತ್ತಿಗೆಯ ಪಕ್ಕಕ್ಕೆ ತಗುಲಿತ್ತು. ದಾಳಿ ಮಾಡಿದ್ದ ತಂಡದಲ್ಲಿ ಅನ್ಬುರಾಜ್ ಕೂಡ ಇದ್ದರು. ಈ ತಂಡವು ಗೋಪಾಲ್ ಹೊಸೂರು ಅವರ ಸಾವು ಬಯಸಿತ್ತು. ಆದರೆ, ಹೊಸೂರು ಅವರು ಸಾವಿನ ದವಡೆಯಿಂದ ಪಾರಾಗಿ ಮರುಹುಟ್ಟು ಪಡೆದಿದ್ದರು.

1997ರಲ್ಲಿ ಸೆರೆ ಸಿಕ್ಕಿದ್ದ ಅನ್ಬುರಾಜ್ ಆನಂತರ ಜೈಲು ಪಾಲಾಗಿದ್ದರು. 20 ವರ್ಷ ಜೈಲುವಾಸ ಅನುಭವಿಸಿ ಬಿಡುಗಡೆಗೊಂಡಿದ್ದಾರೆ. ಅನ್ಬುರಾಜ್ ಮಾತನಾಡುವಂತೆ ಗೋಪಾಲ್ ಹೊಸೂರು ಸೂಚನೆ ನೀಡಿದರು. ಹೊಸೂರು ಮತ್ತು ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಮಧ್ಯೆ ನಿಂತು ಅನ್ಬುರಾಜ್ ಅನುಭವ ಹಂಚಿಕೊಂಡರು.

ಪರಾರಿಗಾಗಿ ನಾಟಕ: 'ನಾನು ಜೈಲ್ಲಲ್ಲಿ ಇರುವಾಗ ಪಾಪಿಲಾನ್ ಪುಸ್ತಕ ಓದುತ್ತಿದ್ದೆ. ಅದರಿಂದ ಪ್ರೇರಣೆ ಪಡೆದು ಪರಾರಿಯಾಗಲು ಯೋಚನೆ ಮಾಡಿದ್ದೆ. ಮೂರು ಗೋಡೆಗಳು ಇದ್ದ ಮೈಸೂರು ಜೈಲಿನಲ್ಲಿ ಎರಡು ಗೋಡೆಗಳನ್ನು ಆಗಾಗ ದಾಟಬಹುದಿತ್ತು. ಆದರೆ, ಮೂರನೇ ಗೋಡೆ ದಾಟಲು ಸೆಂಟ್ರಿಗಳು ಬಿಡುತ್ತಿರಲಿಲ್ಲ. ಅತ್ತ ಹೋದರೆ ಹೊಡೆಯುತ್ತಿದ್ದರು. ಗೋಡೆಯೂ ಎತ್ತರವಾಗಿತ್ತು' ಎಂದು ಅನ್ಬುರಾಜ್ ತಿಳಿಸಿದರು.

ನಿವೃತ್ತ ಐಪಿಎಸ್ ಅಧಿಕಾರಿ ಗೋಪಾಲ್ ಹೊಸೂರು ಮತ್ತು ರಂಗನಿರ್ದೇಶಕ ಹುಗಪ್ಪ ಕಟ್ಟಿಮನಿ ಮಧ್ಯೆ ನಿಂತು ವೀರಪ್ಪನ್ ಗ್ಯಾಂಗ್‌ನಲ್ಲಿದ್ದ ಅನ್ಬುಕುಮಾರ್ ಮಾತನಾಡಿದರು ಪ್ರಜಾವಾಣಿ ಚಿತ್ರ

'ಒಂದು ದಿನ ಮೂರನೇ ಗೋಡೆಯ ಪಕ್ಕದ ಅರಳಿಕಟ್ಟೆಯಲ್ಲಿ ಹುಲುಗಪ್ಪ ಕಟ್ಟಿಮನಿ ಕುಳಿತಿದ್ದರು. ಅವರು ನಾಟಕ ನಿರ್ದೇಶಕರು ಎಂಬುದು ಗೊತ್ತಿತ್ತು. ನಾಟಕ, ಅಭಿನಯಗಳ ಬಗ್ಗೆ ನನಗೇನೂ ತಿಳಿದಿರಲಿಲ್ಲ. ಆದರೆ, ಗೋಡೆ ಹಾರಿ ಪರಾರಿಯಾಗಲು ಅವಕಾಶ ಸಿಗಬಹುದು ಎಂಬ ದೂರಾಲೋಚನೆ ಇಟ್ಟುಕೊಂಡು ನಾಟಕಕ್ಕೆ ಸೇರಿದೆ' ಎಂದು ವಿವರಿಸಿದರು.

'ಹಿಂಸೆ, ಹೊಡೆತಗಳಿಂದ ಕೈದಿಯನ್ನು ಪರಿವರ್ತಿಸಲು ಸಾಧ್ಯವಿಲ್ಲ. ಆದರೆ, ಸಂಗೀತ, ಕಲೆ, ನಾಟಕಗಳಿಂದ ಪರಿವರ್ತನೆ ಸಾಧ್ಯ ಎಂಬುದಕ್ಕೆ ನಾನು ಸಾಕ್ಷಿ. ಪರಾರಿಯಾಗಲು ನಾಟಕಕ್ಕೆ ಸೇರಿ ಪರಾರಿಯಾಗುವ ವಿಚಾರವನ್ನೇ ಬಿಟ್ಟು ಪರಿವರ್ತನೆಗೊಂಡೆ. ನಾಟಕದ ಸಂದರ್ಭದಲ್ಲಿ ಭೇಟಿಯಾದ ಕೈದಿ ರೇವತಿಯವರನ್ನೇ ಪ್ರೀತಿಸಿದೆ. ನಮ್ಮಿಬ್ಬರ ನಡತೆ ನೋಡಿ ಮದುವೆಗಾಗಿ 10 ದಿನ ರಜೆ ನೀಡಿ ಪೆರೋಲ್‌ನಲ್ಲಿ ಕಳುಹಿಸಿದ್ದರು. ಮದುವೆಯಾದ ಮರುದಿನ ನಾನು ಮೈಸೂರು ಜೈಲಿಗೆ, ರೇವತಿ ಬೆಂಗಳೂರು ಜೈಲಿಗೆ ಬಂದೆವು. ಕನ್ನಡ ಕಲಿತು, ಕನ್ನಡದಲ್ಲಿಯೇ ಓದಿ ಡಿಗ್ರಿ ಮುಗಿಸಿದೆ. ನಮಗೆ ಬದುಕಿನ ಭರವಸೆ, ನಂಬಿಕೆ ಮೂಡಿಸಿದ್ದು ನಾಟಕ' ಎಂದು ನೆನಪು ಮಾಡಿಕೊಂಡರು.

ಜೈಲಿನಲ್ಲಿ ಬದಲಾವಣೆಗಾಗಿ, ಕೈದಿಗಳ ಪರಿವರ್ತನೆಗಾಗಿ ಕೈಗೊಂಡ ಪ್ರಮೇಯಗಳನ್ನು ಗೋಪಾಲ್ ಹೊಸೂರು ನೆನಪು ಮಾಡಿಕೊಂಡರು. ಹಿಂದಿನ ಯಾವುದೇ ಕಹಿ ಘಟನೆಗಳನ್ನು ಮನಸ್ಸಲ್ಲಿ ಇಟ್ಟುಕೊಳ್ಳದೇ ಕಾರ್ಯನಿರ್ವಹಿಸಿದ್ದರಿಂದ ಇದು ಸಾಧ್ಯವಾಯಿತು ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
1	(ದಕ್ಷಿಣ-ಪಶ್ಚಿಮ-1)	ಬೆಂಜಮಂ/ಕಾನಿಅದಪ-1/ತಾಂಅ/ಪಿಬಿ/4076/2024-25 ದಿನಾಂಕ: 09-01-2025	1	ರೂ. 8,71,346/- / ರೂ. 21,800/-	22-01-2025 ರ ಸಂಜೆ 4.00 ಗಂಟೆಯವರೆಗೆ	24-01-2025 ರ ಮಧ್ಯಾಹ್ನ 3.00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ-ಪಶ್ಚಿಮ-1)						
ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯನೀರು-ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
2	(ತ್ಯಾನೀನಿ-ಎಸ್‌ಟಿಪಿ-ಹೆಚ್&ಎ.ವಿ)	ಬೆಂಜಮಂ/ಕಾನಿಅ (ತ್ಯಾನೀನಿ-ಎಸ್‌ಟಿಪಿ-ಹೆಚ್&ಎ.ವಿ)/ಪಿಬಿ/517/2024-25 ದಿನಾಂಕ: 06-01-2025	1	ರೂ. 28.57 ಲಕ್ಷಗಳು / ರೂ. 57,138/-	20-01-2025 ರ ಸಂಜೆ 5.30 ಗಂಟೆಯವರೆಗೆ	22-01-2025 ರ ಬೆಳಿಗ್ಗೆ 11.00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಎಸ್‌ಟಿಪಿ-ಹೆಚ್&ಎ.ವಿ)						
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಳ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
3	(ಎಂಐಎಸ್)	ಬೆಂಜಮಂ/ಇಎಂಎಸ್/ಎಂಎಸ್-1/ಸಅ/244/2024-25 ದಿನಾಂಕ: 08-01-2025	1	ರೂ. 50,45,793/- / ರೂ. 1,21,000/-	20-01-2025 ರ ಮಧ್ಯಾಹ್ನ 3.00 ಗಂಟೆಯವರೆಗೆ	21-01-2025 ರ ಸಂಜೆ 4.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಎಂಐಎಸ್)						
ಮುಖ್ಯ ಅಭಿಯಂತರರ ಕಛೇರಿ (ಪೂರ್ವ-2), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
4	(ಪೂರ್ವ-2)	ಬೆಂಜಮಂ/2024-25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1892/ಕರೆ-3	1	ರೂ. 89,18,100/- / ರೂ. 1,78,400/-	20-01-2025 ರ ಸಂಜೆ 4.00 ಗಂಟೆಯವರೆಗೆ	21-01-2025 ರ ಸಂಜೆ 4.00 ಗಂಟೆಗೆ
5	(ಪೂರ್ವ-2)	ಬೆಂಜಮಂ/2024-25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್1813/ಕರೆ-3	2	ರೂ. 53,96,000/- / ರೂ. 1,07,920/-	20-01-2025 ರ ಸಂಜೆ 4.00 ಗಂಟೆಯವರೆಗೆ	21-01-2025 ರ ಸಂಜೆ 4.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ-2)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್‌ಸೈಟ್: https://kppp.karnataka.gov.in. ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ವಾಸಾಸಂಇ/ವಾ.ಪ್ರ/ಅಡ್ವರ್ಟೋ/4276/2024-25

ಟ್ಯಾಗೋರ್ ನ್ಯಾಷನಲ್ ಫೆಲೋಷಿಪ್

ಟ್ಯಾಗೋರ್ ನ್ಯಾಷನಲ್ ಫೆಲೋಷಿಪ್ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಉಪಕ್ರಮವಾಗಿದೆ.

ಅರ್ಹತೆ: ಅರ್ಜಿದಾರರು ಭಾರತೀಯ ಅಥವಾ ವಿದೇಶಿ ಪ್ರಜೆಯಾಗಿರಬೇಕು, ಮಾರ್ಗದರ್ಶನ / ಸಂಶೋಧನೆ ನಡೆಸುವಲ್ಲಿ 5 ವರ್ಷಗಳ ಅನುಭವ ಅಥವಾ ಕಲಾಕ್ಷೇತ್ರಗಳಲ್ಲಿ ಅನುಭವ ಹೊಂದಿರಬೇಕು. ಅವರು ತಮ್ಮ ಮೂಲ ಸಂಶೋಧನಾ ಪ್ರಬಂಧಗಳನ್ನು ಪ್ರತಿಷ್ಠಿತ ಮತ್ತು ಉಲ್ಲೇಖಿತ ಜರ್ನಲ್‌ಗಳು/ಪುಸ್ತಕಗಳಲ್ಲಿ ಪ್ರಕಟಿಸಿರಬೇಕು.

ವಿದ್ಯಾರ್ಥಿ ವೇತನ ಕೈಪಿಡಿ

ಆರ್ಥಿಕ ಸಹಾಯ: ಫೆಲೋಷಿಪ್ ಎರಡು ವರ್ಷಗಳವರೆಗೆ ₹80,000 ವರೆಗೆ ಗೌರವಧನ.

ಅರ್ಜಿ ಸಲ್ಲಿಸಲು ಕೊನೆ ದಿನ: 15-02-2025

ಅರ್ಜಿ ಸಲ್ಲಿಸುವ ವಿಧಾನ:

ಆಫ್‌ಲೈನ್: ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ನೋಡಲ್ ಸಂಸ್ಥೆಗಳಲ್ಲಿ ಪೋಸ್ಟ್ ಮೂಲಕ

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TNFC4

ಅಧ್ಯಯನಶೀಲ ವ್ಯಕ್ತಿತ್ವ ನಿಮ್ಮದಾಗಬೇಕೇ?

ಪರೀಕ್ಷೆ ಬಂತೆಂದರೆ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಪೋಷಕರಿಗೂ ಒತ್ತಡ. ಮಕ್ಕಳಿಗೆ ಪಠ್ಯದ ಓದು ಹಾಗೂ ಪರೀಕ್ಷೆ ಭಯವಿದ್ದರೆ, ಪೋಷಕರಿಗೆ ಮಕ್ಕಳು ಹೇಗೆ ಪರೀಕ್ಷೆ ಎದುರಿಸುತ್ತಾರೋ ಎಂಬ ಭಯವಿರುತ್ತದೆ. ಪರೀಕ್ಷಾ ಸಮಯದಲ್ಲಿ ಅಧ್ಯಯನ ಮಾಡುವುದು ಹೇಗೆ? ಎಂಬುದು ಪ್ರತಿ ವಿದ್ಯಾರ್ಥಿಯ ಪ್ರಶ್ನೆ. ಮಹಾತ್ಮಗಾಂಧಿ ಒಂದು ಕಡೆ ಹೀಗೆ ಹೇಳಿದ್ದಾರೆ; 'ನಾವು ಏನನ್ನು ಓದುತ್ತೇವೆಯೋ ಅದರ ಬಗ್ಗೆ ಚಿಂತಿಸಬೇಕು. ಅದನ್ನು ಜೀರ್ಣಿಸಿಕೊಳ್ಳಬೇಕು. ಅದು ನಿತ್ಯ ಜೀವನದ ಅವಿಭಾಜ್ಯ ಅಂಗವಾಗಬೇಕು'. ಒಮ್ಮೆ ಅಧ್ಯಯನಶೀಲ ವ್ಯಕ್ತಿತ್ವವನ್ನು ರೂಢಿಸಿಕೊಂಡರೆ ಎಂಥ ಪರೀಕ್ಷೆಯನ್ನಾದರೂ ಸುಲಭವಾಗಿ ಎದುರಿಸಬಹುದು. ಅಧ್ಯಯನಶೀಲ ವ್ಯಕ್ತಿತ್ವಕ್ಕಾಗಿ ಇಲ್ಲಿದೆ ಕೆಲವು ಸರಳ ಮಾರ್ಗಗಳು.

- ನಿಮ್ಮ ಬಗ್ಗೆ ನೀವೇ ಕೀಳು ಭಾವನೆಯನ್ನು ಇಟ್ಟುಕೊಳ್ಳಬೇಡಿ, ನನ್ನಿಂದಾಗದು ಎಂದುಕೊಳ್ಳಬೇಡಿ.
- ಗಣಿತ ನಿಮಗೆ ಸುಲಭವಾಗಿರಬಹುದು ಮತ್ತು ವಿಜ್ಞಾನ ಕಷ್ಟವಾಗಿರಬಹುದು. ಇದಕ್ಕಾಗಿ ವಿಜ್ಞಾನದ ಅಭ್ಯಾಸದತ್ತ ನಿಮ್ಮ ಗಮನವನ್ನು ಮೊದಲು ಕೇಂದ್ರೀಕರಿಸಿ.
- ನೀವು ಒಂದು ವಿಷಯದಲ್ಲಿ ಪರಿಣತರಾಗಿರುತ್ತೀರಿ. ಆದರೂ ಕೂಡ ಅದರಲ್ಲಿ ಸಣ್ಣ ಸಣ್ಣ ತಪ್ಪುಗಳನ್ನು ಮಾಡುತ್ತಿರುತ್ತೀರಿ. ಇಂತಹ ಚಿಕ್ಕಪುಟ್ಟ ತಪ್ಪುಗಳತ್ತ ಹೆಚ್ಚು ಗಮನಕೊಡಿ. ಮತ್ತು ಆ ತಪ್ಪುಗಳಿಂದ ಹೊರಬರಲು ಪ್ರಾಮಾಣಿಕ ಪ್ರಯತ್ನ ಮಾಡಿ.
- ನಿಮ್ಮ ಅಧ್ಯಯನಕ್ಕಾಗಿ ಒಂದು ವೇಳಾಪಟ್ಟಿಯನ್ನು ಮಾಡಿಕೊಳ್ಳಿ, ಯಾವುದೇ ಸಂದರ್ಭದಲ್ಲೂ ವೇಳಾಪಟ್ಟಿಯಿಂದ ವಿಚಲಿತರಾಗದಂತೆ ನೋಡಿಕೊಳ್ಳಿ.
- ಭಾಷೆ ಮತ್ತು ಸಾಮಾಜಿಕ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ಬೆಳಗಿನ (ಮುಂಜಾನೆ) ವೇಳೆಯಲ್ಲಿ ಅಭ್ಯಾಸ ಮಾಡಿ.
- ಗಣಿತಕ್ಕೆ ಸಂಬಂಧಿಸಿದ ಸಮಸ್ಯೆ, ಚಿತ್ರ ಮತ್ತು ನಕಾಶೆಗಳನ್ನು ರಾತ್ರಿಯ ಸಮಯದಲ್ಲಿ ಮಾಡಿ. ಇವುಗಳನ್ನು ಮಾಡುವಾಗ ಬಳಪ ಇಲ್ಲವೇ ಉದ್ದವಾದ ಕರಿಹಲಗೆಯನ್ನು ಬಳಸಿಕೊಳ್ಳಿ.
- ವಿಷಯವನ್ನು ಒಮ್ಮೆ ಸರಿಯಾಗಿ ಓದಿಕೊಳ್ಳಿ, ಬಳಿಕ ಪುಸ್ತಕ ಮುಚ್ಚಿಟ್ಟು ಏನನ್ನು ಓದಿರುವಿರೋ ಅದನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿ. ನಿಮಗೆ ಜ್ಞಾಪಕಕ್ಕೆ ಬಂದ ಅಂಶಗಳನ್ನು ಒಂದು ಹಾಳೆಯಲ್ಲಿ ಬರೆಯಿರಿ. ಪುನಃ ಪುಸ್ತಕವನ್ನು ಓದಿ, ನೀವು ಮರೆತಿರುವ ಅಂಶಗಳನ್ನು ಗುರುತಿಸಿಕೊಳ್ಳಿ, ಇದೇ ಕ್ರಮವನ್ನು ಪುನರಾವರ್ತಿಸಿ.
- ಪಠ್ಯದ ಜತೆಗೆ ಪಠ್ಯೇತರ ಪುಸ್ತಕಗಳನ್ನು ಓದುವಂತೆ ಮಕ್ಕಳನ್ನು ಪ್ರೇರೇಪಿಸಿ. ಆಗ ಓದಿನಲ್ಲಿ ತನ್ನಿಂತಾನೆ ಆಸಕ್ತಿ ಮೂಡುತ್ತದೆ.

ಕಲಿಕೆ ಹೀಗಿರಲಿ

- ಮೊದಲಿಗೆ ನಿಮ್ಮ ದೇಹದ ಆರೋಗ್ಯ ಮತ್ತು ಶುಚಿತ್ವವನ್ನು ಸರಿಯಾಗಿಟ್ಟುಕೊಳ್ಳಿ, ಶುಭ್ರವಾದ ಉಡುಪುಗಳನ್ನು ಧರಿಸಿಕೊಳ್ಳಿ, ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಳ್ಳಿ
- ಒಂದು ವಿಷಯವನ್ನು ಅಭ್ಯಾಸ ಮಾಡುವಾಗ ಅದರ ಕಡೆಗೆ ಗಮನ ಕೊಡಿ. ಬೇರೆ ವಿಷಯಗಳತ್ತ ತಲೆಕೆಡಿಸಿಕೊಳ್ಳಬೇಡಿ
- ನಾನು ಏನನ್ನೂ ಸಾಧಿಸಬಲ್ಲೆ (ಕಲಿಯಬಲ್ಲೆ) ಎಂಬ ಭಾವನೆಯನ್ನು ಇಟ್ಟುಕೊಳ್ಳಿ. ಇದಕ್ಕೆ ಸ್ವಲ್ಪ ಸಮಯ ತಗುಲಬಹುದು.
- ಒಂದು ವಿಷಯದ ಸಣ್ಣಭಾಗವನ್ನು ಓದಿಕೊಳ್ಳಿ. ಪುಸ್ತಕವನ್ನು ಮುಚ್ಚಿ ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿ.
- ಮುಖ್ಯಾಂಶಗಳನ್ನು ಒಂದು ಹಾಳೆಯಲ್ಲಿ ಬರೆದಿಟ್ಟುಕೊಳ್ಳಿ.
- ಸೂತ್ರಗಳ, ವ್ಯಾಖ್ಯೆಗಳ, ದಿನಾಂಕ ಮತ್ತು ಘಟನೆ (ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ) ಪಟ್ಟಿ ಮಾಡಿಟ್ಟುಕೊಳ್ಳಿ.
- ಅಭ್ಯಾಸವನ್ನು ಯಾವುದೇ ಕಾರಣಕ್ಕೂ ಮುಂದಕ್ಕೆ ಹಾಕಬೇಡಿ. ಯಾವುದೇ ವಿಷಯವನ್ನಾದರೂ ಕಲ್ಪಿಸಿಕೊಂಡು, ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.
- ಎಲ್ಲಾ ವಿಷಯಗಳನ್ನು ಮುತುವರ್ಜಿಯಿಂದ ಓದಿ, ಏಕೆಂದರೆ ತೃತೀಯ ಭಾಷೆ, ಪ್ರಥಮ ಭಾಷೆಯಷ್ಟೇ ಮುಖ್ಯವಾದದ್ದು. ಸಮಾಜವಿಜ್ಞಾನ, ಗಣಿತದಷ್ಟೇ ಮುಖ್ಯವಾದದ್ದು. ಕನ್ನಡ, ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷ್‌ಗಳಷ್ಟೇ ಮುಖ್ಯವಾದದ್ದು.
- ಶೇಕಡ ನೂರಕ್ಕೆ ನೂರು ಅಂಕಗಳಿಸಬೇಕು ಎಂದಾದರೆ ಭಾಷಾ ವಿಷಯಗಳನ್ನೂ ಇತರೆ ವಿಷಯಗಳಷ್ಟೇ ಮುತುವರ್ಜಿಯಿಂದ ಓದಬೇಕು.

ಡಾ.ಎಚ್.ಎಸ್. ಗಣೇಶಭಟ್ಟ
ಡಾ. ವೆಂಕೋಬರಾವ್.ಎಂ.
ಹೊಸಕೋಟೆ



ಪರೀಕ್ಷೆ ಎದುರಿಸಲು ಹೀಗೆ ಮಾಡಿ...

- ಪರೀಕ್ಷೆಗೆ ತಯಾರಾಗುವುದು ಒಂದು ಕಲೆ. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ಪ್ರಯತ್ನಿಸುವುದು ಬಹಳ ಮುಖ್ಯ.
- ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯದಲ್ಲಿ ಬಿಡಿಸಲು ಪ್ರಯತ್ನಿಸಿ.
- ನಿಮ್ಮ ಸಾಮರ್ಥ್ಯಗಳು ಹಾಗೂ ನ್ಯೂನತೆಗಳ ಬಗ್ಗೆ ಗಮನಹರಿಸಿ.
- ಪರೀಕ್ಷಾ ಕೊಠಡಿಯನ್ನು ವಿಶ್ವಾಸದಿಂದ ಪ್ರವೇಶಿಸಿ ಮತ್ತು ಪರೀಕ್ಷೆಗೆ ಹತ್ತು-ಇಪ್ಪತ್ತು ನಿಮಿಷಗಳಿರುವಾಗ ಓದುವುದನ್ನು ನಿಲ್ಲಿಸಿ.
- ಪ್ರತಿಯೊಂದು ಹಾಳೆಯಲ್ಲೂ ಸರಿಯಾದ ಮಾರ್ಜಿನ್ ಬಿಡಿ.
- ಪ್ರಶ್ನೆಪತ್ರಿಕೆ ತೆಗೆದುಕೊಂಡ ಕ್ಷಣವೇ ಉತ್ತರಿಸಲು ಪ್ರಾರಂಭಿಸಬೇಡಿ.
- ಪ್ರತಿಯೊಂದು ಪ್ರಶ್ನೆಯನ್ನು ಎಚ್ಚರಿಕೆಯಿಂದ ಓದಿ ಸರಿಯಾಗಿ ಉತ್ತರಿಸಲು ಸಾಧ್ಯವಾಗುವ ಪ್ರಶ್ನೆಗೆ ಮೊದಲು ಉತ್ತರಿಸಿ.
- ಕ್ಲಿಷ್ಟವಾದ ಪ್ರಶ್ನೆಗಳನ್ನು ಮತ್ತೊಮ್ಮೆ ಓದಿಕೊಳ್ಳಿ.
- ನೀವು ಉತ್ತರಿಸುವ ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ.
- ಪ್ರತಿಯೊಂದು ಉತ್ತರದ ನಡುವೆ ಸರಿಯಾದ ಅಂತರವನ್ನು ಬಿಡಿ. ಸಮಯವಿದ್ದಲ್ಲಿ ಒಂದು ಗೆರೆ ಎಳೆಯಿರಿ.
- ಉತ್ತರಿಸುವಾಗ ಆಗಾಗ ಅಳಿಸಿಹಾಕುವುದು ಅಥವಾ ತಿದ್ದುವುದನ್ನು ತಪ್ಪಿಸಿ, ಅಂದವಾಗಿ ಬರೆಯಿರಿ.
- ಮುಖ್ಯವಾದ ಪದಗಳ ಕೆಳಗೆ ಗೆರೆಯನ್ನು ಹಾಕಿ.
- ಪ್ರಶ್ನೆಗಳನ್ನು ಉತ್ತರಿಸುವಾಗ ಆತುರ ಪಡಬೇಡಿ.
- ಯಾವ ಪ್ರಶ್ನೆಗಳನ್ನು ಉತ್ತರಿಸಲು ಕಷ್ಟವಾಗುವುದೋ ಅದನ್ನು ಕಡೆಯಲ್ಲಿ ಉತ್ತರಿಸಿ.
- ಎಲ್ಲಾ ಪ್ರಶ್ನೆಗಳನ್ನು ತಪ್ಪದೇ ಉತ್ತರಿಸಿ. ಯಾವ ಪ್ರಶ್ನೆಯನ್ನು ಉತ್ತರಿಸದೇ ಬಿಡಬೇಡಿ.
- ಯಾವುದೇ ಪ್ರಶ್ನೆಗಳನ್ನು ಉತ್ತರಿಸುವಾಗ ಹೆಚ್ಚಿನ ಸಮಯವನ್ನು ವ್ಯಯಮಾಡಬೇಡಿ..
- ಪರೀಕ್ಷೆಯ ನಿಗದಿತ ಸಮಯದ ಬಗ್ಗೆ ಗಮನವಿರಲಿ.
- ಉತ್ತರ ಪತ್ರಿಕೆಯಲ್ಲಿ ನಿರೀಕ್ಷಕರಿಗೆ ಕೊಡುವ ಮೊದಲು ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಲಾಗಿದೆಯೇ ಎಂದು ಒಮ್ಮೆ ಪರೀಕ್ಷಿಸಿ.
- ಒಂದು ವಿಷಯದ ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಿದ ನಂತರ ಅದರ ಬಗ್ಗೆ ಹೆಚ್ಚು ಚಿಂತಿಸಬೇಡಿ. ಮುಂದಿನ ವಿಷಯಕ್ಕೆ ತಯಾರಾಗಿ.

ಪರೀಕ್ಷೆ ಬರೆಯುವುದು ಒಂದು ಕಲೆ. ಬಳಸುವ ಭಾಷೆ, ವಿಷಯ ಮಂಡನೆ, ಮೌಲ್ಯಮಾಪಕರಿಗೆ ಇದು ಅರ್ಥವಾಗಬೇಕು. ಶ್ರಮವಹಿಸಿ ಅಧ್ಯಯನದಲ್ಲಿ ತೊಡಗಿ, ಆಸಕ್ತಿಯಿಂದ ಕಲಿತು, ಪರೀಕ್ಷೆಯನ್ನು ಸವಾಲಾಗಿ ಸ್ವೀಕರಿಸಬೇಕು. ಆತ್ಮವಿಶ್ವಾಸವಿದ್ದರೆ ಆನೆಯನ್ನು ಪಳಗಿಸಬಹುದು ಎಂಬುದನ್ನು ಮರೆಯದಿರಿ.

ಪರೀಕ್ಷಾ ಕೊಠಡಿಯಲ್ಲಿ ಭಯವಾದರೆ ಏನು ಮಾಡುವುದು?

- **ನಮ್ಮ ಶಾಲೆಯಲ್ಲಿರುವ ಬಹುತೇಕ ಮಕ್ಕಳು ಜಾಣ ಮಕ್ಕಳು. ಪರೀಕ್ಷಾ ಕೊಠಡಿಯಲ್ಲಿ ಗಾಬರಿಯಾಗುತ್ತಾರೆ. ಕೈ ಬೆವೆತು, ಬರೆಯಲಾಗದೆ ಕಕ್ಕಾಬಿಕ್ಕಿಯಾಗುತ್ತಾರೆ. ಕಾರಣವೇನು? ಪರಿಹಾರವೇನು?**



ಸಮಾಧಾನ
ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಹೌದು. ಇದು ಪರೀಕ್ಷಾ ಭಯ. ಪರೀಕ್ಷೆ ಬರೆಯಲು ಕುಳಿತಿರುವ ಎಲ್ಲರಲ್ಲೂ ಈ ಆತಂಕ ಇರುತ್ತದೆ. ಅದರ ಪ್ರಮಾಣ ಮಾತ್ರ ಕೆಲವರಲ್ಲಿ ಹೆಚ್ಚು, ಇನ್ನು ಹಲವರಲ್ಲಿ ಕಡಿಮೆ ಇರುತ್ತದೆ. ಕಡಿಮೆ ಇದ್ದರೆ ಅದು ಆತಂಕ. ಹೆಚ್ಚಾದಾಗ ಅದು ಭಯ. ಪರೀಕ್ಷಾಭಯದಿಂದ ಕೆಲವರಿಗೆ ಅಂಗೈ ಬೆವರುತ್ತದೆ. ಗಂಟಲು ಒಣಗುತ್ತದೆ. ವಾಂತಿಯಾಗುತ್ತದೆ. ಹೊಟ್ಟೆ ನೋಯುತ್ತದೆ. ಮೈ, ಕೈ ಕಾಲು ನಡುಗುತ್ತದೆ. ಉಸಿರಾಟದಲ್ಲಿ ಏರುಪೇರಾಗುತ್ತದೆ. ತಲೆನೋವು ಹೆಚ್ಚಾಗುತ್ತದೆ. ಎಚ್ಚರ ತಪ್ಪುತ್ತದೆ. ಕೆಲವರಿಗೆ ಪರೀಕ್ಷೆಯ ಹಿಂದಿನ ದಿನ ಜ್ವರ ಬರುತ್ತದೆ. ವಾಂತಿ, ಭೇದಿಯಾಗುತ್ತದೆ. ಹೀಗೆ ತಹರೇವಾರಿ ತೊಂದರೆಗಳಾಗುತ್ತವೆ.

ಇಂಥ ಸಮಸ್ಯೆಯಿಂದ ಬಳಲುವ ಬಹುತೇಕರಿಗೆ ಇದಕ್ಕೆ ಕಾರಣ ಗೊತ್ತಿರುವುದಿಲ್ಲ. ಪರೀಕ್ಷೆ ಬರೆಯುವ ಆತಂಕದಿಂದಾಗಲೀ, ಭಯದಿಂದಾಗಲಿ ಹೀಗಾಗುತ್ತದೆ ಎನ್ನುವುದು ಅವರಿಗಾಗಲೀ, ಅವರ ಪಾಲಕರಿಗಾಗಲೀ ಗೊತ್ತಾಗುವುದಿಲ್ಲ. ಮಕ್ಕಳು ಪರೀಕ್ಷೆಯ ಕೊಠಡಿಯಲ್ಲಿ ವಿಚಲಿತರಾಗಿ ತೊಂದರೆ ಅನುಭವಿಸುತ್ತಾರೆ. ಪರೀಕ್ಷೆಯ ದಿನವೇ ಅವರು ಋಣಾತ್ಮಕವಾದ ಫಲಿತಾಂಶವನ್ನು ಪಡೆದುಕೊಳ್ಳುತ್ತಾರೆ.

ಪರೀಕ್ಷಾ ಭಯಕ್ಕೆ ಹಲವು ಕಾರಣಗಳಿವೆ. ಸರಿಯಾಗಿ ಓದಿಕೊಳ್ಳದೇ ಇರುವುದು, ಶಿಸ್ತಿನಿಂದ ತಯಾರಿಯನ್ನು ಮಾಡದೇ ಇರುವುದು ಮುಖ್ಯ ಕಾರಣ. ಹಿಂದಿನ ಪರೀಕ್ಷೆಯ ಫಲಿತಾಂಶವೂ ಪ್ರಭಾವ ಬೀರಬಲ್ಲದು. ಯಾವುದೋ ವಿಷಯವನ್ನು ತಯಾರಿ ಮಾಡಿಕೊಂಡು ಬಂದು, ಬೇರೆ ಯಾವುದೋ ವಿಷಯದ ಪಶ್ನೆ ಪತ್ರಿಕೆಯನ್ನು ಎದುರಿಸುವುದು ಮಗದೊಂದು ಕಾರಣ.

'ನನಗೆ ತಿಳಿಯೋದಿಲ್ಲ, ನನಗೆ ನೆನಪಿರೋದಿಲ್ಲ, ನಾನು ಚೆನ್ನಾಗಿಯೇ ಓದಿದ್ದೇನೆ. ಆದರೆ, ಪರೀಕ್ಷಾ ಕೊಠಡಿಯಲ್ಲಿ ನನಗೆ ಎಲ್ಲವೂ ಮರೆತುಹೋಗುತ್ತದೆ, ನಾನು ಜಾಣನಲ್ಲ, ನನಗೆ ನೆನಪಿನ ಶಕ್ತಿ ಇಲ್ಲ, ನನ್ನ ಗ್ರಹಗತಿ ಚೆನ್ನಾಗಿಲ್ಲ, ನಾನು ಪಾಸಾಗುವುದಿಲ್ಲ, ನನಗೆ ಮಾಟವಾಗಿದೆ, ನನಗೆ ಶಾಪವನ್ನು ಹಾಕಿದ್ದಾರೆ.....' ಹೀಗೆಯೇ ಅವರು ತಮ್ಮ ಮನಸ್ಸಿನಲ್ಲಿ ನಕಾರಾತ್ಮಕ ಅಂಶಗಳನ್ನು ಹೇಳಿಕೊಂಡಿರುತ್ತಾರೆ. ಅವರ ಸುಪ್ತ ಮನಸ್ಸು ಹಾಗೆಯೇ ಪ್ರೋಗ್ರಾಮ್ ಆಗಿರುತ್ತದೆ. ಇವೇ ನೂರೆಂಟು ಕಾರಣಗಳನ್ನು ಪಟ್ಟಿ ಮಾಡಬಹುದು.

ಕೆಲವರಿಗೆ ಕೆಲವು ವಿಷಯಗಳ ಉಪನ್ಯಾಸಕರು ಇಷ್ಟ ಇರುವುದಿಲ್ಲ. ಇನ್ನು ಕೆಲವರಿಗೆ ಮನೆಯಲ್ಲಿ ಪಾಲಕರಿಂದ ಮಾನಸಿಕವಾಗಿ ಗಾಸಿಯಾಗಿರುತ್ತದೆ. ಇಂಥ ಕಾರಣಗಳಿಂದಲೂ ಪರೀಕ್ಷಾ ಕೋಣೆಯಲ್ಲಿ ವಿದ್ಯಾರ್ಥಿಗಳು ಭಯಭೀತರಾಗುತ್ತಾರೆ. ಇಂಥ ಕೆಲವರಿಗೆ ಪರೀಕ್ಷೆ ಮುಗಿದ ಕೂಡಲೇ ಎಲ್ಲವೂ ಸರಿಯಾಗಿಬಿಡುತ್ತದೆ.

ನಿಮಗೆ ಸೋಜಿಗ ಎನ್ನಿಸಬಹುದು, ಕೆಲವು ವಿದ್ಯಾರ್ಥಿಗಳು ಬೇಕೂಂತಲೇ ಆತಂಕವನ್ನು ಹೆಚ್ಚಿಸಿಕೊಳ್ಳುತ್ತಾರೆ. ಸರಿಯಾದ ಉತ್ತರಗಳನ್ನು ಬರೆಯದೇ ಹೊರಗೆ ಬರುತ್ತಾರೆ. ಅವರು ನಪಾಸಾಗಬೇಕೂಂತಲೇ ಹೀಗೆ ಮಾಡುತ್ತಾರೆ! ಅವರ ಒಳಮನಸ್ಸಿನ ಯಾವುದೋ ಆಸೆ ಈಡೇರಿದ ಖುಷಿಯನ್ನು ಅನುಭವಿಸುತ್ತಾರೆ. ತಾನು ನಪಾಸಾಗುವ ಮೂಲಕ, ಯಾರನ್ನೋ ಸೋಲಿಸಿದಂತೆ ಬೀಗುತ್ತಾರೆ.

ಮೊದಲಿನಿಂದಲೂ ಪ್ರತಿದಿನವೂ ಇಂತಿಷ್ಟು ಹೊತ್ತಿನಂತೆ, ಶಿಸ್ತಿನಿಂದ ಅಭ್ಯಾಸವನ್ನು ಮಾಡುವುದು. ತಿಳಿಯದ ವಿಷಯವನ್ನು ಸಂಬಂಧಿಸಿದ ಶಿಕ್ಷಕರನ್ನು ಕೇಳಿ ತಿಳಿದುಕೊಳ್ಳುವುದು. ಓದುವವರ ಗೆಳೆತನವನ್ನು ಮಾಡುವುದು. ಅಂದಿನ ಕೆಲಸವನ್ನು ಅಂದೇ ಮಾಡುವುದು. ಹದಿಹರೆಯದ ಮಾನಸಿಕ ಏರುಪೇರಿಗಾಗಲೀ, ಕಾಡುವ ಒಂದಿಷ್ಟು ಪ್ರಶ್ನೆಗಳಿಗೆ ಉತ್ತರವನ್ನು ಪಾಲಕರಲ್ಲಾಗಲೀ, ಶಿಕ್ಷಕರಲ್ಲಾಗಲೀ ಕೇಳಿಕೊಳ್ಳುವುದು. ಮನಸ್ಸು ಗಾಬರಿಯಾದರೆ, ಆತಂಕಗೊಂಡರೆ, ಶಾಲೆಯಲ್ಲಾಗಲೀ, ತರಗತಿಯಲ್ಲಾಗಲೀ, ಹೊರಗೆ ಎಲ್ಲಿಯಾದರೂ ಅವಮಾನವಾದರೆ ಅದರ ಬಗ್ಗೆ ಪಾಲಕರಿಗೆ ತಿಳಿಸುವುದು. ಸ್ಕ್ರೀನ್ ಟೈಮನ್ನು ಸಾಧ್ಯವಾದಷ್ಟೂ ಕಡಿಮೆ ಮಾಡುವುದು.

ವಿದ್ಯಾರ್ಥಿಗಳಲ್ಲಿನ ಪರೀಕ್ಷಾಭಯ ಮುಂದೆ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಂಡು ತೊಂದರೆ ಉಂಟುಮಾಡಬಲ್ಲದು. ಎಳವೆಯಲ್ಲಿಯೇ ಗುಣಪಡಿಸಿಕೊಳ್ಳುವುದ ಸೂಕ್ತ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

18) 1953ರಲ್ಲಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ಆಯೋಗವು ಏಕೆ ರಚನೆಯಾಯಿರು?
ಉತ್ತರ:– ರಾಜ್ಯಗಳನ್ನು ಪುನರ್ ವಿಂಗಡಿಸಲು

19) ಮೌನ ಕಣಿವೆ ಆಂದೋಲನವನ್ನು ಏಕೆ ಹಮ್ಮಿಕೊಳ್ಳಲಾಯಿತು?
ಉತ್ತರ:– ಮೌನ ಕಣಿವೆ ಆಂದೋಲನವನ್ನು 91) ಪರಿಸರ ನಾಶ ತಡೆಗಟ್ಟಲು (2) ಜೀವ ಮತ್ತು ಸಸ್ಯ ಸಂಕುಲ ಸಂರಕ್ಷಣೆಗಾಗಿ ಹಮ್ಮಿಕೊಳ್ಳಲಾಯಿತು

20) ಶಿಕ್ಷಣದ ಹಕ್ಕು ಕಾಯ್ದೆ–2009 ಅನ್ನು ಏಕೆ ಜಾರಿಗೆ ತರಲಾಯಿತು?
ಉತ್ತರ:– ಶಿಕ್ಷಣದ ಹಕ್ಕು ಕಾಯ್ದೆ–2009 ಅನ್ನು
(*) 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು
(*) ಖಾಸಗಿ ಶಾಲೆಗಳಲ್ಲಿ ಶೇ. 25ರಷ್ಟು ಸೀಟುಗಳನ್ನು ಅಗತ್ಯವುಳ್ಳ ಮಕ್ಕಳಿಗೆ ಮೀಸಲಿಡಲು ಜಾರಿಗೆ ತರಲಾಯಿತು

21) ಉತ್ಸಾಹಿ ಕೃಷಿಕರು ಅಳವಡಿಸಿಕೊಂಡ ಪರಿಸರ ಸ್ನೇಹಿ ಕೃಷಿ ವಿಧಾನವನ್ನು ತಿಳಿಸಿ
ಉತ್ತರ:– ಕೆಲವು ಉತ್ಸಾಹಿ ರೈತರು ಸಾವಯವ ಕೃಷಿ, ಶೂನ್ಯ ಬಂಡವಾಳ ಕೃಷಿ ಮುಂತಾದ ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಅನುಕೂಲ ಪಡೆಯುತ್ತಿದ್ದಾರೆ.

22) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?
ಉತ್ತರ:– ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; 'ದಿವಾನಿ ಅದಾಲತ್' ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.

23) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.
ಉತ್ತರ:– **ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ**
1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ
2) ಎರಡೂ ಘಟ್ಟಗಳು ಕರಾವಳಿ ದಂಡೆಯ ಸಮೀಪದಲ್ಲಿವೆ
3) ವಿವಿಧ ಜೀವ ಮತ್ತು ಸಸ್ಯ ಪ್ರಬೇಧಗಳನ್ನು ಎರಡೂ ಘಟ್ಟಗಳಲ್ಲಿ ನೋಡಬಹುದಾಗಿದೆ.
4) ಎರಡೂ ಘಟ್ಟಗಳು ಕಾಡು ಮತ್ತು ಆಯುರ್ವೇದ ಸಸ್ಯಗಳ ಆಗರಗಳಾಗಿವೆ ಇತ್ಯಾದಿ

ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳು
1) ಪಶ್ಚಿಮ ಘಟ್ಟ ಎತ್ತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ಎತ್ತರವಾಗಿಲ್ಲ
2) ಪಶ್ಚಿಮ ಘಟ್ಟ ನಿರಂತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ನಿರಂತರವಾಗಿಲ್ಲ
3) ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ನದಿಗಳು ಹುಟ್ಟುತ್ತವೆ ಆದರೆ ಪೂರ್ವ ಘಟ್ಟದ ಮೂಲಕ ಬಹಳಷ್ಟು ನದಿಗಳು ಸಮುದ್ರವನ್ನು ಸೇರುತ್ತವೆ.
4) ಆಣೈಮಲೆ ಪಶ್ಚಿಮ ಘಟ್ಟದಲ್ಲಿ ಅತಿದೊಡ್ಡ ಶಿಖರವಾದರೆ ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರವಾಗಿದೆ
5) ಪಶ್ಚಿಮ ಘಟ್ಟಗಳಲ್ಲಿ ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ (ಅರಬ್ಬಿ ಸಮುದ್ರತೀರ) ಸಮಾಂತರವಾಗಿ ಹಬ್ಬಿವೆ. ಆದರೆ ಪೂರ್ವದಲ್ಲಿ ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದೆ

(ಗಮನಿಸಿ:– ನಿಮ್ಮ ಹೆಚ್ಚಿನ ಅಧ್ಯಯನದ ದೃಷ್ಟಿಯಿಂದ ಪಠ್ಯ ಪುಸ್ತಕದಲ್ಲಿರುವ ಮಾಹಿತಿಗಿಂತ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಈ ಪ್ರಶ್ನೆಯ ಉತ್ತರದಲ್ಲಿ ಸೇರಿಸಲಾಗಿದೆ)

24) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ
ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ|| ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

25). ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು?
ಉತ್ತರ: ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೇ ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾದಿದೆ.

26). ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.
ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

27) ಜನಮಂದೆ ಎಂದರೇನು? ಉದಾಹರಣೆ ಕೊಡಿ.
ಉತ್ತರ:– ಯಾವುದೇ ಪೂರ್ವ ಯೋಜನೆ ಇಲ್ಲದೇ ಅನಿಶ್ಚಿತವಾಗಿರುವ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.
ಉದಾಹರಣೆ: * ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.

28) ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು ಕಾರಣವೇನು?
ಉತ್ತರ: ಆರ್ಯಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿ ಅದರ ಮೂಲಕ ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿರುವ ಹಿನ್ನೆಲೆಯಲ್ಲಿ "ವೇದಗಳಿಗೆ ಹಿಂದಿರುಗಿ" ಎನ್ನುವ ಘೋಷಣೆ ಮಾಡಿದರು.

29) ಯಾವುದನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ?
ಉತ್ತರ:– ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದವೊಂದರ ಪ್ರಕಾರ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಈ ಘಟನೆಯನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

30) ಎರಡನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯವಾಯಿತು?
ಉತ್ತರ:– ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ 1784ರಲ್ಲಿ ಕೊನೆಗೊಂಡಿತು

31) ಪೂರ್ವಾಗ್ರಹ ಎಂದರೇನು?

(ಮುಂದುವರಿಯುವುದು)

II PUC -MATHEMATICS

REVISION : MODEL QUESTIONS

Multiple choice Questions

7. If $\frac{(x+1)^2}{(x^3+x} = \frac{A}{x} + \frac{Bx+C}{x^2+1}$, then $\operatorname{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C =$

(A) 0 (B) $\frac{\pi}{2}$
(C) $\frac{5\pi}{6}$ (D) $\frac{\pi}{6}$

Ans: (C) $\frac{5\pi}{6}$

Expln :– $\frac{(x+1)^2}{x^3+x} = \frac{A}{x} + \frac{Bx+C}{x^2+1} = \frac{A(x^2+1)+x(Bx+C)}{x(x^2+1)}$

$\therefore A(x^2+1)+Bx^2+Cx = x^2+2x+.$

Equating the coefficients of x^2, x constants on both sides,

we get $A+B=1, C=2, A=1 \quad \therefore B=0$

$\operatorname{cosec}^{-1}\left(\frac{1}{A}\right)+\cot^{-1}\left(\frac{1}{B}\right)+\sec^{-1}C = \operatorname{cosec}^{-1}1+\cot^{-1}0+\sec^{-1}2$

$= \frac{\pi}{2}+0+\frac{\pi}{3} = \frac{5\pi}{6}.$

8. The remainder obtained when 1! + 2! + 3! + … + 11! Is divided by 12 is
(A) 8 (B) 6
(C) 9 (D) 7

Ans: (C) 9

Expln:- 1! + 2! + 3! + ….. + 11! = 1 + 2 + 6 + 24 + 120 +720 + …. + 11!
From $\lfloor 5$ onwards each is a multiple of 12,
i.e., $\lfloor 5 = 12k_1, \lfloor 6 = 12k_1 \times 6 = 12\,k_2$ ....
Thus allterms from $\lfloor 5$ onwards are divisible by 12.
1! + 2! + 3! + 4! = 33
$\therefore 33+12k \equiv -3 \bmod 12$ i.e., $\lfloor 1 + \lfloor 2 + ... + \lfloor 11 \equiv -3 \bmod 12$
or $\lfloor 1 + \lfloor 2 + \lfloor 3 ..... + \lfloor 11 \equiv 9 \bmod 12$.

9)
Statement 1: Left hand derivative of f(x) = | x | at x = 0 is -1.
Statement 2: Left hand derivative of f(x) at x = a is $\lim_{h\to 0} f(a-h)$

A) Statement 1 is true, and Statement 2 is false.
B) Statement 1 is true, and Statement 2 is true, Statement 2 is correct Explanation for Statement 1
C) Statement 1 is true, and Statement 2 is true, Statement 2 is not a correct Explanation for Statement 1
D) Statement 1 is false, and Statement 2 is false.
Ans:-B

10) The point of inflection for the following graph is



A) $-\frac{\pi}{2}$ B) $\frac{\pi}{2}$
C) 0 D) point of inflection does not exist
Ans:-C

II. Answer all the following:-

1. A relation R on A = {1 2 3} defined by R = {(1 1) (1 2) (3 3)} is not symmetric why?
Ans:- (1 2) ∈ R but (2 1) ∉ R
∴ R is not symmetric

2. Write the domain of f(x) = $\cos^{-1} x$
Ans:- $-1 \le x \le 1$ (or) $x \in [-1, 1]$ [(-1 1) is wrong]

3. Define scalar matrix.
Ans:- A Diagonal matrix is said to be scalar matrix if all its diagonal elements are equal.

4. $A\begin{bmatrix}1 & 2\\ 3 & 4\end{bmatrix}$ Find |2 A|.

Ans :– $2A=\begin{bmatrix}2 & 4\\ 6 & 8\end{bmatrix}$ $|2\ A| = \begin{vmatrix}2 & 4\\ 6 & 8\end{vmatrix} = 16-24=-8$

5. If $y = \log(\sin x)$ find $\frac{dy}{dx}$.

Ans :– $\frac{dy}{dx} = \frac{\cos x}{\sin x} = \cot x$ (or) $e^y = \sin x$

$\Rightarrow e^y \frac{dy}{dx} = \cos x \Rightarrow \frac{dy}{dx} = \frac{\cos x}{e^y}$

6. Evaluate $\int(\sin x + \cos x)\,dx$

Ans :– $\int(\sin x + \cos x) = -\cos x + \sin x + c$
(or) $\sin x - \cos x + c$

7. Find the direction cosines of the vector $\vec{a} = \hat{i} + 2j + 3k$

Ans :– $|\vec{a}|\sqrt{1+4+9} = \sqrt{14}$

DC's of $\vec{a}$ are $\frac{1}{\sqrt{14}}, \frac{2}{\sqrt{14}}, \frac{3}{\sqrt{14}}$

8. Find the equation of the plane having intercept 3 on Y axis and parallel to ZOX plane
Ans:- Equation of plane is y = 3 or = $\frac{y}{3} = 1$

9. Define optimal solution in the linear programming problem
Ans:- Any point in the feasible region gives the optimum value of the objective function is called an optimal solution

10. An urn contains 5 red and 2 black balls, two balls are randomly selected. Let X represents the number of black balls, what are the possible values of X?
Ans:- Both the balls are black,
∴ value of X is 2
If one is red then another one is black ball,
∴ value of X is 1
If both the balls are red then, the number of black balls are zero,
∴ value of X is 0
∴ Possible values of X are 0, 1, 2

ಅಂತರ್ಜಾತಿ ವಿವಾಹ ಹೆಚ್ಚಲಿ: ಸಿ.ಎಂ

ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ ಸಿದ್ದರಾಮಯ್ಯ ಸಲಹೆ ● 23 ಜೋಡಿಗೆ ಕಂಕಣ ಭಾಗ್ಯ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): 'ಸಮಾಜದಲ್ಲಿನ ಜಾತಿ ವ್ಯವಸ್ಥೆ ಅಳಿದು ಸಮಸಮಾಜ ನಿರ್ಮಾಣವಾಗಬೇಕಿದ್ದರೆ ಅಂತರ್ಜಾತಿ ವಿವಾಹಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿಗೆ ಸಮೀಪದ ಬಂಡಿಹಳ್ಳಿಯಲ್ಲಿ ಭಾನುವಾರ ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿರಾಜ್ ಶೇಖ್ ಅವರ ಪುತ್ರನ ವಿವಾಹ ಸಂದರ್ಭದಲ್ಲಿ ಹಮ್ಮಿಕೊಂಡ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜಾತ್ಯತೀತ ತತ್ವವನ್ನು ನಮ್ಮ ಸಂವಿಧಾನ ಬೋಧಿಸಿದೆ. ಇದೇ ಆಶಯವನ್ನು ವ್ಯಕ್ತಪಡಿಸಿದ ಬಸವಣ್ಣವರು, ಜಾತಿಆಧಾರಿತ ಸಮಾಜ ವ್ಯವಸ್ಥೆ ಸಾಧುವಲ್ಲ ಎಂದು ಪ್ರತಿಪಾದಿಸಿದ್ದರು. ಆ ಆಶಯವನ್ನು ನಾವು ಆಚರಣೆಗೆ ತಂದಾಗ ಸಮಸಮಾಜ ಕನಸು ಸ್ವಲ್ಪಮಟ್ಟಿಗೆ ಈಡೇರಬಹುದು' ಎಂದರು.

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿಯಲ್ಲಿ ಭಾನುವಾರ ನಡೆದ ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ ನೂತನ ಲಂಬಾಣಿ ವಧೂವರರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ

'ಮನುಷ್ಯ ಹುಟ್ಟುವಾಗ ವಿಶ್ವಮಾನವನಾಗಿದ್ದು, ಜಾತಿಧರ್ಮಗಳ ಬಂಧನದಲ್ಲಿ ಸಿಲುಕಿ ಅಲ್ಪಮಾನವನಾಗುತ್ತಾನೆ. ಬಸವಣ್ಣನವರ ಕಾಲದಲ್ಲಿಯೇ ಅಂತರ್ಜಾತಿ ವಿವಾಹ ಪದ್ಧತಿ ಪ್ರಚಲಿತವಾಗಿತ್ತು. ಇತರ ಧರ್ಮಗಳನ್ನೂ ಗೌರವಿಸುವ ವ್ಯವಸ್ಥೆ ಸಮಾಜದಲ್ಲಿರಬೇಕು. ಚಲನೆರಹಿತವಾದ ಜಾತಿವ್ಯವಸ್ಥೆಯಲ್ಲಿ ನಾವಿದ್ದೇವೆ. ಆರ್ಥಿಕ ಹಾಗೂ ಸಾಮಾಜಿಕ ಸ್ವಾವಲಂಬನೆಯಿಂದ ಚಲನೆಯಿಲ್ಲದ ಸಮಾಜಕ್ಕೆ ಜೀವಬರುತ್ತದೆ. ನನ್ನ ಮೊದಲನೇ ಮಗ ಅಂತರ್ಜಾತಿ ವಿವಾಹವಾಗಿದ್ದ, ಈಗ ಅವನು ಇಲ್ಲ, ನನ್ನ ಎರಡನೇ ಮಗ ಮದುವೆಯೇ ಆಗಿಲ್ಲ' ಎಂದರು.

'ವಿವಾಹದ ಖರ್ಚುವೆಚ್ಚಗಳನ್ನು ಭರಿಸಲಾಗದ ಬಡಕುಟುಂಬಗಳಿಗೆ ಸಾಮೂಹಿಕ ವಿವಾಹ ವರದಾನ. ಸರಳ ಶೈಲಿಯಲ್ಲಿ ವಿವಾಹವಾಗುವ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಕೆಳವರ್ಗದಲ್ಲಿ ಹುಟ್ಟಿದ ಮಾತ್ರಕ್ಕೆ ಬಡವರಾಗಿಯೇ ಉಳಿಯಬೇಕೆಂಬ ಭಾವನೆ ತಪ್ಪು. ಆರ್ಥಿಕವಾಗಿ ದುರ್ಬಲರಾಗಿರುವ ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಬೇಕು. ಅಂತೆಯೇ ಶ್ರೀಮಂತವರ್ಗದವರೂ ಕೂಡ ಬಡವರ ಸಹಾಯಕ್ಕೆ ಮುಂದಾಗಬೇಕು ಹಾಗೂ ಸಮಾಜದ ಋಣ ತೀರಿಸಲು ಪ್ರಯತ್ನಿಸಬೇಕು' ಎಂದು ಮುಖ್ಯಮಂತ್ರಿ ಕೇಳಿಕೊಂಡರು.

11 ಮುಸ್ಲಿಂ ಜೋಡಿ ಹಾಗೂ 12 ಹಿಂದೂ ಜೋಡಿ ಸೇರಿ ಒಟ್ಟು 23 ಜೋಡಿ ಸಿಎಂ ಸಮ್ಮುಖದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಕೊಟ್ಟೂರು ಮಠದ ಬಸವಲಿಂಗ ಸ್ವಾಮೀಜಿ, ನಂದಿಪುರದ ಮಹೇಶ್ವರ ಸ್ವಾಮೀಜಿ, ಗರಗ ನಾಗಲಾಪುರ-ಕುರುಗೋಡು ಒಪ್ಪತ್ತೇಶ್ವರ ಮಠದ ನಿರಂಜನ ಪ್ರಭುದೇಶಿಕರು ಸ್ವಾಮೀಜಿ, ಸಚಿವ ಜಮೀರ್ ಅಹ್ಮದ್ ಖಾನ್, ಸಂಸದ ಇ.ತುಕಾರಾಂ, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಶಾಸಕರಾದ ಎಚ್.ಆರ್. ಗವಿಯಪ್ಪ, ಡಾ.ಎನ್.ಟಿ.ಶ್ರೀನಿವಾಸ್, ಎಂ.ಪಿ.ಲತಾ, ಬಿ.ಎಂ.ನಾಗರಾಜ್ ಭಾಗವಹಿಸಿದ್ದರು.

ಹೆಚ್ಚು ಮಕ್ಕಳಾಗಲಿ ಹೇಳಿಕೆಗೆ ಟೀಕೆ

ಮೂರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೆರಬೇಕು ಎಂದು ಈಚೆಗೆ ಇಬ್ಬರು ಸ್ವಾಮೀಜಿಗಳು ಬೆಂಗಳೂರಿನಲ್ಲಿ ಹೇಳಿದ್ದನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ನನ್ನ ಪ್ರಕಾರ ಒಂದೇ ಸಾಕು. ಆದರೂ ಆರತಿಗೆ, ಕೀರುತಿಗೆ ಅಂತ ಎರಡು ಇರಲಿ, ಮಕ್ಕಳು ಹೆಚ್ಚಾದರೆ ಇರುವ ಭೂಮಿ ಹೆಚ್ಚಾಗುವುದಿಲ್ಲ, ಸಂಪತ್ತೂ ಹೆಚ್ಚುವುದಿಲ್ಲ. ಜನಸಂಖ್ಯೆಯಲ್ಲಿ ದೇಶ ಈಗಾಗಲೇ ಜಗತ್ತಿನ ನಂಬರ್ 1 ಆಗಿದೆ. ಇರುವ ಭೂಮಿ, ಸಂಪತ್ತನ್ನು ಸರಿಯಾಗಿ ಹಂಚಿಕೆ ಮಾಡಬೇಕಿದ್ದರೆ ಮಕ್ಕಳ ಸಂಖ್ಯೆ ಮಿತಿಯಲ್ಲಿರಬೇಕು' ಎಂದರು.

ಬಿಜೆಪಿ ವಿರುದ್ಧ ಸಚಿವ ಸಂತೋಷ್ ಲಾಡ್ ಟೀಕೆ

'ಆಕ್ರೋಶ ಶಮನಕ್ಕೆ ಆರೋಪ'

ಪ್ರಜಾವಾಣಿ ವಾರ್ತೆ

ಸಂತೋಷ್ ಲಾಡ್

ಹುಬ್ಬಳ್ಳಿ: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯಿಂದ ಉಂಟಾಗಿರುವ ಅಂಬೇಡ್ಕರ್ ಅಭಿಮಾನಿಗಳ ಹಾಗೂ ಸಾರ್ವಜನಿಕರ ಆಕ್ರೋಶ ಶಮನ ಮಾಡಲು ಬಿಜೆಪಿಯವರು, ಅಂಬೇಡ್ಕರ್‌ಗೆ ಅವಮಾನ ಮಾಡಿದ್ದರು ಎಂದು ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ' ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಸಿದ್ಧಾಂತವನ್ನು ಬಿಜೆಪಿ, ಆರ್‌ಎಸ್‌ಎಸ್‌ನವರು ಪೂರ್ಣ ಮನಸ್ಸಿನಿಂದ ಒಪ್ಪುತ್ತಾರಾ ಎಂಬುದು ಸ್ಪಷ್ಟವಾಗಬೇಕು. ಬಿಜೆಪಿ, ಆರ್‌ಎಸ್‌ಎಸ್ ಕಚೇರಿಯಲ್ಲಿ ಅಂಬೇಡ್ಕರ್ ಭಾವಚಿತ್ರ ಇಲ್ಲ. ಮಾಜಿ ಸಂಸದ ಅನಂತಕುಮಾರ್ ಹೆಗಡೆ ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದಾಗ ಬಿಜೆಪಿಯವರು ಪ್ರತಿಭಟನೆ ಮಾಡಿರಲಿಲ್ಲ' ಎಂದು ಟೀಕಿಸಿದರು.

'ನಕ್ಸಲರು ಸಿ.ಎಂ ಬಳಿ ಬಂದು ಶರಣಾಗತಿ ಆಗಿರುವುದು ತಪ್ಪಾ? ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಪರಿಶೀಲನೆ ಮಾಡಿ ಮಾತನಾಡಬೇಕು' ಎಂದರು

'ಅಮಿತ್ ಶಾ ಹೇಳಿದ್ದರಲ್ಲಿ ತಪ್ಪೇನಿದೆ?'

ನಾರಾಯಣ ಸ್ವಾಮಿ

ಮೈಸೂರು: 'ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಪದೇ ಪದೇ ಮಾತನಾಡುವುದು ಕಾಂಗ್ರೆಸ್‌ ನವರಿಗೆ ಚಟವಾಗಿದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸುತ್ತಿರುವ ಕುರಿತು ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಅಮಿತ್ ಶಾ ಹೇಳಿದ್ದರಲ್ಲಿ ತಪ್ಪೇನಿದೆ?' ಎಂದು ಸಮರ್ಥಿಸಿಕೊಂಡರು.

'ಅಂಬೇಡ್ಕರ್ ಬದುಕಿದ್ದಾಗ ಕಾಂಗ್ರೆಸ್ ಅವರನ್ನು ಗೌರವಿಸಲಿಲ್ಲ. ಸಂವಿಧಾನದ ಪೀಠಿಕೆ ಬದಲಿಸಿದರು. 2 ವರ್ಷ ಸಂವಿಧಾನವನ್ನೇ ಬದಿಗಿಟ್ಟು ತುರ್ತು ಪರಿಸ್ಥಿತಿ ಹೇರಿದ್ದರು. ಈಗ ತೋರಿಕೆಗೆ ಸಂವಿಧಾನ, ಅಂಬೇಡ್ಕರ್ ಫೋಟೊ, ನೀಲಿ ಶಾಲು ಹಿಡಿದು ಓಡಾಡುವ ಇವರ ನಡೆಯನ್ನು ಫ್ಯಾಷನ್ ಎಂದು ಅಮಿತ್ ಶಾ ಹೇಳಿದರೆ ಆಕ್ರೋಶವೇಕೆ' ಎಂದು ಪ್ರಶ್ನಿಸಿದರು.

'ನಾವು ಕಾಂಗ್ರೆಸ್‌ನ ಹೋರಾಟಕ್ಕೆ ಉತ್ತರ ನೀಡುವುದಿಲ್ಲ. ಬಿಜೆಪಿ ಸರ್ಕಾರ ಅಂಬೇಡ್ಕರ್ ಅವರನ್ನು ಗೌರವಿಸುವುದಕ್ಕಾಗಿ ಮಾಡಿರುವ ಕೆಲಸಗಳ ಬಗ್ಗೆ ಜನರಿಗೆ ತಿಳಿಸುತ್ತೇವೆ. ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳಲು ತುರ್ತು ಪರಿಸ್ಥಿತಿ ಹೇರಿದ್ದನ್ನು, ನರೇಂದ್ರ ಮೋದಿ, ಅಮಿತ್ ಶಾ ಅವರು ಜಮ್ಮು ಕಾಶ್ಮೀರದಲ್ಲಿ 370 ವಿಧಿಯನ್ನು ತೆಗೆದು ಸಂವಿಧಾನ ಜಾರಿ ಮಾಡಿದ್ದನ್ನು ಹೇಳುತ್ತೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ಸಾಧ್ಯವಾಗದ ಸಿ.ಎಂ ಭೇಟಿ: ಸ್ವಾಮೀಜಿ ಬೇಸರ

ಜಾಲಹಳ್ಳಿ (ರಾಯಚೂರು): 'ರಾಜ್ಯದಲ್ಲಿರುವ ಕುರುಬ ಸಮಾಜದ ದೇವಸ್ಥಾನದ ಪೂಜಾರಿಗಳಿಗೆ ಮಾಸಾಶನ ಸೇರಿದಂತೆ ಅಗತ್ಯ ಸೌಲಭ್ಯ ಹಾಗೂ ದೇವಸ್ಥಾನದ ನಿವೇಶಗಳ ಸಮಸ್ಯೆಗಳು ಇವೆ. ಆ ಸಮಸ್ಯೆಗಳ ಬಗ್ಗೆ ಪರಿಹಾರಕ್ಕೆ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿ ಮನವಿ ಸಲ್ಲಿಸಲು ಕಳೆದ ಎರಡು ವರ್ಷಗಳಿಂದ ಪ್ರಯತ್ನ ನಡೆಸಿದರೂ ಪ್ರಯೋಜನವಾಗಿಲ್ಲ' ಎಂದು ಕಾಗಿನೆಲೆ ಕನಕ ಮಹಾಸಂಸ್ಥಾನದ ತಿಂಥಣಿ ಬ್ರಿಜ್ ಪೀಠದ ಕನಕಗುರು ಪೀಠದ ಸಿದ್ಧರಾಮಾನಂದ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಇಲ್ಲಿ ನಡೆದ ಹಾಲುಮತ ಸಂಸ್ಕೃತಿ ಕಾರ್ಯಕ್ರಮದ ಮೊದಲನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಅವರನ್ನು ವಿರೋಧ ಮಾಡುವಂತಹ ದೇವಸ್ಥಾನಗಳಿಗೆ, ಮಠಗಳಿಗೆ ಎಲ್ಲಾ ರೀತಿ ಸೌಲಭ್ಯ ನೀಡಿ ಭೇಟಿ ನೀಡುತ್ತಾರೆ. ಅವರನ್ನು ಬೆಂಬಲಿಸಿದ ಅನೇಕ ಪೂಜಾರಿಗಳಿಗೆ ಮುಖ್ಯಮಂತ್ರಿಗಳ ಭೇಟಿ ಸಾಧ್ಯವಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಪಿಎಸ್‌ಸಿ: ಮರು ಪರೀಕ್ಷೆಗೆ ಕಸಾಪ ಆಗ್ರಹ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಲೋಪದೋಷಗಳು ಕಂಡು ಬಂದ ಕಾರಣ ಮರು ಪರೀಕ್ಷೆ ನಡೆಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಈ ಬಗ್ಗೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. 'ಕೆಪಿಎಸ್‌ಸಿ ನಡೆಸುವ ಪರೀಕ್ಷೆಗಳು ಅನೇಕ ಆಕಾಂಕ್ಷಿಗಳ ಭವಿಷ್ಯವನ್ನು ನಿರ್ಧರಿಸುತ್ತವೆ. ಇದಕ್ಕಾಗಿ ಹಗಲು– ರಾತ್ರಿ ಅಭ್ಯರ್ಥಿಗಳು ಶ್ರಮಿಸುತ್ತಾರೆ. ಆಯೋಗ ನಡೆಸಿದ ಪರೀಕ್ಷೆಗಳಲ್ಲಿ ತಪ್ಪುಗಳು ಪುನರಾವರ್ತನೆಗೊಂಡಿರುವುದು ಆಘಾತವನ್ನುಂಟು ಮಾಡಿದೆ' ಎಂದು ಜೋಶಿ ಪತ್ರದಲ್ಲಿ ತಿಳಿಸಿದ್ದಾರೆ.

ತಂತ್ರಜ್ಞಾನವು ಇಷ್ಟು ಮುಂದುವರೆದಿರುವ ಕಾಲದಲ್ಲಿ ಲೋಪಗಳಿಲ್ಲದೆ ಪರೀಕ್ಷೆ ನಡೆಸಲು ಸಾಧ್ಯವಾಗದಿರುವುದು ದೊಡ್ಡ ದುರಂತ. 2024 ರ ಡಿಸೆಂಬರ್ 29ರಂದು ನಡೆದ ಪರೀಕ್ಷೆಗಳನ್ನು ರದ್ದುಗೊಳಿಸಿ, ಮರು ಪರೀಕ್ಷೆ ನಡೆಸಬೇಕು. ಈ ಬಗ್ಗೆ ಶೀಘ್ರವೇ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ರವಿ ಅವರನ್ನು ರಾಜಕೀಯವಾಗಿ ಮುಗಿಸಲು ಹುನ್ನಾರ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹಿಂದುತ್ವದ ಬಗ್ಗೆ ಹೋರಾಡುವ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನುರಾಜಕೀಯವಾಗಿ ಮುಗಿಸುವ ಹುನ್ನಾರ ನಡೆದಿದೆ' ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದಅವರು, 'ವಿಧಾನಮಂಡಲ ಚಳಿಗಾಲ ಅಧಿವೇಶನದ ವೇಳೆ, ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ಬಗ್ಗೆ ತನಿಖೆ ಪ್ರಗತಿಯಲ್ಲಿದೆ. ರವಿ ಅವರನ್ನು ಕಾನೂನು ಬಾಹಿರವಾಗಿ ಬಂಧಿಸಲಾಗಿತ್ತು. ಈಗ ಅವರಿಗೆ ಬೆದರಿಕೆ ಪತ್ರ ಬರೆಯಲಾಗಿದೆ. ಇದರಿಂದ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಷ್ಟು ಹದಗೆಟ್ಟಿದೆ. ಅರಾಜಕತೆ ಸೃಷ್ಟಿಯಾಗಿದೆ ಎಂಬುದು ತಿಳಿಯುತ್ತದೆ' ಎಂದು ದೂರಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಏಜೆಂಟರಂತೆ ಪೊಲೀಸರು ವರ್ತಿಸುವುದು ಸರಿಯಲ್ಲ. ಇಲ್ಲಿನ ಗೂಂಡಾ ಸಂಸ್ಕೃತಿಯನ್ನು ಜನರು ವಿರೋಧಿಸುತ್ತಾರೆ. ಸುವರ್ಣ ವಿಧಾನಸೌಧದಲ್ಲಿ ಗೂಂಡಾಗಿರಿ ಮಾಡಿದವರು ಮತ್ತು ಈಗ ರವಿ ಅವರಿಗೆ ಬೆದರಿಕೆ ಪತ್ರ ಬರೆದವರನ್ನು ಮೊದಲು ಬಂಧಿಸುವ ಕೆಲಸವಾಗಬೇಕು' ಎಂದು ಒತ್ತಾಯಿಸಿದರು.

'ಸಚಿವೆ ಲಕ್ಷ್ಮಿ ಹೆಬ್ಬಾಳಕರ ಬೆಂಬಲಿಗರೇನು ಸಿ.ಟಿ.ರವಿ ಅವರಿಗೆ ಬೆದರಿಕೆ ಪತ್ರ ಬರೆದಿದ್ದಾರಾ? ಏಕೆ ಹೀಗೆಲ್ಲ ಹೇಳುತ್ತಾರೆ. ಇದು ರವಿ ಅವರೇ ಸೃಷ್ಟಿಸಿದ ಕಥೆ

ಎಂ.ಬಿ.ಪಾಟೀಲ, ಸಚಿವ

ಸಿಐಡಿ ತನಿಖೆಗೆ ಮುಂದಾಗಿರುವ ಸರ್ಕಾರ ಶಾಸಕಾಂಗದ ಮೇಲೆ ಸವಾರಿಗೆ ಯತ್ನಿಸುತ್ತಿದೆ. ಈ ವಿಷಯದಲ್ಲಿ ಅನಗತ್ಯ ಸಂಘರ್ಷ ಮಾಡುವುದು ಸರಿಯಲ್ಲ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಕಾಂಗ್ರೆಸ್ ಸರ್ಕಾರ ಪತನಕ್ಕೆ ಹೆಬ್ಬಾಳಕರ ಕಾರಣವಾಗಲಿದ್ದಾರೆ'

ವಿಜಯಪುರ: 'ರಾಜ್ಯ ಕಾಂಗ್ರೆಸ್ ಸರ್ಕಾರ ಪತನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕಾರಣವಾಗಲಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸುವರ್ಣಸೌಧದಲ್ಲಿ ನಡೆದ ಸಿ.ಟಿ.ರವಿ ಪ್ರಕರಣದಲ್ಲಿ ಲಕ್ಷ್ಮೀ ಹೆಬ್ಬಾಳಕರ ಗೂಂಡಾಗಿರಿ ಮಾಡಿಸಿದ್ದಾರೆ. ಇದರ ಹಿಂದೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದಾರೆ' ಎಂದು ಆರೋಪಿಸಿದರು.

'ಪಂಚಮಸಾಲಿ ಸಮುದಾಯದ ಮೇಲಿನ ಲಾಠಿ ಚಾರ್ಜ್‌ನಲ್ಲಿ ಬೆಳಗಾವಿ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಪಾತ್ರವಿಲ್ಲ. ಘಟನೆ ಬಗ್ಗೆ ಅವರಿಗೆ ಗೊತ್ತೇ ಇಲ್ಲ. ಇದಕ್ಕೆಲ್ಲ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪವೇ ಕಾರಣ' ಎಂದು ದೂರಿದರು.

ಕಾಂಗ್ರೆಸ್ ಬೇಗುದಿ ಶಮನಕ್ಕೆ ಕಸರತ್ತು

ಒಂದನೇ ಪುಟದಿಂದ...

ಪರಿಶಿಷ್ಟ ಜಾತಿಯ ಸಚಿವರು ಮತ್ತು ಶಾಸಕರ ಪ್ರತ್ಯೇಕ ಔತಣಕೂಟ, ಅಧಿಕಾರ ಹಂಚಿಕೆ ಸೂತ್ರ, ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಬಹಿರಂಗ ಹೇಳಿಕೆಗಳಿಂದ ಕರ್ನಾಟಕ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಉಲ್ಬಣಗೊಂಡಿತ್ತು. ಮೊದಲು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸದಲ್ಲಿ ಜ.2ರಂದು ಔತಣಕೂಟ ನಡೆದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಅವರ ಸಂಪುಟದ ನಾಲ್ವರು ಸಚಿವರು ಭಾಗವಹಿಸಿದ್ದರು. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಲೆಂದೇ ಕರೆಯಲಾಗಿದೆ ಎನ್ನುವ ವದಂತಿ ಹಬ್ಬಿತ್ತು. ಇದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಸಮಾಧಾನಕ್ಕೂ ಕಾರಣವಾಗಿತ್ತು.

ಸತೀಶ ಜಾರಕಿಹೊಳಿ ನಿವಾಸದಲ್ಲಿ ನಡೆದಿದ್ದ ಔತಣಕೂಟದ ಬೆನ್ನಲ್ಲೇ ಸಮುದಾಯದ ಜನಪ್ರತಿನಿಧಿಗಳ, ಮುಖಂಡರ ಸಭೆಯನ್ನು ಆಯೋಜಿಲು ಗೃಹ ಸಚಿವ ಜಿ. ಪರಮೇಶ್ವರ ಮುಂದಾಗಿದ್ದರು. ಪರಮೇಶ್ವರ ಅವರ ನಡೆಯ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿ ಸಭೆ ರದ್ದುಪಡಿಸುವಲ್ಲಿ ಡಿ.ಕೆ. ಶಿವಕುಮಾರ್ ಯಶಸ್ವಿ ಆಗಿದ್ದರು. ಇದು ಸಚಿವರಾದ ಜಿ. ಪರಮೇಶ್ವರ, ಕೆ.ಎನ್. ರಾಜಣ್ಣ ಮತ್ತು ಸತೀಶ ಜಾರಕಿಹೊಳಿ ಅವರನ್ನು ಕೆರಳಿಸಿತ್ತು.

ಈ ಮಧ್ಯೆಯೇ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಸಮಾಜಕಲ್ಯಾಣ ಸಚಿವ ಎಚ್.ಸಿ. ಮಹಾದೇವಪ್ಪ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮೊದಲಾದವರು 'ಮುಖ್ಯಮಂತ್ರಿಯಾಗಿ ಐದು ವರ್ಷ ಸಿದ್ದರಾಮಯ್ಯ ಅವರೇ ಮುಂದುವರಿಯಲಿದ್ದಾರೆ. ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ' ಎಂದು ಬಹಿರಂಗ ಹೇಳಿಕೆ ನೀಡಿದ್ದರು. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವರು ಔತಣಕೂಟವನ್ನು ಸಮರ್ಥಿಸಿಕೊಂಡಿದ್ದರು.

'ಔತಣಕೂಟ' ರಾಜಕೀಯಕ್ಕೆ ಪಕ್ಷದ ಹೈಕಮಾಂಡ್ ತಡೆ ಒಡ್ಡಿದರೂ ಆಂತರಿಕ ಸಂಘರ್ಷ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಸೋಮವಾರದ ಸಭೆಯತ್ತ ಈಗ ಎಲ್ಲರ ಚಿತ್ತ ನೆಟ್ಟಿದೆ.

ಕೆಪಿಸಿಸಿ ಕಚೇರಿಯಲ್ಲಿ ನಡೆಯುವ ಸಭೆಯಲ್ಲಿ ಪಕ್ಷದ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಹಾಲಿ, ಮಾಜಿ ಶಾಸಕರು, ಸಂಸದರು ಹಾಗೂ ಎಲ್ಲ ಸಚಿವರೂ ಭಾಗವಹಿಸಲಿದ್ದಾರೆ. ಜ. 21ರಂದು ಬೆಳಗಾವಿಯಲ್ಲಿ ನಡೆಯುವ ಗಾಂಧಿ ಭಾರತ ಸಮಾವೇಶದ ಜವಾಬ್ದಾರಿ ಹಂಚಿಕೆಯೂ ಸಭೆಯಲ್ಲಿ ನಡೆಯಲಿದೆ ಎಂದು ಮೂಲಗಳು ಹೇಳಿವೆ.

'ಡಿಕೆಶಿ ಸಿ.ಎಂ ಆಗುವುದರಲ್ಲಿ ಅನುಮಾನವಿಲ್ಲ'

ದಾವಣಗೆರೆ: ಡಿ.ಕೆ. ಶಿವಕುಮಾರ್ ಐದು ವರ್ಷಗಳ ಅವಧಿಗೆ ಮುಖ್ಯಮಂತ್ರಿ ಆಗಬೇಕಿತ್ತು. ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಅವರ ಪಾತ್ರ ದೊಡ್ಡದಿದೆ. ಮೂರು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಉಪಚುನಾವಣೆಯಲ್ಲೂ ಶಕ್ತಿ ಪ್ರದರ್ಶಿಸಿದ್ದಾರೆ. ಹೈಕಮಾಂಡ್ ಇದನ್ನು ಗಮನಿಸಿ ತೀರ್ಮಾನ ಕೈಗೊಳ್ಳುತ್ತದೆ. ಅವರಿಗೆ ಪ್ರತಿಫಲ ಸಿಗುವ ವಿಶ್ವಾಸವಿದೆ' ಎಂದು ಕಾಂಗ್ರೆಸ್ ಶಾಸಕ ಬಸವರಾಜು ವಿ. ಶಿವಗಂಗಾ ಭಾನುವಾರ ಸುದ್ದಿಗಾರರಿಗೆ ಹೇಳಿದರು.

'ಜೆಡಿಎಸ್‌ನ 11 ಶಾಸಕರು ಕಾಂಗ್ರೆಸ್‌ಗೆ ಬರಲು ಸಜ್ಜಾಗಿದ್ದಾರೆ. ಪಕ್ಷದ ಹಿತದೃಷ್ಟಿಯಿಂದ ಎಲ್ಲರನ್ನೂ ಒಗ್ಗೂಡಿಸುವ ಕೆಲಸವನ್ನು ಡಿ.ಕೆ.ಶಿವಕುಮಾರ್ ಮಾಡುತ್ತಿದ್ದಾರೆ. ಮಾತಿಗಿಂತಲೂ ಹೆಚ್ಚು ಕೆಲಸ ಮಾಡುವುದು ಅವರ ವೈಖರಿ. ಕಷ್ಟಪಟ್ಟವರಿಗೆ ಒಳ್ಳೆಯ ದಿನಗಳು ಬರುತ್ತವೆ' ಎಂದರು.

'ಪಕ್ಷದ ಕಾರ್ಯಕರ್ತರು ಹಾಗೂ ಶಾಸಕರ ಬಗ್ಗೆ ಡಿ.ಕೆ.ಶಿವಕುಮಾರ್ ಆಡಿರುವ ಮಾತುಗಳಲ್ಲಿ ತಪ್ಪಿಲ್ಲ. ಕೆಲವರು ಕೆಟ್ಟ ದೃಷ್ಟಿಯಿಂದ ನೋಡಿ ಅದನ್ನು ತಪ್ಪಾಗಿ ಅರ್ಥೈಸುತ್ತಿದ್ದಾರೆ. ಇದಕ್ಕೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಅವರ ಪರವಾಗಿ ನಾವಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.



ಡಿನ್ನರ್ ಪಾರ್ಟಿ ಮೀಟಿಂಗ್ ನಡೆದರೂ ಸಮಸ್ಯೆಯಿಲ್ಲ. ಮಾಡದಿದ್ದರೂ ಏನೂ ತೊಂದರೆ ಆಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಸುಭದ್ರವಾಗಿದೆ

ಎಚ್.ಕೆ.ಪಾಟೀಲ, ಸಚಿವ

'ಡಿನ್ನರ್ ರಾಜಕೀಯ ಇಲ್ಲ; ಸಂಪುಟ ವಿಸ್ತರಣೆ ಸುಳ್ಳು'

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಕನಕಪುರ (ರಾಮನಗರ): 'ನಮ್ಮಲ್ಲಿ ಯಾವ ಡಿನ್ನರ್ ರಾಜಕೀಯವೂ ಇಲ್ಲ. ಹೊಸ ವರ್ಷಾಚರಣೆಗೆ ಕೆಲ ಸಚಿವರು ಊಟಕ್ಕೆ ಸೇರಿದ್ದರು. ನಾನು ವಿದೇಶಕ್ಕೆ ಹೋಗಿದ್ದೆ. ಅದನ್ನೇ ಕೆಲವರು ರಾಜಕೀಯವಾಗಿ ವೈಭವೀಕರಿಸಿದ್ದಾರೆ ಅಷ್ಟೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿಯ ತಮ್ಮ ಸ್ವಗ್ರಾಮ ದೊಡ್ಡಆಲಹಳ್ಳಿಯಲ್ಲಿ ಭಾನುವಾರ ಕಂದಾಯ ಇಲಾಖೆ ಹಮ್ಮಿಕೊಂಡಿದ್ದ ಮರು ಭೂಮಾಪನ ಪ್ರಾಯೋಗಿಕ ಯೋಜನೆಯಡಿ ಸಿದ್ದಪಡಿಸಿರುವ ಡಿಜಿಟಲ್ ಪಹಣಿಗಳನ್ನು ಜಮೀನಿನ ಮಾಲೀಕರಿಗೆ ವಿತರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಸಂಕ್ರಾಂತಿ ಹಬ್ಬದ ಹೊತ್ತಿಗೆ ಸಚಿವ ಸಂಪುಟ ವಿಸ್ತರಣೆಯಾಗಲಿದೆ ಎಂಬುದು ಸುಳ್ಳು. ಅಂತಹ ಯಾವುದೇ ಚರ್ಚೆ ನಡೆದಿಲ್ಲ. ಆ ಜವಾಬ್ದಾರಿ ಮುಖ್ಯಮಂತ್ರಿ ಮೇಲಿದೆ. ಈ ಕುರಿತು ಅವರನ್ನೇ ಕೇಳಿ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕುಂಭಮೇಳ ಇಂದಿನಿಂದ

ಒಂದನೇ ಪುಟದಿಂದ...

144 ವರ್ಷಗಳ ಬಳಿಕ ಆಕಾಶಕಾಯಗಳು (ಗ್ರಹ, ನಕ್ಷತ್ರಗಳು) ಒಂದೇ ರೇಖೆಯಲ್ಲಿ ಬರುತ್ತಿರುವುದರಿಂದ ಈ ಬಾರಿಯ ಮಹಾಕುಂಭ ಮೇಳ ಹೆಚ್ಚು ವಿಶಿಷ್ಟವಾದುದು ಎಂದು ಜ್ಯೋತಿಷಿಗಳು ಅಭಿಪ್ರಾಯಪಟ್ಟಿದ್ದಾರೆ.

ಪುಷ್ಯ ಪೂರ್ಣಿಮಾ ದಿನವಾದ ಸೋಮವಾರ ಸಂಗಮದಲ್ಲಿ (ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಕೂಡುವ ಸ್ಥಳ) ಮೊದಲ 'ಸ್ನಾನ' ಮಾಡುವುದರೊಂದಿಗೆ ಮಹಾಕುಂಭಕ್ಕೆ ಚಾಲನೆ ಸಿಗಲಿದೆ.

ಮೊದಲ 'ಶಾಹೀ ಸ್ನಾನ' ಮಂಗಳವಾರ (ಜ.14) ಮಕರ ಸಂಕ್ರಾಂತಿಯಂದು ನಡೆಯಲಿದೆ. ಆ ದಿನ ಸಂಗಮದ ನೀರಿನಲ್ಲಿ ಏಳು ಕೋಟಿಯಷ್ಟು ಜನರು ಪವಿತ್ರ ಸ್ನಾನ ಮಾಡುವ ನಿರೀಕ್ಷೆ ಇದೆ. ಇದೇ 29ಕ್ಕೆ ಮೌನಿ ಅಮಾವಾಸ್ಯೆ ಮತ್ತು ಫೆ.3ರಂದು ವಸಂತ ಪಂಚಮಿ ದಿನಗಳಂದೂ 'ಶಾಹೀ ಸ್ನಾನ' ನೆರವೇರಲಿದೆ. ಫೆ.26ರಂದು ಮಹಾಶಿವರಾತ್ರಿಯಂದು ಉತ್ಸವಕ್ಕೆ ತೆರೆ ಬೀಳಲಿದೆ.

ಗಂಗಾ ನದಿಯ ದಂಡೆಯಲ್ಲಿರುವ ಬಿಡಾರ ಗಳನ್ನೊಳಗೊಂಡ ತಾತ್ಕಾಲಿಕ ನಗರವು ನಾಗಸಾಧುಗಳು, ಸಂತರು, ಮಠಾಧೀಶರು, ಬೈರಾಗಿಗಳು, ಕಲ್ಪವಾಸಿಗಳು (ಒಂದು ತಿಂಗಳು ಕುಂಭದಲ್ಲಿ ಭಾಗವಹಿಸಿ, ಅತ್ಯಂತ ಶಿಸ್ತಿನ ಧಾರ್ಮಿಕ ಆಚರಣೆಗಳನ್ನು ಅನುಸರಿಸುವವರು) ಮತ್ತು ಭಕ್ತರಿಂದ ಬಹುತೇಕ ಭರ್ತಿಯಾಗಿದೆ.

ಕುಂಭಮೇಳದಲ್ಲಿ ಭಾಗವಹಿಸುವುದಕ್ಕಾಗಿ ದೇಶದ ವಿವಿಧ ಭಾಗಗಳಿಂದ ಜನರು ಭಾರಿ ಸಂಖ್ಯೆಯಲ್ಲಿ ಪ್ರಯಾಗ್‌ರಾಜ್‌ನತ್ತ ಬರುತ್ತಿದ್ದು, ಸಂಗಮದಲ್ಲಿ ಚಪ್ಪಟೆ ತಳದ ದೋಣಿಗಳನ್ನು ಬಳಸಿ ನಿರ್ಮಿಸಲಾಗಿರುವ ತಾತ್ಕಾಲಿಕ ಸೇತುವೆಗಳು, ರಸ್ತೆಗಳು ಭಕ್ತರಿಂದ ತುಂಬಿತುಳುಕುತ್ತಿವೆ.

ಸಿದ್ಧತೆ ಪೂರ್ಣ: ಮೇಳವು ಸುಗಮವಾಗಿ ನಡೆಯುವುದಕ್ಕಾಗಿ ರಾಜ್ಯ ಸರ್ಕಾರ, ಸ್ಥಳೀಯ ಆಡಳಿತವು ಪ್ರಯಾಗ್‌ರಾಜ್ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮಹಾಕುಂಭ ಮೇಳಕ್ಕಾಗಿ ರಾಜ್ಯ ಸರ್ಕಾರ ₹7,000 ಕೋಟಿ ವೆಚ್ಚ ಮಾಡುತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಮನೋಜ್ ಕುಮಾರ್ ಸಿಂಗ್ ಹೇಳಿದ್ದಾರೆ.

ಮೇಳ ನಡೆಯುವ ಸ್ಥಳದಲ್ಲಿನ ಪ್ರತಿ ವಲಯದಲ್ಲಿ 20 ಹಾಸಿಗೆಗಳ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಇದರ ಜೊತೆಗೆ ಭಕ್ತರಿಗೆ ಕ್ಷಿಪ್ರವಾಗಿ ಆರೋಗ್ಯ ಸೌಲಭ್ಯ ಕಲ್ಪಿಸುವುದಕ್ಕಾಗಿ ಇಡೀ ಪ್ರದೇಶವನ್ನು ಕೇಂದ್ರೀಕರಿಸಿ ದೊಡ್ಡ ಆಸ್ಪತ್ರೆಯ ವ್ಯವಸ್ಥೆ ಮಾಡಲಾಗಿದೆ. ಭಕ್ತರು ಸ್ನಾನ ಮಾಡುವ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಎದುರಾದರೆ ಅದನ್ನು ನಿಭಾಯಿಸುವುದಕ್ಕಾಗಿ 50 ಸ್ನಾನ ಘಟ್ಟಗಳಲ್ಲಿ 300 ಮುಳುಗು ತಜ್ಞರನ್ನು ಮತ್ತು ನಾಲ್ಕು ಜಲ ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ.

'ಶ್ರೀ ಪಂಚಯತಿ ಅಖಾಡಾ ಬಡಾ ಉದಾಸೀನ್' ಗುಂಪಿನ ಸಾಧುಗಳು ಭಾನುವಾರ ಮೆರವಣಿಗೆಯ ಮೂಲಕ ಸಾಗಿದರು ಪಿಟಿಐ ಚಿತ್ರ

ಏಪ್ರಿಲ್ ಒಳಗೆ ಜೆಡಿಎಸ್‌ಗೆ ನೂತನ ರಾಜ್ಯಾಧ್ಯಕ್ಷ

ಒಂದನೇ ಪುಟದಿಂದ...

'ನಿಖಿಲ್ ಕುಮಾರಸ್ವಾಮಿ ಅವರನ್ನೇ ಆ ಹುದ್ದೆಗೆ ಆಯ್ಕೆ ಮಾಡಬೇಕು ಎಂದು ಹಲವರು ಹೇಳಿದರೂ ಕೆಲವರಿಂದ ವಿರೋಧ ವ್ಯಕ್ತವಾಯಿತು. ಸಂಕ್ರಾಂತಿ ನಂತರ ಸಾಂಸ್ಥಿಕ ಚುನಾವಣಾ ಪ್ರಕ್ರಿಯೆ ಆರಂಭಿಸುವ ಪ್ರಸ್ತಾವ ಈ ಮೊದಲು ಇತ್ತು. ಆದರೆ, ನಿಖಿಲ್ ಆಯ್ಕೆ ಸಂಬಂಧ ವಿರೋಧ ವ್ಯಕ್ತವಾದ ಕಾರಣ ಚುನಾವಣಾ ಪ್ರಕ್ರಿಯೆ ತುಸು ಮುಂದೆ ಹೋಗಿದೆ. ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ನಂತರ ಪಕ್ಷ ಸಂಘಟನೆ ಕೆಲಸ ನನೆಗುದಿಗೆ ಬಿದ್ದಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಅದನ್ನು ಸರಿಪಡಿಸುವುದಾಗಿ ವರಿಷ್ಠರು ಹೇಳಿದರು' ಎಂದರು.

'ಎಚ್‌ಡಿಕೆ ಮುಗಿಸಲು ಸಾಧ್ಯವಿಲ್ಲ': 'ಕುಮಾರಸ್ವಾಮಿ ಅವರನ್ನು ಮುಗಿಸಿದರೆ ಜೆಡಿಎಸ್ ಮುಗಿದು ಹೋಗುತ್ತದೆ ಎಂದು ಕಾಂಗ್ರೆಸ್ ನಂಬಿದೆ. ಅದು ಸಾಧ್ಯವಿಲ್ಲ. ಕುಮಾರಸ್ವಾಮಿ ಅವರ ಹಿಂದೆ ಲಕ್ಷಾಂತರ ಕಾರ್ಯಕರ್ತರು ಇದ್ದಾರೆ. ಅವರು ಬಲಿಷ್ಠವಾಗಿ ನಿಂತಿದ್ದಾರೆ' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

'ಜೆಡಿಎಸ್ ಕುಟುಂಬ ಆಧಾರಿತ ಪಕ್ಷ ಎಂದು ಕಾಂಗ್ರೆಸ್ ಹೇಳುತ್ತದೆ. ಕಾಂಗ್ರೆಸ್ ಪಕ್ಷದ ಕಚೇರಿಗೆ ಹೋಗಿ ಅಲ್ಲಿ ಗೋಡೆಗಳ ಮೇಲೆ ನೇತು ಹಾಕಿರುವ ಫೋಟೋಗಳನ್ನು ಒಮ್ಮೆ ನೋಡಿ. ಕುಟುಂಬ ಆಧಾರಿತ ಪಾರ್ಟಿ ಯಾವುದು ಎನ್ನುವುದು ಗೊತ್ತಾಗುತ್ತದೆ' ಎಂದು ಟೀಕಿಸಿದರು.

'ಪಕ್ಷಕ್ಕಾಗಿ ದುಡಿದವರಿಗಷ್ಟೇ ಅವಕಾಶ'

ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿದವರಿಗಷ್ಟೇ ಪಕ್ಷದಲ್ಲಿ ಉತ್ತಮ ಸ್ಥಾನ ದೊರೆಯಲಿದೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸಭೆಯ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಏಪ್ರಿಲ್ ಒಳಗೆ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ನಡೆಸಲು ತೀರ್ಮಾನಿಸಲಾಗಿದೆ. ಆದರೆ ಯಾರನ್ನು ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ಚರ್ಚೆಯಾಗಿಲ್ಲ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಸಿದ್ಧತೆ ಬಗ್ಗೆ ಚರ್ಚಿಸಲಾಗಿದೆ' ಎಂದರು. ಸಭೆಗೆ ಕೆಲವರು ಹಾಜರಾಗದೇ ಇರುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಪಕ್ಷಕ್ಕಾಗಿ ದುಡಿಯುವ ಬಗ್ಗೆ ಎಲ್ಲ ನಾಯಕರಿಗೆ ಎಚ್ಚರಿಕೆ ನೀಡಿದ್ದೇನೆ. ಪಕ್ಷ ಸಂಘಟನೆಗಾಗಿ ಪ್ರಾಮಾಣಿಕವಾಗಿ ದುಡಿಯುವವರಿಗೆ ಅವಕಾಶ ಸಿಗುತ್ತದೆ' ಎಂದರು.

ಮೂಡುಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವೀರಪ್ಪ ಮೊಯಿಲಿ ಅವರ ವಿಶ್ವಸಂಸ್ಕೃತಿಯ ಮಹಾಯಾನ ಸಂಪುಟ 2 ಗದ್ಯ ಮಹಾಕಾವ್ಯವನ್ನು ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಬಿಡುಗಡೆ ಮಾಡಿದರು. ಪ್ರೊ.ಬಿ.ಎ.ವಿವೇಕ ರೈ, ಡಾ.ಎಂ. ಮೋಹನ ಆಳ್ವ ಭಾಗವಹಿಸಿದ್ದರು

ಗವಿಮಠಕ್ಕೆ ಬಂದ 15 ಲಕ್ಷ ರೊಟ್ಟಿ, ಇನ್ನೂ 5 ಲಕ್ಷ ರೊಟ್ಟಿ ಬರುವ ನಿರೀಕ್ಷೆ

ಹಳ್ಳಿಹಳ್ಳಿಗಳಲ್ಲೂ ರೊಟ್ಟಿ ಹಬ್ಬದ ಸಂಭ್ರಮ

● ಪ್ರಮೋದ ಕುಲಕರ್ಣಿ

ಕೊಪ್ಪಳ: ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಜೋಳದ ರೊಟ್ಟಿ ತಯಾರಿ ಕಾರ್ಯ ಭರದಿಂದ ಸಾಗಿದ್ದು, ಈಗಾಗಲೇ ಅಂದಾಜು 15 ಲಕ್ಷ ರೊಟ್ಟಿ ಸಂಗ್ರಹವಾಗಿವೆ. ಇನ್ನೂ ಐದು ಲಕ್ಷ ರೊಟ್ಟಿ ಬರುವ ನಿರೀಕ್ಷೆಯಿದೆ. ಇದಕ್ಕಾಗಿ ಈಗ ಕೊಪ್ಪಳ ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ನಿತ್ಯ ರಾತ್ರಿ ರೊಟ್ಟಿ ತಟ್ಟುವ ಸಂಭ್ರಮ ಕಂಡುಬರುತ್ತಿದೆ.

ರೊಟ್ಟಿ ತಟ್ಟುವ ಮಹಿಳೆಯರಲ್ಲಿ ಬಹುತೇಕರು ಹಗಲು ಹೊತ್ತಿನಲ್ಲಿ ಹೊಲಗಳಲ್ಲಿ ಕೆಲಸ ಮಾಡುವ ಹಾಗೂ ಒಪ್ಪೊತ್ತಿನ ಊಟಕ್ಕಾಗಿ ಅಂದಿನ ಅನ್ನವನ್ನು ಅಂದೇ ದುಡಿದು ದಣಿದು ಬರುವ ಶ್ರಮಜೀವಿಗಳು. ಆಯಾ ಗ್ರಾಮಗಳಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಒಂದೆಡೆ ಸೇರಿ ಬೆಳಗಿನ ಜಾವದ ತನಕ ಸಾವಿರಾರು ರೊಟ್ಟಿಗಳನ್ನು ತಟ್ಟುತ್ತಾರೆ. ಗವಿಮಠದ ಜಾತ್ರೆಗೆ ಬರುವ ಲಕ್ಷಾಂತರ ಭಕ್ತರ ದಾಸೋಹಕ್ಕೆ ಈ ರೊಟ್ಟಿಗಳನ್ನು ನೀಡಲಾಗುತ್ತದೆ.

ರೊಟ್ಟಿ ತಯಾರಿಕೆಗೆ ಆಯಾ ಊರಿನ ಯುವಕರು ಹಣ ಸಂಗ್ರಹಿಸಿ ಹಿಟ್ಟು ತರುತ್ತಾರೆ. ಊರಿನ ದೇವಸ್ಥಾನ, ಕ್ರೀಡಾಂಗಣ ಅಥವಾ ವಿಶಾಲವಾದ ಜಾಗದಲ್ಲಿ ನೂರಾರು ಒಲೆಗಳನ್ನು ನಿರ್ಮಿಸಿ ಒಂದೇ ಕಡೆ ಮಹಿಳೆಯರು ಕುಳಿತು ರೊಟ್ಟಿ ಮಾಡಲು ವ್ಯವಸ್ಥೆ ಮಾಡಲಾಗಿರುತ್ತದೆ. ದುಡಿದು ದಣಿದು ಬಂದರೂ ಒಂದಿಷ್ಟೂ ಬೇಸರಿಸಿಕೊಳ್ಳದೆ ಮಹಿಳೆಯರು ಪರಸ್ಪರ ಮಾತನಾಡುತ್ತ, ಗವಿಸಿದ್ಧೇಶ್ವರನ ಹಾಡುಗಳ ಧ್ಯಾನ ಮಾಡುತ್ತ ರೊಟ್ಟಿ ತಯಾರಿಸುವ ಚಿತ್ರಣ ರಾತ್ರಿ ಹೊತ್ತಿನಲ್ಲಿಯೂ ಈಗ ಸಾಮಾನ್ಯವಾಗಿದೆ.

ಜಾತ್ರೆ ಆರಂಭವಾಗುವ 15 ದಿನಗಳ ಮೊದಲು ಈ ಕೆಲಸ ನಡೆಯುತ್ತದೆ. ಎಲ್ಲ ಧರ್ಮಗಳ ಹಾಗೂ ಜಾತಿಗಳ ಜನ ರೊಟ್ಟಿ ತಟ್ಟಿ ತಮ್ಮ ಕೈಲಾದಷ್ಟು ಸೇವೆ ಸಲ್ಲಿಸುತ್ತಾರೆ. ಇನ್ನೂ ಕೆಲವರು ತಮ್ಮ ಮನೆಗಳಲ್ಲಿ ಸಾಧ್ಯವಾದಷ್ಟು ರೊಟ್ಟಿಗಳನ್ನು ತಯಾರಿಸಿ ಗ್ರಾಮದ ದೇವಸ್ಥಾನದಲ್ಲಿ ಸಂಗ್ರಹಿಸಿ ಅದ್ದೂರಿ ಮೆರವಣಿಗೆ ಮೂಲಕ ಬಂದು ಗವಿಮಠಕ್ಕೆ ಅರ್ಪಿಸುತ್ತಾರೆ. ಹೀಗೆ ಹಳ್ಳಿಗಳ ಯುವಕರ ಮತ್ತು ಮಹಿಳೆಯರ ಶ್ರಮದಿಂದ ತಯಾರಾಗುವ ರೊಟ್ಟಿಗಳು ಸೇರಿ ಪ್ರತಿವರ್ಷವೂ ಲಕ್ಷಾಂತರ ರೊಟ್ಟಿಗಳಾಗುತ್ತವೆ.

ರೊಟ್ಟಿ ತಯಾರಿಸಲು ವ್ಯವಸ್ಥೆ ಮಾಡುವ ಯುವಕರಲ್ಲಿ ಬಡವರೇ ಹೆಚ್ಚು. ಕಡು ಬರಗಾಲದ ಸಂಕಷ್ಟದ ಸಮಯದಲ್ಲಿಯೂ ತಮ್ಮ ಮನೆಯಲ್ಲಿ ಊಟಕ್ಕೆ ತೊಂದರೆಯಾದರೂ ಗವಿಮಠಕ್ಕೆ ರೊಟ್ಟಿ ಅರ್ಪಿಸುವ ಸಂಪ್ರದಾಯವನ್ನು ಮಾತ್ರ ಗ್ರಾಮಸ್ಥರು ಬಿಡುವುದಿಲ್ಲ. ಗವಿಮಠದ ಜಾತ್ರೆಯ ಮಹಾರಥೋತ್ಸವ ಜ. 15ರಂದು ನಡೆಯಲಿದ್ದು, ಇದಕ್ಕೂ ಹಲವು ದಿನಗಳ ಮೊದಲೇ ಜಿಲ್ಲೆ ಹಾಗೂ ನೆರೆ ಜಿಲ್ಲೆಗಳಲ್ಲಿ ಬೆಳಗಿನ ಜಾವದ ತನಕ ರೊಟ್ಟಿ ತಟ್ಟುವ 'ಜಾತ್ರೆ' ನಡೆಯುತ್ತಲೇ ಇದೆ. ಇದು ಹಳ್ಳಿಗಳ ಜನರ ನಡುವಿನ ಬಾಂಧವ್ಯವನ್ನೂ ಬೆಸೆದಿದೆ.

ಕೊಪ್ಪಳ ತಾಲ್ಲೂಕಿನ ಹಟ್ಟಿ ಕ್ರಾಸ್ ಬಳಿ ರಾತ್ರಿ ಜೋಳದ ರೊಟ್ಟಿ ತಯಾರಿಯಲ್ಲಿ ತೊಡಗಿದ್ದ ಮಹಿಳೆಯರು ಚಿತ್ರ: ಭರತ್ ಕಂದಕೂರ

ಗವಿಸಿದ್ಧೇಶ್ವರ ಮಹಾರಥೋತ್ಸವಕ್ಕೆ ಇನ್ನು 2 ದಿನ ಬಾಕಿ ಇದೆ. ಆಗಲೇ 15 ಲಕ್ಷದಷ್ಟು ಜೋಳದ ರೊಟ್ಟಿ ಸಂಗ್ರಹವಾಗಿವೆ. ನಿತ್ಯ ರೊಟ್ಟಿ ಬರುತ್ತಲೇ ಇವೆ

ರಾಮನಗೌಡ

ಗವಿಮಠದ ದಾಸೋಹ ವಿಭಾಗದ ಉಸ್ತುವಾರಿ

ಎಷ್ಟೇ ಕಷ್ಟವಾದರೂ ಪ್ರತಿವರ್ಷ ರೊಟ್ಟಿಗಳನ್ನು ತಯಾರಿಸಿ ಗವಿಮಠಕ್ಕೆ ಅರ್ಪಿಸುವುದು ವಾಡಿಕೆ. ಎಲ್ಲ ಧರ್ಮ, ಜಾತಿಗಳ ಮಹಿಳೆಯರೂ ರೊಟ್ಟಿ ತಟ್ಟುತ್ತಾರೆ

ಶಿವಕುಮಾರ ಚರಾರಿ, ರೊಟ್ಟಿ ತಯಾರಿಗೆ ವ್ಯವಸ್ಥೆ ಮಾಡಿದ್ದ ಮುಖಂಡ, ಕೊಪ್ಪಳ

'ಸಾಹಿತಿ ಮನುಷ್ಯ ಸಂಬಂಧ ಒಗ್ಗೂಡಿಸಲಿ'

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: 'ಪರಕೀಯರ ಆಕ್ರಮಣವನ್ನೇ ಭಾರತದ ಇತಿಹಾಸದಲ್ಲಿ ವೈಭವೀಕರಿಸಿದ್ದೇವೆ. ಆದರೆ, ಈ ಆಕ್ರಮಣದ ಮಧ್ಯೆ ನಮ್ಮ ಸಂಸ್ಕೃತಿ, ನಾಗರಿಕತೆ ಹೇಗೆ ನಡೆಯುತ್ತಿತ್ತು ಎಂಬುದರ ಸಮಗ್ರ ಅಧ್ಯಯನ, ಸಂಶೋಧನೆ ನಡೆದಿಲ್ಲ' ಎಂದು ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕ, ವಿಮರ್ಶಕ ಸಿ. ನಾಗಣ್ಣ ಭಾನುವಾರ ಇಲ್ಲಿ ಹೇಳಿದರು.

ಆಳ್ವಾಸ್ ಕಾಲೇಜಿನ ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ಸಾಹಿತಿ ಎಂ. ವೀರಪ್ಪ ಮೊಯಿಲಿ ಅವರ 'ವಿಶ್ವಸಂಸ್ಕೃತಿಯ ಮಹಾಯಾನ ಸಂಪುಟ 2' ಗದ್ಯ ಮಹಾಕಾವ್ಯವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಮ್ಮ ಚರಿತ್ರೆಯ ಬಗ್ಗೆ ಮೊಯಿಲಿ ಅವರ ಮರುವ್ಯಾಖ್ಯಾನ ಅರ್ಥಪೂರ್ಣವಾಗಿದೆ. ಅವರು ನಳಂದ, ತಕ್ಷಶಿಲ ವಿವಿಗಳಲ್ಲದೆ ಆಕ್ಸಫರ್ಡ್, ಕೇಂಬ್ರಿಜ್ ವಿವಿಗಳ ಚಿಂತನೆಗಳನ್ನು ಚೆನ್ನಾಗಿ ಅರಿತು ಕೊಂಡಿದ್ದಾರೆ. ಅಂಥ ವಿವಿಗಳ ನೆನಪಿನಲ್ಲಿ ನಮ್ಮ ವಿವಿಗಳನ್ನು ರಂಗಸ್ಥಳವನ್ನಾಗಿಸಿಕೊಂಡು ಪ್ರಸಿದ್ಧ ಪ್ರವಚನಗಳಿಗೆ ಗ್ರಂಥದಲ್ಲಿ ಗೌರವ ನೀಡಿದ್ದಾರೆ. ಗದ್ಯ ಮಹಾಕಾವ್ಯದ ಮೂಲಕ ಕನ್ನಡಮ್ಮನ ಕಿರೀಟಕ್ಕೆ ಹೊಸ ಗರಿಯನ್ನು ಮೂಡಿಸಿದ್ದಾರೆ' ಎಂದರು.

ಕೃತಿಕಾರ ವೀರಪ್ಪ ಮೊಯಿಲಿ ಮಾತನಾಡಿ, 'ಮನುಷ್ಯನ ಎಲ್ಲ ಕೆಡುಕುಗಳಿಗೂ ವಿಜ್ಞಾನದಲ್ಲಿ ಮದ್ದು ಇದೆ. ಆದರೆ, ದುರಹಂಕಾರ ಮತ್ತು ಸ್ವಜನ ಪಕ್ಷಪಾತಕ್ಕೆ ಮದ್ದಿಲ್ಲ. ಅಹಂನಿಂದ ಮಾನವೀಯ ಸಂಬಂಧಗಳು ಹಾಳಾಗಿವೆ. ಮಾನವ ಪ್ರಜ್ಞೆ ಜಾಗೃತಗೊಂಡು ಸಂಬಂಧ ಬೆಸೆಯಬೇಕಿದೆ' ಎಂದರು.

ಆಶಯ ನುಡಿಗಳನ್ನಾಡಿದ ನಿವೃತ್ತ ಕುಲಪತಿ ಬಿ.ಎ.ವಿವೇಕ ರೈ, 'ಇಂದು ಸಂವಾದಕ್ಕಿಂತ ವಿವಾದಕ್ಕೆ ಆದ್ಯತೆ, ಜ್ಞಾನದ ಕುರಿತ ಅವಜ್ಞೆ ಹೆಚ್ಚಿದೆ' ಎಂದರು.

ಮೂಡುಬಿದಿರೆ ಜೈನ ಮಠದ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಆಶೀರ್ವಚನ ನೀಡಿ, 'ಮೊಯಿಲಿ ಅವರು ರಾಜಕಾರಣವನ್ನು ಬದಿಗೆ ಸರಿಸಿ ಸಾಹಿತಿಯಾಗಿ, ದಾರ್ಶನಿಕರಾಗಿ ಇನ್ನಷ್ಟು ಕೊಡುಗೆ ನೀಡಬೇಕು' ಎಂದರು.

ಮೈಸೂರಿನ ಸಾಹಿತಿ ಸಂಶೋಧಕ, ಕಬ್ಬಿನಾಲೆ ವಸಂತ ಭಾರದ್ವಾಜ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ, 'ಆಳ್ವಾಸ್ ಕಾನೂನು ಕಾಲೇಜಿನ ಹೊಸ ಕಟ್ಟಡಕ್ಕೆ ಎಂ. ವೀರಪ್ಪ ಮೊಯಿಲಿ ಅವರ ಹೆಸರು ಇಡಲಾಗುವುದು. ಮೊಯಿಲಿ ಅವರ 90ನೇ ಜನ್ಮದಿನವನ್ನು ಹುಟ್ಟೂರು ಮೂಡುಬಿದಿರೆಯಲ್ಲಿ ಹಮ್ಮಿಕೊಳ್ಳುವ ಆಸೆ ನಮ್ಮದು' ಎಂದರು.

ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಶಾ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಬೆಂಗಳೂರಿನ ಕೆ.ಎಂ. ನಾಗರಾಜ್ ಭಾಗವಹಿಸಿದ್ದರು.

ಮೊಯಿಲಿ ಬದುಕಿಗೆ ಸ್ಫೂರ್ತಿಯಾಗಿದ್ದ ಕೃಷ್ಣಮೂರ್ತಿ ಭಟ್, ಅವಿನಾಶ್, ವಿಮಲ್ ಕುಮಾರ್, ಪೌಲ್ ವರ್ಗೀಸ್, ಧರ್ಮಪಾಲ ದೇವಾಡಿಗ, ಕೆ.ಎಂ. ನಾಗರಾಜ್ ಅವರನ್ನು ಗೌರವಿಸಲಾಯಿತು. 85ನೇ ಜನ್ಮದಿನ ಅಂಗವಾಗಿ ಮೊಯಿಲಿ ಅವರನ್ನು ಅಭಿನಂದಿಸಲಾಯಿತು.

ಸುಭಾಷಿತ

ನಿಮ್ಮನ್ನು ನೀವು ದುರ್ಬಲರೆಂದು ತಿಳಿದುಕೊಳ್ಳುವುದು ಅತಿದೊಡ್ಡ ಪಾಪ.

-ಸ್ವಾಮಿ ವಿವೇಕಾನಂದ

ವಿ.ವಿ.ಗಳ ನಿಯಂತ್ರಣಕ್ಕೆ ಕೇಂದ್ರದ ಯತ್ನ ರಾಜ್ಯಗಳ ಬಲವಾದ ಪ್ರತಿರೋಧ ಬೇಕಿದೆ

ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ವಿಶ್ವವಿದ್ಯಾಲಯಗಳ ಕುಲಪತಿ ಮತ್ತು ಬೋಧನಾ ಸಿಬ್ಬಂದಿ ಹಾಗೂ ಕಾಲೇಜುಗಳ ಬೋಧನಾ ಸಿಬ್ಬಂದಿಯ ನೇಮಕಕ್ಕೆ ಸಂಬಂಧಿಸಿ ಕರಡು ನಿಯಮಾವಳಿಯನ್ನು ಹೊರಡಿಸಿದೆ. ಈ ನಿಯಮಾವಳಿ ಜಾರಿಗೆ ಬಂದರೆ ಉನ್ನತ ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ಬದಲಾಗಲಿದೆ. ವ್ಯವಸ್ಥೆಯ ನಿಯಂತ್ರಣವು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಪರಿಧಿಗೆ ಒಳಪಡಲಿದೆ. ರಾಜ್ಯದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ ಕುಲಾಧಿಪತಿಗಳಿಗೆ ಅಪರಿಮಿತ ಅಧಿಕಾರ ನೀಡಲಾಗಿದೆ. ಕುಲಪತಿ ನೇಮಕದ ಶೋಧನಾ ಸಮಿತಿಯಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಗಳು ಇರುವುದಿಲ್ಲ. ರಾಜ್ಯದ ರಾಜ್ಯಪಾಲರು ವಿಶ್ವವಿದ್ಯಾಲಯಗಳ ಕುಲಾಧಿಪತಿಗಳಾಗಿರುತ್ತಾರೆ. ರಾಜ್ಯಪಾಲರನ್ನು ಕೇಂದ್ರ ಸರ್ಕಾರವು ನೇಮಿಸುತ್ತದೆ. ಹೀಗಾಗಿ, ಕುಲಪತಿಗಳ ನೇಮಕವನ್ನು ಕೇಂದ್ರ ಸರ್ಕಾರವೇ ಮಾಡಿದಂತಾಗುತ್ತದೆ. ಕುಲಪತಿಯಾಗಿ ನೇಮಕಗೊಳ್ಳಲು ಪಿಎಚ್‌ಡಿ ಪದವಿಯಾಗಲೀ ಬೋಧನೆಯ ಅನುಭವವಾಗಲೀ ಅಗತ್ಯವಿಲ್ಲ ಎಂದು ಕರಡು ನಿಯಮವು ಹೇಳುತ್ತದೆ. ಉದ್ಯಮ, ಆಡಳಿತ ಅಥವಾ ಇನ್ನಾವುದೇ ಕ್ಷೇತ್ರದ ವ್ಯಕ್ತಿಯು ಕುಲಪತಿಯಾಗಿ ನೇಮಕವಾಗಬಹುದು. ಬೋಧಕರ ನೇಮಕ ಮತ್ತು ಬಡ್ತಿಗೆ ಸಂಬಂಧಿಸಿ ಈಗ ಇರುವ ಅರ್ಹತೆಗಳನ್ನೂ ಬದಲಾಯಿಸುವ ಪ್ರಸ್ತಾವವು ಕರಡು ನಿಯಮಾವಳಿಯಲ್ಲಿ ಇದೆ.

ಶಿಕ್ಷಣ ಕ್ಷೇತ್ರದ ಮೇಲೆ ರಾಜ್ಯಗಳಿಗೆ ಇರುವ ಕಾನೂನುಬದ್ಧ ಅಧಿಕಾರವನ್ನು ಕಸಿದುಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಬಾರದು

ಈ ಕರಡು ನಿಯಮಾವಳಿಯು ಜಾರಿಗೆ ಬಂದರೆ, ಕುಲಪತಿ ನೇಮಕದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಪಾತ್ರ ಇರುವುದಿಲ್ಲ. ಇದು ಒಕ್ಕೂಟ ತತ್ವಗಳ ಸ್ಪಷ್ಟ ಉಲ್ಲಂಘನೆ. ಬಹಳ ಮುಖ್ಯವಾದ ಕ್ಷೇತ್ರವೊಂದರ ಸಂಪೂರ್ಣ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ನಡೆಸಿದ ಪ್ರಯತ್ನ. ಇದು ಸಂವಿಧಾನದ ಆಶಯಗಳಿಗೂ ವಿರುದ್ಧವಾಗಿದೆ. ಸಂವಿಧಾನದ ಏಳನೇ ಪರಿಚ್ಛೇದದಲ್ಲಿರುವ ಕೇಂದ್ರ ಪಟ್ಟಿಯ 66ನೇ ಅಂಶವು ಹೀಗೆ ಹೇಳುತ್ತದೆ: 'ಉನ್ನತ ಶಿಕ್ಷಣ ಅಥವಾ ಸಂಶೋಧನಾ ಸಂಸ್ಥೆಗಳು ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳ ಸಮನ್ವಯ ಮತ್ತು ಗುಣಮಟ್ಟ ನಿರ್ಧಾರ'ವು ಕೇಂದ್ರ ಸರ್ಕಾರದ ಹೊಣೆ. ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರಕ್ಕಿಂತ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇದೆ ಎಂದು ಇದರ ಅರ್ಥವಲ್ಲ. ಮಾನದಂಡ ರಚನೆ, ನಿಯಮಗಳ ರೂಪಿಸುವಿಕೆ ಮತ್ತು ಶೈಕ್ಷಣಿಕ ಚಟುವಟಿಕೆಗಳ ಸಮನ್ವಯ ಎಂಬುದನ್ನು ಶಿಕ್ಷಣ ಕ್ಷೇತ್ರದ ಮೇಲೆ ರಾಜ್ಯಗಳಿಗೆ ಇರುವ ಕಾನೂನುಬದ್ಧ ಅಧಿಕಾರವನ್ನು ಕಸಿದುಕೊಳ್ಳಲು ಬಳಸಿಕೊಳ್ಳಬಾರದು.

ರಾಜ್ಯಗಳು ರೂಪಿಸಿರುವ ಕಾಯ್ದೆಗಳ ಅಡಿಯಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿವೆ. ಇವುಗಳಿಗೆ ಅನುದಾನವನ್ನೂ ರಾಜ್ಯ ಸರ್ಕಾರಗಳೇ ನೀಡುತ್ತವೆ. ಶಿಕ್ಷಣವು ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಇದ್ದರೂ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುವ ಅಧಿಕಾರ ಯುಜಿಸಿಗೆ ಇಲ್ಲ. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ಹೆಚ್ಚಿನ ರಾಜ್ಯಗಳಲ್ಲಿ ಕುಲಪತಿಗಳ ನೇಮಕವು ಸದಾ ವಿವಾದಾತ್ಮಕ ವಿಚಾರವೇ ಆಗಿದೆ. ಕುಲಾಧಿಪತಿಗಳಾಗಿ ರಾಜ್ಯಪಾಲರು ಸೃಷ್ಟಿಸಿರುವ ವಿವಾದಗಳು ಮತ್ತು ಸಂಘರ್ಷದಿಂದಾಗಿ ಕುಲಪತಿ ನೇಮಕದ ಅಧಿಕಾರವನ್ನು ರಾಜ್ಯಪಾಲರಿಂದ ವಾಪಸ್ ಪಡೆಯಲು ಕೆಲವು ರಾಜ್ಯ ಸರ್ಕಾರಗಳು ಮುಂದಾಗಿವೆ. ಈಗ, ಕುಲಪತಿ ನೇಮಕದ ಪರಮಾಧಿಕಾರವನ್ನು ರಾಜ್ಯಪಾಲರಿಗೆ ನೀಡಲು ಯುಜಿಸಿ ಮುಂದಾಗಿದೆ. ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ವಿಶ್ವವಿದ್ಯಾಲಯಗಳ ಬೋಧಕರು ಕರಡು ನಿಯಮಾವಳಿಯನ್ನು ವಿರೋಧಿಸಿದ್ದಾರೆ. ಪಠ್ಯಕ್ರಮ ಬದಲಾವಣೆಯಂತಹ ನಡೆಗಳ ಮೂಲಕ ಶಿಕ್ಷಣವನ್ನು ನಿಯಂತ್ರಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರವು ಮಾಡಿದೆ. ಯುಜಿಸಿ ಮೂಲಕ ಕೇಂದ್ರ ಸರ್ಕಾರವು ಈಗ ಕೈಗೊಂಡಿರುವ ಕ್ರಮವು ವಿಶ್ವವಿದ್ಯಾಲಯಗಳು ಮತ್ತು ಇಡೀ ಉನ್ನತ ಶಿಕ್ಷಣ ಕ್ಷೇತ್ರದ ರಾಜಕೀಯ ಮತ್ತು ಆಡಳಿತಾತ್ಮಕ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳುವ ಹುನ್ನಾರವಾಗಿದೆ. ರಾಜ್ಯಗಳು, ವಿಶ್ವವಿದ್ಯಾಲಯಗಳು ಮತ್ತು ಇತರರು ಈ ಕ್ರಮಕ್ಕೆ ಬಲವಾದ ಪ್ರತಿರೋಧ ಒಡ್ಡಬೇಕಿದೆ.

ದಿನದ ಟ್ವೀಟ್

ಮೂಲಸೌಕರ್ಯಕ್ಕೆ ಆದ್ಯತೆ ಏಕಿಲ್ಲ?

ಸಣ್ಣಸಣ್ಣ ರಾಷ್ಟ್ರಗಳೂ ಉತ್ತಮ ಮೂಲಸೌಕರ್ಯ ಹೊಂದಿರುವುದನ್ನು ನೋಡಿದರೆ ಮುಜುಗರವಾಗುತ್ತದೆ- ಮೂಲಸೌಕರ್ಯ ಮತ್ತು ಪ್ರವಾಸೋದ್ಯಮಕ್ಕೆ ಹೂಡಿಕೆ ಮಾಡುವ ಸ್ಥಳೀಯ ರಾಜಕೀಯ ದೃಷ್ಟಿಕೋನವನ್ನೇ ನಾವು ಹೊಂದಿಲ್ಲ. ನಾನೀಗ ಕಬಿನಿಯಲ್ಲಿದ್ದು, ಇಲ್ಲಿನ ರಸ್ತೆಗಳು ಭಯಾನಕವಾಗಿವೆ. ರಾಜಸ್ಥಾನ ಮತ್ತು ಮಧ್ಯಪ್ರದೇಶವು ತಮ್ಮ ವನ್ಯಜೀವಿ ಸಂರಕ್ಷಣಾ ತಾಣಗಳಿಗೆ ತೆರಳಲು ಉತ್ತಮ ರಸ್ತೆಗಳನ್ನು ಹೊಂದಿವೆ.

ಕಿರಣ್ ಮಜುಂದಾರ್ ಶಾ, ಉದ್ಯಮಿ

ಕಿಡಿನುಡಿ

ಕಾಂಗ್ರೆಸ್ ಪಕ್ಷ ಹಾಗೂ ಅಂಬೇಡ್ಕರ್ ನಡುವೆ ರಾಜಕೀಯ ಭಿನ್ನಾಭಿಪ್ರಾಯವಿತ್ತು. ಅಂಬೇಡ್ಕರ್ ಅವರು ತಮ್ಮ ಪಕ್ಷದಿಂದ ಸ್ಪರ್ಧೆ ಮಾಡಿದಾಗ ಅವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ರಾಜಕೀಯದಲ್ಲಿ ಇದು ಸಾಮಾನ್ಯ. ಅಂಬೇಡ್ಕರ್ ಅವರನ್ನು ಬಿಜೆಪಿ, ಆರ್‌ಎಸ್‌ಎಸ್‌ನವರು ಎಂದಾದರೂ ಗೆಲ್ಲಿಸಿದ್ದರೇ?

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಗುರುವಾರ, 13-1-2000

• **ಆರೋಗ್ಯ ಸೇವೆ: ವರದಿಗೆ ಸೂಚನೆ**

ಬೆಂಗಳೂರು, ಜ. 12– ರಾಜ್ಯದ ಸರ್ಕಾರಿ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಆರೋಗ್ಯ ಸೇವೆ ಕುರಿತು ಸಮಗ್ರ ವರದಿ ನೀಡುವಂತೆ ಮುಖ್ಯಮಂತ್ರಿ ರಚಿಸಿರುವ ವಿಶೇಷ ಕಾರ್ಯ ತಂಡಕ್ಕೆ ಸರ್ಕಾರ ತಿಳಿಸಿದೆ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿ ಡಾ. ಎಚ್. ಸುದರ್ಶನ್ ನೇತೃತ್ವದಲ್ಲಿ ರಚಿಸಲಾಗಿರುವ ಕಾರ್ಯತಂಡಕ್ಕೆ ವರದಿಯನ್ನು ತುರ್ತಾಗಿ ನೀಡಬೇಕು ಎಂದು ಸೂಚಿಸಿರುವುದಾಗಿ ಆರೋಗ್ಯ ಸಚಿವ ಡಾ. ಎ.ಬಿ. ಮಾಲಕರಡ್ಡಿ ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಈ ವರದಿ ಆಧರಿಸಿ ಅಲೋಪತಿ, ಆಯುರ್ವೇದ, ಯುನಾನಿ, ಹೋಮಿಯೋಪಥಿ ಚಿಕಿತ್ಸಾ ಪ್ರಕಾರಗಳನ್ನು ಅಭಿವೃದ್ಧಿಪಡಿಸಿ, ವೈದ್ಯಕೀಯ ಕ್ಷೇತ್ರವನ್ನು ಹೇಗೆ ವಿಸ್ತರಿಸಬೇಕೆಂದು ನಿರ್ಧರಿಸಲಾಗುವುದೆಂದರು.

1946ರಲ್ಲಿ ಬೋರ್ ಸಮಿತಿಯು ಆರೋಗ್ಯ ಪರಿಸ್ಥಿತಿಯ ಬಗ್ಗೆ ವರದಿ ನೀಡಿದ ನಂತರ ರಾಜ್ಯದಲ್ಲಿ ಸಮಗ್ರವಾಗಿ ಇಂಥ ವರದಿಗಳನ್ನು ಸಿದ್ಧಪಡಿಸಿಲ್ಲ.

• **ರಾಜ್ಯದ ಪರಿಶೀಲನೆಯಲ್ಲಿ ಚಿನ್ನ ದಾಸ್ತಾನು ನಿಗಮ**

ಬೆಂಗಳೂರು, ಜ. 12– ಲೇವಾದೇವಿ ವ್ಯವಹಾರ ನಡೆಸುವವರು ಸಾರ್ವಜನಿಕರಿಂದ ಸಂಗ್ರಹಿಸುವ ಚಿನ್ನದ ಒಡವೆಗಳು ದುರ್ಬಳಕೆಯಾಗದಂತೆ ತಡೆಯಲು ಅನುಕೂಲವಾಗುವಂತೆ ಆಸ್ತಿ ನಿರ್ವಹಣಾ ಕಂಪನಿಯನ್ನು ಮತ್ತು ಚಿನ್ನದ ದಾಸ್ತಾನು ನಿಗಮವನ್ನು ಅಸ್ತಿತ್ವಕ್ಕೆ ತರಲು ರಾಜ್ಯ ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ.

ಸಹಕಾರಿ ಸಚಿವಾಲಯದ ಆಶ್ರಯದಲ್ಲಿ ಇವು ಕಾರ್ಯನಿರ್ವಹಿಸುವಂತೆ ಮಾಡಿ, ಖಾಸಗಿ ಲೇವಾದೇವಿಗಾರರಿಂದ ಬಡ ಸಾಲ ಗಾರರಿಗೆ ಆಗುವ ಮೋಸದ ಪ್ರಕರಣಗಳಿಗೆ ಕಡಿವಾಣ ಹಾಕಲು ಲೇವಾದೇವಿ ಸಂಬಂಧದ ಕಾನೂನಿಗೆ ತಿದ್ದುಪಡಿ ತರುವ ಸಾಧ್ಯತೆಯನ್ನು ಸಹಕಾರಿ ಸಚಿವರು ಪರಿಶೀಲಿಸುತ್ತಿದ್ದಾರೆಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಸೋಮವಾರ, 13-1-1975

• **ಸಮೃದ್ಧಿ ಬರಲಿಲ್ಲ– ಸಂಪ್ರದಾಯ ಬಿಡಲಿಲ್ಲ**

ಬೆಂಗಳೂರು, ಜ. 12– ಸುಗ್ಗಿಯನ್ನು ಸಾರುವ ಹಬ್ಬ 'ಸಂಕ್ರಾಂತಿ'. ಎಳ್ಳು, ಅದರ ಮಿಶ್ರಣವೆಲ್ಲಾ ಸಮೃದ್ಧಿಯ ಪ್ರತೀಕ. ಆ ಕಲ್ಪನೆ ಕಾಲ ಕಾಲದಿಂದ ಹರಿದುಬಂದಿದೆ ನಮ್ಮ ಸಾಂಸ್ಕೃತಿಕ ಜೀವವಾಹಿಯಾಗಿ. ಈಗ ಪೇಟೆಗೆ ಹೋದರೆ ಈ ಕಲ್ಪನೆ ಕೇವಲ ಭಾವನಾತ್ಮಕವಾದುದು, ವಾಸ್ತವ ಸಂಗತಿಯಿಂದ ಬಲುದೂರ ಎನ್ನುವುದು ಬಹುಬೇಗ ಅರ್ಥವಾಗುತ್ತದೆ.

ಈಗ ಸಮೃದ್ಧಿಯಿಲ್ಲ, ಆದರೆ ಸಂಪ್ರದಾಯ ಬಿಟ್ಟಿಲ್ಲ. ಈ ಸಂಪ್ರದಾಯ ಆನಂದದ ಮೂಲ. ಆದುದರಿಂದಲೇ ಕೊಡವಿ ಕಳಚಿಕೊಳ್ಳುವುದು ಸುಲಭವಲ್ಲ. 'ಸಂಕ್ರಮಣ'ವು ಮಾರುಕಟ್ಟೆಯಲ್ಲೇನೂ ಪರಿವರ್ತನೆ ತಂದಿಲ್ಲ. ಕಳೆದ ಸಂಕ್ರಾಂತಿಯಿಂದ ಒಂದೇ ಸಮನೆ ಅನುಭವಿಸಿದ ಬವಣೆ ಈ ಸಂಕ್ರಾಂತಿಯವರೆಗೂ ಮುಂದುವರಿದಿದೆ.

'ಶಾಸ್ತ್ರಕ್ಕೆ' ಎಳ್ಳು ಮಾಡಿ ಮುಗಿಸುವ ಮಾತೇ ಎಲ್ಲೆಡೆ ಕೇಳಿಬರುತ್ತಿದೆ. ಮಧ್ಯಮ ವರ್ಗದ ಬಹುತೇಕ ಕುಟುಂಬಗಳಲ್ಲಿ ಎಳ್ಳು ಬೀರುವುದೇ ಒಂದು ಭಾರ.

ಏನಿಲ್ಲ ಎಂದರೂ ಕನಿಷ್ಠ ಮೂರು ಕೆ.ಜಿ. ಯಷ್ಟು 'ಎಳ್ಳು ಬೆಲ್ಲ' ತಯಾರಿಸಬೇಕು. ಮನೆಯಲ್ಲೇ ತಯಾರಿಸಿದರೆ ಕೆ.ಜಿ.ಗೆ 'ಎಂಟು, ಎಂಟೂವರೆ ರೂಪಾಯಿ ಖರ್ಚಾಗುತ್ತದೆ. ಅಂಗಡಿಗಳಲ್ಲಿ ಒಂದು ಕೆ.ಜಿ. 'ಎಳ್ಳು ಬೆಲ್ಲ' ಹತ್ತು ರೂಪಾಯಿ. ಒಂದು ಕೆ.ಜಿ.ಯಷ್ಟನ್ನು ಇಪ್ಪತ್ತು ಮನೆಗಳಿಗೆ ಹಂಚಬಹುದು. ಅದೂ ರುಚಿ ನೋಡುವಷ್ಟು ಮಾತ್ರ ಕೊಟ್ಟರೆ. ಅದರೊಡನೆ ಬಾಳೆಹಣ್ಣು, ಕಬ್ಬು, ಸಣ್ಣ ಅಡಿಕೆ ಮತ್ತು ಸಕ್ಕರೆ ಅಚ್ಚಿನ ಖರ್ಚು ಬೇರೆ.

ಮುಂದಿನ ಇಪ್ಪತ್ತೈದು ವರ್ಷ ಮನುಕುಲದ ಇತಿಹಾಸದಲ್ಲೇ ಮಹತ್ವದ್ದಾಗಿರಲಿದೆ

ನಾಲ್ಕನೇ ಔದ್ಯಮಿಕ ಕ್ರಾಂತಿ: ಏನು, ಎತ್ತ?

ವಿಶ್ಲೇಷಣೆ

ವಸಂತ ಶೆಟ್ಟಿ

ಈ ಶತಮಾನದ ಕಾಲು ಭಾಗ ಕಳೆದಾಗಿದೆ. ಈ ಎರಡೂವರೆ ದಶಕ ಒಂದೆಡೆ, ತಡೆಯಿರದ ಜಾಗತೀಕರಣ, ವಲಸೆ ಮತ್ತು ವಿಜ್ಞಾನ- ತಂತ್ರಜ್ಞಾನದ ವಲಯದಲ್ಲಿ ಕ್ಷಿಪ್ರ ಪ್ರಗತಿಯನ್ನು ಕಂಡರೆ, ಇನ್ನೊಂದೆಡೆ, ಪ್ರಗತಿಯ ಇನ್ನೊಂದು ಮುಖವೆಂಬಂತೆ, ಪರಿಸರದಲ್ಲಿ ಅಪಾರ ಬದಲಾವಣೆಗಳು ಮತ್ತು ಅದರಿಂದಾಗಿ ಹೆಚ್ಚಿನ ಹವಾಮಾನ ವೈಪರೀತ್ಯಗಳನ್ನು ಕಾಣುವ ದಿನಗಳಿಗೆ ಸಾಕ್ಷಿಯಾಯಿತು. ಒಂದೇ ಹೊತ್ತಿಗೆ ಮುಂದಿನ ದಿನಗಳ ಬಗ್ಗೆ ಅಪಾರ ಭರವಸೆ, ಮುಂದೇನು ಅನ್ನುವ ಚಿಂತೆ ಎರಡನ್ನೂ ಹುಟ್ಟಿಸಿದ ದಿನಗಳು ಇಲ್ಲಿದ್ದವು. ಈ ಶತಮಾನದ ಮುಂದಿನ ಇಪ್ಪತ್ತೈದು ವರ್ಷ ನಾಲ್ಕನೆಯ ಔದ್ಯಮಿಕ ಕ್ರಾಂತಿಯದ್ದು ಅನ್ನುವ ಚರ್ಚೆ ಈಗ ಹೆಚ್ಚೆಚ್ಚು ನಡೆಯುತ್ತಿದೆ. ಈ ಕ್ರಾಂತಿ ಹಿಂದಿನ ಮೂರು ಹಂತಗಳ ಕ್ರಾಂತಿಯ ಹೋಲಿಕೆಯಲ್ಲಿ ಹೇಗೆ ಬೇರೆಯಾದದ್ದು, ಇದು ಹೊತ್ತು ತರಬಹುದಾದ ಸಾಧ್ಯತೆಗಳು, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಆಯಾಮಗಳಲ್ಲಿ ತರಬಹುದಾದ ಬುಡಮೇಲು ಬದಲಾವಣೆಗಳು ಯಾವುವು ಅನ್ನುವುದು ಈಗ ಕಾವೇರಿದ ಚರ್ಚೆಗಳನ್ನು ಹುಟ್ಟುಹಾಕುತ್ತಿದೆ.

ಔದ್ಯಮಿಕ ಕ್ರಾಂತಿಯ ಈ ಹಿಂದಿನ ಮೂರು ಹಂತಗಳು ಯಾವುವು ಎಂದು ಒಮ್ಮೆ ಚುಟುಕಾಗಿ ನೆನೆಯುವುದಾದರೆ, ಕಲ್ಲಿದ್ದಲು ಬಳಸಿ ಹಬೆಚಾಲಿತ ಯಂತ್ರಗಳು ಕಟ್ಟಿದ ಕಾರ್ಖಾನೆಗಳದ್ದು ಮೊದಲ ಹಂತವಾದರೆ, ವಿದ್ಯುತ್, ತೈಲ ಮತ್ತು ಗ್ಯಾಸ್ ಬಳಕೆಯಲ್ಲಿ ಕಂಡುಕೊಂಡ ಯಂತ್ರಾಧಾರಿತ ಸಾಮೂಹಿಕ ಉತ್ಪಾದನೆ ಮತ್ತು ಸಾರಿಗೆ ವ್ಯವಸ್ಥೆಯು ಎರಡನೆಯ ಹಂತವಾಗಿತ್ತು. ಮುಂದೆ ಅಣು ಶಕ್ತಿ ಮತ್ತು ಎಲೆಕ್ಟ್ರಾನಿಕ್ಸ್ ಸುತ್ತಲಿನ ಡಿಜಿಟಲ್ ಆವಿಷ್ಕಾರಗಳು ತಂದ ಬದಲಾವಣೆಗಳು ಮೂರನೆಯ ಕ್ರಾಂತಿಗೆ ಕಾರಣವಾದರೆ, ಈಗ ಕೃತಕ ಬುದ್ಧಿಮತ್ತೆ, ಜೀನ್ ಎಡಿಟಿಂಗ್, ರೋಬಾಟಿಕ್ಸ್, ತ್ರಿ-ಡಿ ಪ್ರಿಂಟಿಂಗ್ ತರಹದ ಡಿಜಿಟಲ್ ಮತ್ತು ಜೈವಿಕ ತಂತ್ರಜ್ಞಾನದ ಹೆಗಲೇರಿ ಬರುತ್ತಿರುವ ಅಲೆಯೇ ನಾಲ್ಕನೆಯ ಔದ್ಯಮಿಕ ಕ್ರಾಂತಿ ಎನ್ನಬಹುದು. ಇದು ಬರೀ ತಂತ್ರಜ್ಞಾನದ ದಾಪುಗಾಲು ಅನ್ನುವಂತಹ ಬದಲಾವಣೆಯಲ್ಲ, ಇದು ಮನುಕುಲ, ಮನುಕುಲದ ನಾಗರಿಕತೆಯನ್ನು ಮೂಲಭೂತವಾಗಿ ಹೊಸ ರೀತಿಯಲ್ಲಿ ರೂಪಿಸುವ ಶಕ್ತಿ ಹೊಂದಿದೆ.

ಈ ಹಿಂದಿನ ಕ್ರಾಂತಿಗಳು ಹಂತ ಹಂತವಾಗಿ, ಸಹಜವಾಗಿ ಉತ್ಪಾದನೆಯ ದಾರಿ ಮತ್ತು ಸಾಮರ್ಥ್ಯಗಳನ್ನು ಬದಲಾಯಿಸುತ್ತಾ ಬಂದಿದ್ದರೆ, ನಾಲ್ಕನೆಯ ಅಲೆ ಭೌತಿಕ, ಡಿಜಿಟಲ್ ಮತ್ತು ಜೈವಿಕ ವಲಯಗಳ ನಡುವಿನ ಗೆರೆಯನ್ನೆಲ್ಲ ಅಳಿಸಿ ಬದುಕಿನ ಎಲ್ಲ ಹಂತಗಳಲ್ಲೂ ಅತ್ಯಂತ ಕ್ಷಿಪ್ರಗತಿಯಲ್ಲಿ ಹಿಂದೆಂದೂ ಕಂಡಿರದ ಬದಲಾವಣೆಗಳನ್ನು ತರುವತ್ತ ಅಡಿಯಿಟ್ಟಿದೆ. ಅತ್ಯಂತ ಬುದ್ಧಿವಂತ, ತನ್ನಷ್ಟಕ್ಕೆ ತಾನೇ ಕಲಿಯುವ, ತಿದ್ದಿಕೊಳ್ಳುವ, ಸುಧಾರಣೆಗೊಳ್ಳುವ ತಂತ್ರಜ್ಞಾನಾಧಾರಿತ ವ್ಯವಸ್ಥೆಗಳನ್ನು ಕಟ್ಟುತ್ತ, ಯಂತ್ರಗಳನ್ನು ನಿರ್ವಹಿಸುವ ಪಾತ್ರದಿಂದ ಮನುಷ್ಯನನ್ನು ಬಿಡುಗಡೆಗೊಳಿಸಿ, ಈ ಎಲ್ಲ ಹೊಸ ವ್ಯವಸ್ಥೆಗಳ ಸಹವರ್ತಿಗಳು ಇಲ್ಲವೇ ಮೇಲ್ವಿಚಾರಕರು ಎಂಬ ಹೊಸ ಪಾತ್ರದಲ್ಲಿ ಮನುಷ್ಯರನ್ನು ಕೂರಿಸುವ ಉದ್ದೇಶ ಈ ಕ್ರಾಂತಿಗಿದೆ. ಉದಾಹರಣೆಗೆ, ವೈದ್ಯರ ಕೊರತೆ ಕಾಡುವ ನಮ್ಮ ಗ್ರಾಮೀಣ ಭಾಗಗಳಲ್ಲಿ ಎ.ಐ. ತಂತ್ರಜ್ಞಾನದ ಬಲದಿಂದ ಕಾಯಿಲೆ ಪತ್ತೆ, ರಿಮೋಟ್ ಸರ್ಜರಿ, ಟೆಲಿಮೆಡಿಸಿನ್‌ನಂತಹ ಅನುಕೂಲಗಳ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ತರುವುದು. ಕ್ರಿಸ್ಪರ್ ತರಹದ ಜೀನ್ ತಿದ್ದುವ ತಂತ್ರಜ್ಞಾನದ ಮೂಲಕ ವಂಶವಾಹಿಯಾಗಿ ಬರುವ ಹಲವು ಗುಣಪಡಿಸಲಾಗದ ಕಾಯಿಲೆಗಳನ್ನು ಸಲೀಸಾಗಿ ಗುಣಪಡಿಸಿ, ಮುಂದಿನ ಪೀಳಿಗೆಗೆ ಆ ಕಾಯಿಲೆಗಳು ಬರದಂತೆ ಮಾಡುವುದು, ಕೃಷಿ ರೋಬಾಟ್ಸ್ ಬಳಸಿ ಬಿತ್ತನೆಯಿಂದ ಕೊಯ್ಲಿನವರೆಗಿನ ಎಲ್ಲ ಹಂತಗಳಲ್ಲೂ ಕ್ಷಮತೆ ಹೆಚ್ಚಿಸಿ ಆಹಾರ ಭದ್ರತೆ ಸಾಧಿಸುವುದು, ದೊಡ್ಡ ಮಟ್ಟದ ತ್ರಿ.ಡಿ. ಮುದ್ರಣ ವ್ಯವಸ್ಥೆ ಬಳಸಿ ಕೈಗೆಟಕುವ ಬೆಲೆಯಲ್ಲಿ, ಕೆಲವೇ ದಿನಗಳಲ್ಲಿ ಮನೆ ಕಟ್ಟಿ ಸೂರಿಲ್ಲದವರಿಗೆ ಸುಲಭದಲ್ಲಿ ಸೂರು ಕಲ್ಪಿಸುವುದು, ಎ.ಐ. ಚಾಲಿತ ಚಾಲಕರಿಲ್ಲದ ಸಾರಿಗೆ ವ್ಯವಸ್ಥೆಯ ಮೂಲಕ ವರ್ಷವೂ ಅಪಘಾತಗಳಲ್ಲಿ ಸಂಭವಿಸುವ ಲಕ್ಷಾಂತರ ಸಾವು, ನೋವನ್ನು ತಪ್ಪಿಸಿ ಸುರಕ್ಷಿತ ಸಾರಿಗೆಯ ಏರ್ಪಾಡು ಕಲ್ಪಿಸುವುದು, ಅಂತರ್ಜಾಲ ಬಳಸಿ ಜ್ಞಾನದ ಸೃಷ್ಟಿ ಮತ್ತು ಪಸರಿಸುವಿಕೆಯನ್ನು ಪ್ರಜಾಸತ್ತಾತ್ಮಕವಾಗಿಸಿ, ಶಿಕ್ಷಣ ಮತ್ತು ಉದ್ಯಮದ ಲಾಭ ಪಡೆದು ಆರ್ಥಿಕವಾಗಿ ಬಲ ಹೊಂದಲು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವುದು, ಬ್ಲಾಕ್‌ಚೇನ್ ತರಹದ ತಂತ್ರಜ್ಞಾನ ಬಳಸಿ ಆಡಳಿತದಲ್ಲಿ ಪಾರದರ್ಶಕತೆ ತಂದು ಸರ್ಕಾರಿ ಯಂತ್ರದಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು, ಹೀಗೆ ಈ ಕ್ರಾಂತಿಯ ಸಾಧ್ಯತೆಗಳನ್ನು ಪಟ್ಟಿ ಮಾಡುತ್ತಾ ಸಾಗಬಹುದು. ಇವುಗಳಲ್ಲಿ ಹಲವು ಈಗಾಗಲೇ ಸಾಧ್ಯವಾಗಿದ್ದರೆ ಇನ್ನು ಹಲವು ನಮ್ಮ ಜೀವಿತಾವಧಿಯಲ್ಲೇ ಸಾಧ್ಯವಾಗಲಿವೆ.

ತಡೆಯಿರದ ಪ್ರಗತಿ ಮತ್ತು ಕ್ಷಮತೆಯ ಭರವಸೆ ಈ ಕ್ರಾಂತಿಯ 'ಬೆಳಕಿನ ಮುಖ'ವಾದರೆ, ಬೆನ್ನ ಹಿಂದಿನ ಕತ್ತಲಲ್ಲಿರುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಸವಾಲುಗಳು ಮತ್ತು ಅವುಗಳ ಅಗಾಧತೆ ಇದರ 'ಕತ್ತಲ ಮುಖ' ಎನ್ನಬಹುದು. ಇದನ್ನು ಎದುರುಗೊಳ್ಳಲು, ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳು ಸಿದ್ಧವಾಗಿವೆಯೇ ಅನ್ನುವುದು ಈ ಹೊತ್ತಿನ ಪ್ರಶ್ನೆ.



ಕಾರ್ಖಾನೆಗಳಲ್ಲಿ 'ತಪ್ಪು' ಮಾಡುವ, ವಿಶ್ರಾಂತಿ ಬೇಡುವ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ನಡುವೆ ಸಮತೋಲನ ಬಯಸುವ ಮನುಷ್ಯರ ಜಾಗದಲ್ಲಿ ಒಂದೂ ತಪ್ಪು ಮಾಡದ, ದಿನದ 24 ಗಂಟೆಗಳೂ ಕೆಲಸ ಮಾಡುವ ರೋಬಾಟ್ಸ್ ಕಾರ್ಮಿಕರಾಗಿ ಬಂದಾಗ ಏನಾಗಬಹುದು? ಹೆಚ್ಚಿನ ಕ್ಷಮತೆ ಉದ್ಯಮಿಗಳಿಗೆ ಹೆಚ್ಚಿನ ಲಾಭ ತಂದುಕೊಟ್ಟರೆ ಕಾರ್ಮಿಕರು ಕೆಲಸ ಕಳೆದುಕೊಳ್ಳಬಹುದು, ಇಲ್ಲವೇ ಕಡಿಮೆ ಸಂಬಳಕ್ಕೆ ಕೆಲಸ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು. ಇದು ಸಹಜವಾಗಿಯೇ ಈಗಾಗಲೇ ಇರುವ ಆರ್ಥಿಕ ತಾರತಮ್ಯವನ್ನು ಇನ್ನಷ್ಟು ಹೆಚ್ಚಿಸಬಹುದು. ಬದುಕಿನ ಎಲ್ಲ ಮಜಲುಗಳನ್ನು ತಂತ್ರಜ್ಞಾನದ ಮೂಲಕ ಜೋಡಿಸುವ ವ್ಯವಸ್ಥೆ ಒಂದು ಹೊಸ 'ತಂತ್ರಜ್ಞಾನಶಾಹಿ' ವ್ಯವಸ್ಥೆಗೆ ಕಾರಣವಾಗಬಹುದು. ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವೇ ಕೆಲವು ಕಂಪನಿಗಳು ಕೋಟಿಗಟ್ಟಲೆ ಜನರ ಯೋಚನೆಯನ್ನು ನಿಯಂತ್ರಿಸುವ ಶಕ್ತಿ ಪಡೆದುಕೊಳ್ಳಬಹುದು. ಇದು ಸಮುದಾಯಕೇಂದ್ರಿತ ಸಮಾಜಗಳೆಲ್ಲವನ್ನೂ ಇನ್ನಷ್ಟು ವ್ಯಕ್ತಿಕೇಂದ್ರಿತ ಸಮಾಜಗಳನ್ನಾಗಿಸುವತ್ತ ನೂಕಬಹುದು. ಸರ್ವಾಧಿಕಾರಿ ಧೋರಣೆಯ ರಾಜಕಾರಣಿಗಳು ಈ ತಂತ್ರಜ್ಞಾನಶಾಹಿ ವ್ಯವಸ್ಥೆಯ ಜೊತೆ ಕೈಜೋಡಿಸಿ ನಾಗರಿಕರ ಹಕ್ಕುಗಳನ್ನು ಮೊಟಕುಗೊಳಿಸಿ, ಜಗತ್ತೆಲ್ಲವೂ ಇನ್ನೊಂದು ಚೀನಾದಂತಹ ಕಣ್ಗಾವಲಿನ ಸಮಾಜವಾಗಬಹುದು.

ಜೀನ್ ತಿದ್ದುವ ತಂತ್ರಜ್ಞಾನದ ಮೇಲೆ ಹಿಡಿತ ಹೊಂದಿರುವ ದೇಶಗಳು ಹಿಟ್ಲರ್ ಕಾಲದಲ್ಲಿದ್ದ 'ಶ್ರೇಷ್ಠ ಮನುಷ್ಯನ ತಳಿ' ರೂಪಿಸುವ, ಉಳಿದ ಬಗೆಯ ಜನರನ್ನು ಹೇಗಾದರೂ ಮಾಡಿ ಅಳಿಸುವ ಯೂಜೆನಿಕ್ಸ್ ತರಹದ ಯೋಜನೆಗಳನ್ನು ಮತ್ತೆ ಮುನ್ನೆಲೆಗೆ ತರಬಹುದು. ಎ.ಐ. ತರಹದ ತಂತ್ರಜ್ಞಾನದ ಮೇಲೆ ಏಕಸ್ವಾಮ್ಯ ಸಾಧಿಸಿದ ದೇಶಗಳು ಅದನ್ನು ರಕ್ಷಣೆ, ವ್ಯಾಪಾರದ ರೀತಿಯ ವಲಯಗಳಲ್ಲಿ ಆಯುಧದಂತೆ ಬಳಸಿ ದೇಶಗಳ ನಡುವಿನ ಅಧಿಕಾರದ ಅಸಮತೋಲನವು ಇನ್ನಷ್ಟು ಬಿಗಡಾಯಿಸುವಂತೆ ಮಾಡಬಹುದು. ಇದೆಲ್ಲ ಒಂದು ತೆರನಾದರೆ, ಜೀವನದ ಬಹುತೇಕ ಅಗತ್ಯಗಳನ್ನು ಯಂತ್ರಗಳ ಕೈಗೊಪ್ಪಿಸಿದರೆ, ಹುಟ್ಟಿಗೊಂದು ಕಾರಣ, ಬದುಕಿಗೊಂದು ಅರ್ಥ ಹುಡುಕುವ, ಎಂಟು ನೂರು ಕೋಟಿ ಮನುಷ್ಯರನ್ನು ಹೇಗೆ ಮತ್ತು ಯಾವುದರಲ್ಲಿ ತೊಡಗಿಸುವುದು ಅನ್ನುವ ಪ್ರಶ್ನೆಯೂ ನಮ್ಮ ಮುಂದಿದೆ. ಇದು ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಿಗೆ ಇನ್ನೂ ಸವಾಲಿನದ್ದಾಗಿರಲಿದೆ.

ಪ್ರತಿ ಔದ್ಯಮಿಕ ಕ್ರಾಂತಿಯೂ ಇಂತಹ ಪರ-ವಿರೋಧದ ಚರ್ಚೆಗಳ ಮೂಲಕ ಹಾದುಹೋಗಿದೆ. ಒಳಿತು-ಕೆಡುಕುಗಳ ತೂಗುವಿಕೆಯಲ್ಲಿ ತಕ್ಕಡಿ ಒಳಿತಿನತ್ತ ಹೆಚ್ಚು ವಾಲುವಂತೆ ಈ ಹಿಂದಿನ ಎಲ್ಲ ಕ್ರಾಂತಿಗಳಲ್ಲೂ ಮನುಕುಲದ ಒಟ್ಟಾರೆ ತಿಳಿವಳಿಕೆ ಕೆಲಸ ಮಾಡಿದೆ. ಎರಡನೆಯ ವಿಶ್ವಯುದ್ಧದ ನಂತರ ಜಗತ್ತು ಬಹಳಷ್ಟು ಶಾಂತಿಯುತವಾಗಿದ್ದರೆ ಅದಕ್ಕೆ ಇಂತಹ ತಿಳಿವಳಿಕೆಯೇ ಕಾರಣ. ಹಲವೊಮ್ಮೆ ಅಂತಹ ತಿಳಿವಳಿಕೆ ವಿಶ್ವಯುದ್ಧದಂತಹ ವಿನಾಶದ ನಂತರವೇ ಬಂದಿದೆ. ನಾಲ್ಕನೆಯ ಔದ್ಯಮಿಕ ಕ್ರಾಂತಿ ಇಂತಹ ವಿಪರೀತದ ವಿನಾಶವನ್ನೇನೂ ತರದೆ ಮನುಕುಲದ ಪರ, ಜೀವಪರವಾಗಿರಲಿ ಎಂದು ಆಶಿಸೋಣ.

ಚುರುಮುರಿ

ಕಂಪನಿಯೇ ಕೈಲಾಸ!

• ಸುಮಂಗಲಾ

ಬೆಕ್ಕಣ್ಣ ನಸುಕಿನಲ್ಲಿ ಘನಗಂಭೀರವಾಗಿ ಕೂತು ಲೆಕ್ಕ ಮಾಡುತ್ತಿತ್ತು.

24 – 6 = 18

7 x 18 = 126

'ಗಣಿತದ ಪರೀಕ್ಷೆ ಏತೇನು?' ಎಂದೆ ಅಚ್ಚರಿಯಿಂದ.

'ನೋಡು... ದಿನದ 24 ಗಂಟೆಗಳಲ್ಲಿ ಐದು ಗಂಟೆ ನಿದ್ರೆ; ಊಟ, ತಿಂಡಿ ಸ್ನಾನ ಇತ್ಯಾದಿಗೆ ಒಂದು ಗಂಟೆ. ಒಟ್ಟು ಆರು ಗಂಟೆ ಕಳೆದರೆ ದಿನಕ್ಕೆ 18 ಗಂಟೆ ಕೆಲಸ ಮಾಡಬೌದು. ಅಂದರೆ ಎಲ್ ಆ್ಯಂಡ್ ಟಿ ಕಂಪನಿಯ ಮುಖ್ಯಸ್ಥರು ಹೇಳಿದಂತೆ ವಾರಕ್ಕೆ ಬರೇ 90 ಗಂಟೆಯಲ್ಲ, 126 ಗಂಟೆ ಕೆಲಸ ಮಾಡಬೌದು!' ಎಂದು ಲೆಕ್ಕ ಮುಂದಿಟ್ಟಿತು.

'ಬೆಂಗಳೂರು, ಮುಂಬೈ ಇಂತಾ ಕಡೆ ಆಫೀಸು ತಲುಪೋದಕ್ಕೇ ದಿನಾ 2-3 ಗಂಟೆ ಟೈಮ್ ಬೇಕು. ಅದನ್ನೂ ಲೆಕ್ಕಕ್ಕೆ ಹಿಡೀಬೇಕಲ್ಲ' ಎಂದೆ.

'ನಿದ್ದೆ ಮಾಡಕ್ಕೆ 5 ಗಂಟೆ ಏತಲ್ಲ, ಅದ್ರಾಗೆ ಮನೇಲಿ 2 ಗಂಟೆ ನಿದ್ರೆ ಮಾಡಿ, ಆಫೀಸಿಗೆ ಹೋಗೂ ದಾರಿವಳಗೆ 3 ಗಂಟೆ ನಿದ್ರಿಸಲಿ' ಬೆಕ್ಕಣ್ಣನ ವಿತಂಡವಾದ.

'ಆ ಮುಖ್ಯಸ್ಥರ ಸಂಬಳ ಎಷ್ಟು ಗೊತ್ತೈತೇನು? ಅವರ ಕಂಪನಿ ಉದ್ಯೋಗಿಗಳ ಸರಾಸರಿ 500 ಪಟ್ಟು ಹೆಚ್ಚು, ವರ್ಷಕ್ಕೆ 51 ಕೋಟಿ ರೂಪಾಯಿ'.

'ಅವ್ರು ಭಾನುವಾರನೂ ಭಯಂಕರ ಕಷ್ಟಪಟ್ಟು ದುಡಿತಾರೆ' ಬೆಕ್ಕಣ್ಣನ ಸಮರ್ಥನೆ.

'10 ಕೋಟಿಗೂ ಹೆಚ್ಚು ಯುವಜನ ಅತ್ತಾಗೆ ನೌಕರಿನೂ ಮಾಡಾಕತ್ತಿಲ್ಲ ಅಥವಾ ಓದಾಕೂ ಹತ್ತಿಲ್ಲ, ಅಂದ್ರೆ ಖಾಲಿ ಕುತ್ತಾರಂತ ವರದಿಗಳು ಹೇಳ್ತಾವೆ. ನಿರುದ್ಯೋಗ ದರ ಹೆಚ್ಚಾಗೈತಿ. ಈ ಎಲ್ಲಾ ನಿರುದ್ಯೋಗಿ ಯುವಜನರಿಗೆ ಮೊದಲು ವಾರಕ್ಕೆ 48 ಗಂಟೆ ಕೆಲಸ, ಅದಕ್ಕೆ ತಕ್ಕ ಪಗಾರ ಕೊಡಲಿ' ಎಂದೆ ಸಿಟ್ಟಿನಿಂದ.

'ನಿರುದ್ಯೋಗಿಗಳು ವಾರಕ್ಕೆ 90 ಗಂಟೆ ದುಡಿಯಕ್ಕೆ ತಯಾರಾದ್ರೆ ಎಲ್ ಆ್ಯಂಡ್ ಟಿ ಮುಖ್ಯಸ್ಥರೇ ಅವ್ರೆಲ್ಲರಿಗೂ ಕೆಲಸ ಕೊಡತಾರೆ. ಕಂಪನಿ ಕಾಯಕವೇ ಕೈಲಾಸ!' ಎಂದು ಬೆಕ್ಕಣ್ಣ ಹೆಹ್ಹೆಗುಟ್ಟಿತು.

ಸಂಗತ

ನದಿ ಜೋಡಣೆ: ಅರಿವಿದೆಯೇ ಪರಿಣಾಮ?

ನದಿ ಜೋಡಣೆ ಯೋಜನೆಗಳ ಬಗ್ಗೆ ವ್ಯಾಪಕ ವಿಚಾರ ವಿನಿಮಯ ನಡೆಯಬೇಕಾಗಿದೆ

• ಎಚ್.ಎಸ್.ಮಂಜುನಾಥ

ಮಧ್ಯಪ್ರದೇಶ- ಉತ್ತರಪ್ರದೇಶದಲ್ಲಿ ಹರಿಯುವ ಕೆನ್ ಹಾಗೂ ಬೆಟ್ವಾ ನದಿಗಳನ್ನು ಜೋಡಿಸುವ ಮೆಗಾ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಖಜುರಾಹೊದಲ್ಲಿ ಇತ್ತೀಚೆಗೆ ಉದ್ಘಾಟಿಸಿದ್ದಾರೆ. ಬುಂದೇಲ್‌ಖಂಡ ಪ್ರದೇಶದಲ್ಲಿನ ನೀರಿನ ಕೊರತೆ ನೀಗುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ನದಿ ಜೋಡಣೆಯ ಚಿಂತನೆ ಹೊಸದೇನಲ್ಲ. ದೇಶದ ನದಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಉದ್ದೇಶದ ಗಾರ್ಲ್ಯಾಂಡ್ ಕೆನಾಲ್ ಯೋಜನೆಯನ್ನು ಎಪ್ಪತ್ತರ ದಶಕದಲ್ಲಿಯೇ ಪ್ರಸ್ತಾಪಿಸಲಾಗಿತ್ತು. ಮುಂದಿನ ದಶಕಗಳಲ್ಲೂ ಇಂತಹ ಹಲವು ಬೃಹತ್ ಯೋಜನೆಗಳು ಚರ್ಚೆಗೆ ಬಂದವು.

ಕೆನ್- ಬೆಟ್ವಾ ಯೋಜನೆಯು 1995ರಷ್ಟು ಹಿಂದಿನ ವಿಚಾರ. ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ (ಎನ್‌ಡಬ್ಲ್ಯುಡಿಎ) ಬಳಿ ಒಟ್ಟು 30 ನದಿ ಸಂಪರ್ಕ ಯೋಜನೆಗಳಿವೆ. ಇವುಗಳನ್ನು ಕಾರ್ಯಗತಗೊಳಿಸಲು ಸಾವಿರಾರು ಕೋಟಿ ರೂಪಾಯಿ ಬೇಕಾಗಬಹುದು.

ಬರದ ನಾಡಿಗೆ ವರದಾನ, ಶಾಶ್ವತ ನೀರಾವರಿ ವ್ಯವಸ್ಥೆ ಎನ್ನುವಂತಹ ಮಾತುಗಳನ್ನು ಆಗಾಗ ಕೇಳುತ್ತಿರುತ್ತೇವೆ. ಆದರೆ ವಿಷಯ ಅಷ್ಟು ಸರಳವೂ ಅಲ್ಲ, ಸಲೀಸೂ ಅಲ್ಲ. ಉದಾಹರಣೆಗೆ, ಕರ್ನಾಟಕಕ್ಕೆ ಸಂಬಂಧಿಸಿದ ಕೃಷ್ಣಾ- ಆಲಮಟ್ಟಿ- ಪೆನ್ನಾರ್ ನದಿ ಜೋಡಣೆಯ ಸಾಧ್ಯತಾ ವರದಿ ಸಲ್ಲಿಕೆಯಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಸಂಸದರು ಹಿಂದಿನ ಜುಲೈನಲ್ಲಿ ಕೃಷ್ಣಾ ನದಿ ನೀರಿಗೆ ಬೇಡಿಕೆ ಸಲ್ಲಿಸಿದರು. 'ಅಂತಹ ಪ್ರಸ್ತಾವ ಇಲ್ಲ' ಎಂಬ ಉತ್ತರವು ಕೇಂದ್ರ ಜಲಶಕ್ತಿ ಸಚಿವರಿಂದ ಬಂದಿತು. ಒಂದೇ ರಾಜ್ಯದ ಎರಡು ಪ್ರದೇಶಗಳ ನಡುವೆಯೇ ಇಂತಹ ವಿಷಯಗಳಲ್ಲಿ ಒಮ್ಮತ ಮೂಡುವುದು ಕಷ್ಟ. ಆ ಭಾಗದವರಾದ ರಾಜ್ಯ ಸಂಪುಟ ಸಚಿವರೊಬ್ಬರೇ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು! ಪಕ್ಕದ ಆಂಧ್ರಪ್ರದೇಶದ ಗಡಿಯಲ್ಲಿನ ಹಳ್ಳಿಗಳಿಗೆ ಕೃಷ್ಣಾ ನದಿ ನೀರು ಬಂದಿದೆ ಎಂಬುದು ನಮ್ಮ ಗಡಿಯೊಳಕ್ಕೆ ಆ ನದಿಯ ನೀರು ಬರಲು ಸಹಾಯಕವಾಗುವ ಅಂಶ ಆಗದು!

ಕೆನ್- ಬೆಟ್ವಾ ಯೋಜನೆಯ ಅಂದಾಜು ವೆಚ್ಚ ಈಗ ₹ 44,605 ಕೋಟಿ, ಅವಧಿ ಎಂಟು ವರ್ಷ. ಮುಖ್ಯ ಸಮಸ್ಯೆಯೆಂದರೆ, ಪನ್ನಾ ರಾಷ್ಟ್ರೀಯ ಉದ್ಯಾನದ ಮೀಸಲು ಅರಣ್ಯದ ಶೇ 10ರಷ್ಟು ಭಾಗ ಇದಕ್ಕಾಗಿ ಮುಳುಗಡೆ ಆಗಬೇಕಾಗುತ್ತದೆ. ಎಪ್ಪತ್ತೇಳು ಮೀಟರ್ ಎತ್ತರದ ಅಣೆಕಟ್ಟು, 231 ಕಿ.ಮೀ. ಉದ್ದದ ಕಾಲುವೆ, ವಿದ್ಯುತ್ ಉತ್ಪಾದನೆ (ಹೈಡ್ರೊ, ಸೋಲಾರ್ ಎರಡೂ), ಹದಿಮೂರು ಜಿಲ್ಲೆಗಳಿಗೆ ನೀರಾವರಿ... ಇವೆಲ್ಲಾ ಓದಲು ಚೆನ್ನ. ಆದರೆ ಪ್ರಾದೇಶಿಕ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗೆಗೆ ಮೊದಲಿನಿಂದಲೂ ಆತಂಕ ವ್ಯಕ್ತವಾಗಿದೆ.

ಹುಲಿ ರಕ್ಷಿತಾರಣ್ಯಕ್ಕೆ ಭೇಟಿಯಿತ್ತ ಪ್ರವಾಸಿಗರ ಸಂಖ್ಯೆಯನ್ನು ಉಲ್ಲೇಖಿಸಿ, 'ರಕ್ಷಿತಾರಣ್ಯಕ್ಕೆ ತೊಂದರೆ ಆಗದು' ಎಂದು ಪ್ರಧಾನಿ ಹೇಳಿದ್ದಾರೆ. ಆದರೆ, ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯೇ (ಸಿಇಸಿ) ಯೋಜನೆಯ ಅನುಷ್ಠಾನಕ್ಕೆ ಮುನ್ನ ಎಚ್ಚರಿಕೆ ವಹಿಸಬೇಕೆಂಬ ಅಭಿಪ್ರಾಯ ನೀಡಿದೆ. ಸದ್ಯಕ್ಕೆ ಉತ್ತರಪ್ರದೇಶ, ಮಧ್ಯಪ್ರದೇಶ ಸರ್ಕಾರಗಳ ನಡುವೆ ಸಹಮತ ಮೂಡಿರಬಹುದು. ಆದರೆ ಪರಿಸರ, ವನ್ಯಜೀವಿ ಆಸಕ್ತರು ಉದ್ದೇಶಿತ ಯೋಜನೆಯ ವಿವರಗಳ ಬಗೆಗೆ ಆಕ್ಷೇಪಗಳನ್ನು ಎತ್ತುವ ಸಾಧ್ಯತೆ ಇದೆ.

ನದಿ ಸಂಪರ್ಕ ಯೋಜನೆಗಳ ಕುರಿತು ಕರ್ನಾಟಕವೂ ಸೇರಿದಂತೆ ನಾಲ್ಕು ರಾಜ್ಯಗಳು ಈಚೆಗೆ ಅಸಮ್ಮತಿ ಸೂಚಿಸಿವೆ. ತಮಿಳುನಾಡಿನ ನಿಲುವು ಬೇರೆ ಇದೆ. ಒಟ್ಟಾರೆ, ನದಿ ಜೋಡಣೆಯು ವಿದ್ಯುತ್ ಅಥವಾ ಆಹಾರಧಾನ್ಯ ಹಂಚಿಕೆಗಿಂತಲೂ ಕಠಿಣವಾದ ಸವಾಲು.

ಬರ ಪರಿಹಾರ, ಪ್ರವಾಹ ನಿಯಂತ್ರಣ, ಉತ್ತಮ ನೀರಾವರಿ ಸೌಲಭ್ಯ ಹೊಂದಬಹುದು ಎಂಬುವು ನದಿ ಜೋಡಣೆ ಯೋಜನೆಗಳ ಬಗೆಗಿನ ಸಾಮಾನ್ಯ ನಿರೀಕ್ಷೆಗಳು. ಬುಂದೇಲ್‌ಖಂಡ ಪ್ರದೇಶವು ಉತ್ತರಪ್ರದೇಶದ ಏಳು ಹಾಗೂ ಮಧ್ಯಪ್ರದೇಶದ ಆರು ಜಿಲ್ಲೆಗಳನ್ನು ಒಳಗೊಂಡಿದೆ. ಮಧ್ಯಪ್ರದೇಶದ ಭಾಗದಲ್ಲಿ ಹಲವು ನೈಸರ್ಗಿಕ ಸಂಪನ್ಮೂಲಗಳು ಇದ್ದರೂ (ಉದಾಹರಣೆಗೆ, ಪನ್ನಾ ವಜ್ರಗಳಿಗೆ ಪ್ರಸಿದ್ಧ), ನೀರಿನ ಕೊರತೆ ಇದೆ. ತೊರೆಗಳಿಂದ ನೀರಾವರಿ ಆಗದು. ವರ್ಷದಲ್ಲಿ ಸರಾಸರಿ 52 ಮಳೆದಿನಗಳಿದ್ದರೂ ಹಲವು ವರ್ಷ ಇದಕ್ಕಿಂತ ಕಡಿಮೆ ಮಳೆ ಆಗುವುದು ಸಾಮಾನ್ಯ. ಬೆಟ್ಟಗುಡ್ಡಗಳು ಬೋಳಾಗಿವೆ, ಸಸ್ಯವರ್ಗ ಕಡಿಮೆ, ಮಣ್ಣು ಅಷ್ಟು ಫಲವತ್ತಾಗಿಲ್ಲ, ಬೆಳೆ ಇಳುವರಿ ಕಡಿಮೆ. ಆದರೆ ಬೇರೆ ಜಲಾನಯನ ಪ್ರದೇಶದಿಂದ ನೀರು ತರುವುದು ಸ್ಥಾನಿಕ ಪರಿಸರದ ಸಮತೋಲನವನ್ನು ಕದಡಬಹುದು.

ನದಿ ಜೋಡಣೆ ಯೋಜನೆಗೆ ರಾಜಕೀಯ ಸಹಮತ ಇದೆ, ಕೇಂದ್ರ ಸರ್ಕಾರ ಎರಡೂ ರಾಜ್ಯಗಳ ಜತೆ ಸಮನ್ವಯ ಸಾಧಿಸಿದೆ, ನಿಜ. ಆದರೆ ಯೋಜನೆಯ ದೂರಗಾಮಿ ಪರಿಣಾಮಗಳ ಬಗೆಗೆ ಎಚ್ಚರ ವಹಿಸಬೇಕಾಗುತ್ತದೆ.

ಅಣೆಕಟ್ಟು ಸುರಕ್ಷತಾ ಕಾಯ್ದೆ- 2021 ಜಾರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಈವರೆಗೆ ರಾಷ್ಟ್ರೀಯ ಸಮಿತಿಯನ್ನು ಕೂಡ ರಚಿಸದೇ ಇರುವುದರ ಬಗ್ಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಪೋಲವರಂ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿದ್ದರೂ ಅದರ ಪ್ರಗತಿ ಕಾರ್ಯ ನಿರೀಕ್ಷಿತ ಮಟ್ಟದಲ್ಲಿ ಇಲ್ಲ.

ನದಿಯೊಂದು ಎಷ್ಟೇ ಬೃಹತ್ ಆಗಿರಲಿ, ಎಷ್ಟೇ ಉದ್ದವಿದ್ದು ವಿವಿಧ ರಾಜ್ಯಗಳ ಮೂಲಕ ಹರಿಯಲಿ ಅದನ್ನು ರಾಷ್ಟ್ರೀಕರಿಸಲಾಗದು. ಅಂತರರಾಜ್ಯ ನದಿ ವಿವಾದಗಳಲ್ಲಿ ಕೇಂದ್ರ ಏನೂ ಮಾಡಲಾಗದು. ಉದಾಹರಣೆಗೆ, ಮುಲ್ಲಪೆರಿಯಾರ್ ಅಣೆಕಟ್ಟು ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹಲವು ವರ್ಷಗಳಿಂದ ವಿಚಾರಣೆ ನಡೆಸುತ್ತಲೇ ಇದೆ. ಈ ಸನ್ನಿವೇಶದಲ್ಲಿ ನದಿ ಜೋಡಣೆಯ ಎಲ್ಲ ಯೋಜನೆಗಳ ಬಗೆಗೆ ವ್ಯಾಪಕ ವಿಚಾರ ವಿನಿಮಯ, ಚರ್ಚೆ ನಡೆಸಬೇಕಾದುದು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಬೇಕಾದುದು ಇಂದಿನ ಅಗತ್ಯ.

ವಾಚಕರ ವಾಣಿ

ಸಾರ್ವಜನಿಕ ಸಾರಿಗೆ: ದೂರದೃಷ್ಟಿ ಇಲ್ಲವಾಯಿತೇಕೆ?

ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಸರ್ಕಾರ ಅಂತೂ ಯಶಸ್ವಿಯಾಗಿ ಏರಿಸಿತು. ಮೊದಲೆರಡು ದಿನ ಅದಕ್ಕೆ ವಿರೋಧ ವ್ಯಕ್ತವಾಯಿತಾದರೂ ನಂತರ ಎಲ್ಲರೂ ಎಂದಿನಂತೆ ಹೊಸ ದರಕ್ಕೆ ಹೊಂದಿಕೊಂಡರು. ಸರ್ಕಾರಕ್ಕೂ ನೆಮ್ಮದಿಯಾಯಿತು. ಆದರೆ, ಖಾಸಗಿ ವಾಹನ ಮತ್ತು ಸಾರ್ವಜನಿಕ ವಾಹನ ಸಂಚಾರಗಳ ನಡುವಿನ ಖರ್ಚನ್ನು ಜನ ತಾಳೆ ಹಾಕಿ ನೋಡುತ್ತಾರೆ. ಖಾಸಗಿ ವಾಹನಗಳ ಬಳಕೆಯೇ ಉತ್ತಮವೆಂದು ಕಾಣುವುದರಿಂದ ಅವುಗಳನ್ನೇ ಅವಲಂಬಿಸುವ ರೂಢಿ ಹೆಚ್ಚಾಗುತ್ತದೆ. ಇದರಿಂದ ರಸ್ತೆಗಳಲ್ಲಿ ವಾಹನ ದಟ್ಟಣೆ ಇನ್ನಷ್ಟು ಹೆಚ್ಚಾಗುತ್ತದೆ. ಪರಿಸರ ಮಾಲಿನ್ಯ, ವಾಹನ ದಟ್ಟಣೆ, ಶಬ್ದಮಾಲಿನ್ಯ ತಡೆಗಟ್ಟಲು ಕಡಿಮೆ ಖರ್ಚಿನ, ಸುಗಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಅತ್ಯವಶ್ಯ. ಈ ದಿಸೆಯಲ್ಲಿ ಗಮನಹರಿಸಬೇಕಾದುದು ದೂರದೃಷ್ಟಿಯುಳ್ಳ, ಜನಪರ ಕಾಳಜಿಯ ಸರ್ಕಾರದ ಜವಾಬ್ದಾರಿ.

ಅಶೋಕ ಎನ್.ಎಚ್., ಕೋಲಾರ

ಸಾರ್ವಜನಿಕ ಹಿತ ಮುಖ್ಯವಾಗಲಿ

ಸಂಕ್ರಾಂತಿಯ ನಂತರ ಸಾಲು ಸಾಲು ಜಾತ್ರೆ, ರಥೋತ್ಸವ ಹಾಗೂ ಹಬ್ಬಗಳು ಬರುತ್ತವೆ. ಈಗೀಗ ಸಂಘಟಕರಿಗೆ ಜನರನ್ನು ಸೇರಿಸುವುದು ಒಂದು ಪ್ರತಿಷ್ಠೆಯ ಸಂಗತಿಯೇ ಆಗಿದೆ. ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಮೂಲ ಸೌಲಭ್ಯಗಳನ್ನು ಒದಗಿಸಲು ಸಂಘಟಕರು ಆದ್ಯತೆ ನೀಡಬೇಕು. ಬಂದವರು ಸಹ ಯಾರಿಗೂ ತೊಂದರೆ ಕೊಡದ ರೀತಿಯಲ್ಲಿ ನಡೆದುಕೊಳ್ಳಬೇಕು. ಸಾವಿರಾರು ಜನ ಸೇರುವ ಸಂದರ್ಭದಲ್ಲಿ ಸಾರ್ವಜನಿಕರು ಪಾಲಿಸಬೇಕಾದ ಹೊಣೆಗಾರಿಕೆಯ ಬಗ್ಗೆ ಅರಿವು ಮೂಡಿಸಬೇಕಾದ ಜರೂರು ಇದೆ.

ಶಿಸ್ತು, ಸಂಯಮ, ಸ್ವಚ್ಛತೆಯ ಬಗ್ಗೆ ಜನಸಾಮಾನ್ಯರು ಕಾಳಜಿ ವಹಿಸಿ ಸಹಕರಿಸುವುದು ಉತ್ತಮ. ಅಂಗಡಿ ಮುಂಗಟ್ಟುಗಳನ್ನು ತೆಗೆಯುವವರು ಸಹ ನೈರ್ಮಲ್ಯ ಕಾಯ್ದುಕೊಳ್ಳಬೇಕು. ಅದರಲ್ಲಿಯೂ ಹೋಟೆಲ್ ನಡೆಸುವವರು ಒಳ್ಳೆಯ ಆಹಾರ, ನೀರು ಒದಗಿಸಿ ಸಾರ್ವಜನಿಕರ ಹಿತ ಕಾಯಬೇಕಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಒತ್ತಡದ ಬದುಕಿನಿಂದ ಅನಪೇಕ್ಷಿತ ಪರಿಣಾಮ

'ವಾರದಲ್ಲಿ 90 ಗಂಟೆ ಕೆಲಸ ಮಾಡಿ. ಮನೆಯಲ್ಲಿ ಹೆಂಡತಿ ಮುಖವನ್ನು ಎಷ್ಟು ಹೊತ್ತು ನೋಡಿಕೊಂಡು ಇರುತ್ತೀರಿ, ಶ್ರಮವಹಿಸಿ ದುಡಿಯಲು ಭಾನುವಾರದ ರಜೆಯನ್ನೂ ತ್ಯಜಿಸಿ' ಎಂದು ಎಲ್ ಆ್ಯಂಡ್ ಟಿ ಕಂಪನಿಯ ಮುಖ್ಯಸ್ಥ ಎಸ್.ಎನ್.ಸುಬ್ರಹ್ಮಣ್ಯನ್ ಅವರು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಈ ಸುದ್ದಿಯನ್ನು ಓದಿದಾಗ, ನಾನು ಹಿಂದೆ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನಡೆದ ಪ್ರಕರಣವೊಂದು ನೆನಪಿಗೆ ಬಂದಿತು. ಆಗ ಬೆಳಿಗ್ಗೆ 10.30ಕ್ಕೆ ಬ್ಯಾಂಕ್ ಬಾಗಿಲು ತೆರೆಯಲಾಗುತ್ತಿತ್ತು. ಆಗ ನನ್ನದು ಪ್ರೊಬೇಷನರಿ ಅವಧಿಯಾಗಿದ್ದುದರಿಂದ, ಕೆಲಸವನ್ನು ಕಲಿಯುವ ಸಲುವಾಗಿ ನಿಗದಿತ ಸಮಯಕ್ಕಿಂತ ಮೊದಲೇ ಬ್ಯಾಂಕಿಗೆ ಹೋಗುತ್ತಿದ್ದೆ. ಒಂದು ದಿನ ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರು ದಿಢೀರ್ ಎಂದು ಬೆಳಿಗ್ಗೆಯೇ ಬ್ಯಾಂಕಿಗೆ ಭೇಟಿ ನೀಡಿದರು. ಆಗ ಮೇಲಧಿಕಾರಿ ನನ್ನನ್ನು ಹಿಂಬಾಗಿಲಿನಿಂದ ಹೊರಗೆ ಕಳಿಸಿದ್ದರು. ಅವರು ಯಾಕೆ ಹಾಗೆ ಕಳಿಸಿದರೆಂಬುದು ನಂತರ ನನಗೆ ತಿಳಿಯಿತು. ಬ್ಯಾಂಕಿನ ಅಧಿಕಾರಿಗಳು ನೌಕರರ ಮೇಲೆ ಕೆಲಸದ ಒತ್ತಡ ಹೇರುತ್ತಿದ್ದಾರೆ ಎಂಬ ದೂರುಗಳು ಕೇಳಿಬಂದಿದ್ದವು. ಅದರ ಪರಿಶೀಲನೆಗಾಗಿ ಆ ಅಧಿಕಾರಿ ಹಾಗೆ ದಿಢೀರ್ ಭೇಟಿ ನೀಡಿದ್ದರು.

ನೌಕರರೇನು ಮೇಲಧಿಕಾರಿಗಳ ಕೈಗೊಂಬೆಗಳೇ? ತನ್ನ ಕುಟುಂಬಕ್ಕೆ ಸಮಯ ನೀಡುವುದು ಪ್ರತಿ ನೌಕರನ ಕರ್ತವ್ಯ. ಸದಾ ನೌಕರಿ, ನೌಕರಿ ಎನ್ನುತ್ತಾ ಕುಟುಂಬಕ್ಕೆ ಸಮಯ ನೀಡದಿದ್ದರೆ ಮನೆಯಲ್ಲಿ ಮಕ್ಕಳು ದಾರಿತಪ್ಪುವ ಸಾಧ್ಯತೆ ಇರುತ್ತದೆ. ನಾವು ನೌಕರಿ ಮಾಡುವುದು ನಮ್ಮ ಹಾಗೂ ಕುಟುಂಬದವರ ಒಳಿತಿಗಾಗಿಯೇ ವಿನಾ ಸದಾಕಾಲ ಒತ್ತಡದಿಂದ ಬದುಕುವುದಕ್ಕಲ್ಲ. ವೃತ್ತಿಬದುಕಿನ ಒತ್ತಡದ ಕಾರಣಕ್ಕೆ ನೌಕರರು ಖಿನ್ನತೆಗೆ ಒಳಗಾಗುವುದು, ಆತ್ಮಹತ್ಯೆಗೆ ಮುಂದಾಗುವಂತಹ ಪ್ರಕರಣಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಮೂಲಕ ಅಧಿಕ ಕೆಲಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಅದುಬಿಟ್ಟು, ಇರುವ ನೌಕರರ ಮೇಲೆ ಅತಿಯಾದ ಒತ್ತಡ ಹೇರಿ ಕೆಲಸ ಮಾಡಿಸುವ ಪರಿಪಾಟ ಒಳ್ಳೆಯದಲ್ಲ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ಜಾರ್ವಾ ಸಮುದಾಯ: ಶೋಷಣೆ ತಪ್ಪಲಿ

ಕೇಂದ್ರ ಚುನಾವಣಾ ಆಯೋಗವು ಇತ್ತೀಚೆಗೆ ಅಂಡಮಾನ್ ದ್ವೀಪಗಳ ಜಾರ್ವಾ ಬುಡಕಟ್ಟಿನ ಕೆಲವರಿಗೆ ಮೊದಲ ಬಾರಿಗೆ ಚುನಾವಣಾ ಗುರುತಿನಚೀಟಿ ವಿತರಿಸಿದ ಸುದ್ದಿ ಓದಿ ಭಾವನೆ ಉಕ್ಕಿಬಂದಿತು. ತೊಂಬತ್ತರ ದಶಕದಲ್ಲಿ ಚೆನ್ನೈನ ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ನನಗೆ, ಅಂಡಮಾನ್ ದ್ವೀಪಗಳ ಬುಡಕಟ್ಟು ಜನಾಂಗಗಳ ಬಹುಶಿಸ್ತೀಯ ಜನಾಂಗೀಯ ಅಧ್ಯಯನಗಳಲ್ಲಿ ಭಾಗವಹಿಸುವ ಅವಕಾಶ ದೊರಕಿತ್ತು. ಆಗಷ್ಟೇ ಹೈದರಾಬಾದಿನ 'ಜೀವಕೋಶ ಹಾಗೂ ಅಣುಜೀವಶಾಸ್ತ್ರ ಸಂಶೋಧನಾ ಕೇಂದ್ರ'ದ (ಸಿಸಿಎಂಬಿ) ವಿಜ್ಞಾನಿಗಳು ಜಾರ್ವಾ ಜನಾಂಗದ ತಳಿಶಾಸ್ತ್ರ ಅಧ್ಯಯನ ನಡೆಸಿ, ಅವರ ವಂಶವಾಹಿ ವೈವಿಧ್ಯದ ಮಹತ್ವದ ಕುರಿತು ಗಮನಸೆಳೆದಿದ್ದರು. ಅವರಲ್ಲಿರುವ ರೋಗನಿರೋಧಕ ವಂಶವಾಹಿಗಳು, ಮಾನವ ವಿಕಾಸದಲ್ಲಿ ಅವರು ಇಟ್ಟ ಹೆಜ್ಜೆಗಳು, ಔಷಧೀಯ ಗಿಡಮೂಲಿಕೆಗಳೂ ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳ ಕುರಿತ ಅವರ ಅನನ್ಯ ಜ್ಞಾನ ಎಲ್ಲವೂ ವಿಶಿಷ್ಟವಾಗಿದ್ದವು. ಅವನ್ನು ಆಧರಿಸಿ, ಅವರ ಸ್ವಾತಂತ್ರ್ಯ ಮತ್ತು ಸಂಸ್ಕೃತಿಗೆ ಧಕ್ಕೆ ಬಾರದ ರೀತಿಯಲ್ಲಿ ಅವರ ಶ್ರೇಯೋಭಿವೃದ್ಧಿಯನ್ನು ಸಾಧಿಸುವ ಮಾರ್ಗಗಳ ಕುರಿತು ಚಿಂತನೆಗಳೂ ಸಾಗಿದ್ದವು.

ಆದರೆ, ಜಾಗತೀಕರಣದ ಫಲ ಎಂಬಂತೆ, ಹಿಂದಿನ ಮೂರು ದಶಕಗಳಲ್ಲಿ ಈ ದ್ವೀಪಸಮೂಹಕ್ಕೆ ಕಾಲಿಟ್ಟ ಮಿತಿಮೀರಿದ ಪ್ರವಾಸೋದ್ಯಮದಿಂದಾಗಿ, ಜಾರ್ವಾ ಸಮುದಾಯ ಅತೀವ ಶೋಷಣೆಗೆ ಒಳಗಾಗುತ್ತಿದೆ. ಅವರ ಆರೋಗ್ಯ ಸುರಕ್ಷತೆ, ಕುಟುಂಬ ವ್ಯವಸ್ಥೆ, ಸಾಮಾಜಿಕ ಭದ್ರತೆ ಎಲ್ಲವೂ ಅಪಾಯಕ್ಕೆ ಸಿಲುಕಿ, ಅವರ ಜನಸಂಖ್ಯೆ ಗಂಭೀರವಾಗಿ ಕುಸಿಯುತ್ತಿದೆ. ಆದಿವಾಸಿಗಳ ಬದುಕನ್ನು ಪುರಸ್ಕರಿಸುವ ಕನಿಷ್ಠ ಮಟ್ಟದ ಸೂಕ್ಷ್ಮ ಮನೋಭಾವವನ್ನು ಉಳಿಸಿಕೊಳ್ಳುವಲ್ಲೂ ಆಧುನಿಕ ಸಮಾಜ ವಿಫಲವಾಗುತ್ತಿದೆ. ಈಗ ಅವರಿಗೆ ಮತದಾನದ ಹಕ್ಕೇನೋ ಸಿಕ್ಕಿರಬಹುದು, ನೈಜ ಭವಿಷ್ಯ ದೊರಕೀತೇ?

ಕೇಶವ ಎಚ್. ಕೊರ್ಸೆ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾಕುಂಭ ಮೇಳ ಜಗತ್ತಿನ ದೊಡ್ಡ ಉತ್ಸವ

ಉತ್ತರ ಪ್ರದೇಶದಲ್ಲಿ ಮಹಾಕುಂಭ ಮೇಳ ಇಂದಿನಿಂದ ನಡೆಯಲಿದೆ. 12 ವರ್ಷಗಳಿಗೊಮ್ಮೆ ಬರುವ ಈ ಮೇಳಕ್ಕೆ ಪೌರಾಣಿಕ ಮತ್ತು ಸಾಂಸ್ಕೃತಿಕ ಮಹತ್ವ ಇದೆ. ಹಾಗಾಗಿ, ಇದನ್ನು ಭಾರತದ ಪರಂಪರೆಯನ್ನು ಜಗತ್ತಿಗೆ ಪರಿಚಯಿಸುವ ಪ್ರವಾಸೋದ್ಯಮದ ಚಟುವಟಿಕೆಯನ್ನಾಗಿಯೂ ರೂಪಿಸಬೇಕೆಂದು ರಾಜ್ಯ ಸರ್ಕಾರ ಹಲವು ವ್ಯವಸ್ಥೆ ಮಾಡಿಕೊಂಡಿದೆ. ಈ ಬಾರಿಯ ಮೇಳದಲ್ಲಿ ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನವನ್ನೂ ಬಳಸಿಕೊಂಡಿರುವುದು ವಿಶೇಷ

ಜಗತ್ತಿನ ಅತಿ ದೊಡ್ಡ ಕಾರ್ಯಕ್ರಮವಾದ ಮಹಾಕುಂಭ ಮೇಳ ಪ್ರಯಾಗ್‌ರಾಜ್‌ನಲ್ಲಿ (ಹಿಂದಿನ ಅಲಹಾಬಾದ್) ಇಂದು ವಿಧ್ಯುಕ್ತವಾಗಿ ಆರಂಭವಾಗಲಿದೆ. 45 ದಿನಗಳ ಧಾರ್ಮಿಕ ಕಾರ್ಯಕ್ರಮಕ್ಕಾಗಿ ಕೋಟ್ಯಂತರ ಮಂದಿ ಇಲ್ಲಿ ಸೇರಿದ್ದಾರೆ. ಇದು ಗಂಗಾ, ಯಮುನಾ ನದಿಗಳ ಸಂಗಮ ಸ್ಥಳ. ಗುಪ್ತಗಾಮಿನಿಯಾದ ಸರಸ್ವತಿ ನದಿಯೂ ಇಲ್ಲಿ ಸಂಗಮಿಸುತ್ತಾಳೆ ಎಂಬ ನಂಬಿಕೆ ಇದೆ. ಪುಷ್ಯ ಪೂರ್ಣಿಮೆಯ ಪವಿತ್ರ ದಿನದಂದು ಶಾಹೀ (ಪವಿತ್ರ) ಸ್ನಾನ ಮಾಡುವುದು ಭಕ್ತಾದಿಗಳ ಬಯಕೆ.

2019ರಲ್ಲಿ ಕುಂಭ ಮೇಳ ನಡೆದಿತ್ತು. ಈ ಬಾರಿ ನಡೆಯುತ್ತಿರುವುದು 12 ವರ್ಷಕ್ಕೊಮ್ಮೆ ನಡೆಯುವ ಮಹಾಕುಂಭ ಮೇಳ. ಹಿಂದಿನ ಬಾರಿ ಕುಂಭ ಮೇಳದಲ್ಲಿ 24 ಕೋಟಿ ಮಂದಿ ಭಾಗವಹಿಸಿದ್ದರು. ಈ ಬಾರಿ ಮಹಾಕುಂಭ ಮೇಳದಲ್ಲಿ 45 ಕೋಟಿ ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಅದಕ್ಕೆ ತಕ್ಕಂತೆ ಉತ್ತರ ಪ್ರದೇಶ ಸರ್ಕಾರವು ಸಿದ್ಧತೆಗಳನ್ನು ಮಾಡಿಕೊಂಡಿದೆ. ಕಳೆದ ಬಾರಿ 7900 ಎಕರೆ ಜಾಗದಲ್ಲಿ ಕುಂಭ ಮೇಳ ಆಯೋಜಿಸಲಾಗಿತ್ತು. ಈ ಬಾರಿ ಶೇ 25ರಷ್ಟು ಹೆಚ್ಚು ಸ್ಥಳವನ್ನು ಮಹಾಕುಂಭ ಮೇಳಕ್ಕಾಗಿ ಬಳಸಿಕೊಳ್ಳಲಾಗಿದೆ. ಕಳೆದ ಬಾರಿ ₹3,500 ಕೋಟಿ ವೆಚ್ಚದಲ್ಲಿ ಕುಂಭಮೇಳ ನಡೆದಿತ್ತು; ಈ ಬಾರಿ ಮಹಾಕುಂಭ ಮೇಳದ ವೆಚ್ಚ ಅದರ ಎರಡರಷ್ಟಿದೆ. 2019ರಲ್ಲಿ ಘಾಟ್‌ಗಳ ಉದ್ದ 8 ಕಿ.ಮೀ.ಇತ್ತು. ಈ ಬಾರಿ ಅದನ್ನು 12 ಕಿ.ಮೀ.ಗೆ ಹೆಚ್ಚಿಸಲಾಗಿದೆ. ರೈಲು, ಹೆದ್ದಾರಿ ಪ್ರಯಾಣದ ವ್ಯವಸ್ಥೆಯಲ್ಲೂ ಇದೇ ರೀತಿಯ ಹೆಚ್ಚಳವಾಗಿದೆ.

ಮಹಾಕುಂಭ ಮೇಳಕ್ಕಾಗಿ ಮಹಾಕುಂಭ ನಗರ ಎನ್ನುವ ತಾತ್ಕಾಲಿಕ ನಗರವನ್ನೇ ಸೃಷ್ಟಿಸಲಾಗಿದ್ದು, ಈ ಪ್ರದೇಶವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಗಿದೆ. ಪ್ರತಿ ದಿನ ಇಲ್ಲಿ 50 ಲಕ್ಷದಿಂದ 1 ಕೋಟಿ ಭಕ್ತರಿಗೆ ತಂಗುವ ವ್ಯವಸ್ಥೆ ಮಾಡಲಾಗಿದೆ.

ಮೇಳದಲ್ಲಿ ಧಾರ್ಮಿಕ ಕಾರ್ಯಕ್ರಮದ ಜತೆಗೆ ಪ್ರವಾಸೋದ್ಯಮಕ್ಕೂ ಆದ್ಯತೆ ನೀಡಲಾಗಿದೆ. ಜಗತ್ತಿನ ವಿವಿಧೆಡೆಯಿಂದ ಬರುತ್ತಿರುವ ಜನರಿಗಾಗಿ ರೈಲು, ಬಸ್ ಹಾಗೂ ವಿಮಾನ ಸಂಚಾರದ ವ್ಯವಸ್ಥೆಗಳನ್ನು ಮಾಡಲಾಗಿದೆ. ಭಾರತದ ವಿವಿಧ ನಗರಗಳಿಂದ ಪ್ರಯಾಗ್‌ರಾಜ್‌ಗೆ ವಿಮಾನ ಸೌಕರ್ಯ ಕಲ್ಪಿಸಲಾಗಿದೆ. ವಿದೇಶದಿಂದ ಬರುವ ಪ್ರವಾಸಿಗರು, ವಿದ್ವಾಂಸರು, ಸಂಶೋಧಕರು ಮುಂತಾದವರಿಗಾಗಿ 5,000 ಚದರ ಅಡಿ ಜಾಗದಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಪ್ರವಾಸಿಗರು ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿರಿಮೆಯನ್ನು ಹಾಗೂ ಕುಂಭಮೇಳದ ಹಿನ್ನೆಲೆಯನ್ನು ತಿಳಿಯಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಭಾರತದಲ್ಲಿ ಅವರ ನೆಚ್ಚಿನ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲೂ ಅವಕಾಶ ಕಲ್ಪಿಸಲಾಗಿದೆ. ಪ್ರವಾಸಿಗರ ಅನುಕೂಲಕ್ಕಾಗಿ ಟೋಲ್ ಫ್ರೀ ನಂಬರ್ ಅನ್ನು ಸಜ್ಜುಗೊಳಿಸಲಾಗಿದೆ. ಅದು 10 ವಿದೇಶಿ ಭಾಷೆಗಳು ಮತ್ತು ಕನ್ನಡ ಸೇರಿದಂತೆ ಹಲವು ಭಾರತೀಯ ಭಾಷೆಗಳಲ್ಲಿ ಮಾಹಿತಿ ನೀಡಲಿದೆ.

ಮೇಳ ಆರಂಭಕ್ಕೂ ಎರಡು ದಿನ ಮುಂಚೆ– ಶನಿವಾರ– 25 ಲಕ್ಷ ಮಂದಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಭಾನುವಾರವೂ ಪುರುಷರು, ಮಹಿಳೆಯರು ಮಕ್ಕಳೆನ್ನದೇ ಭಾರಿ ಸಂಖ್ಯೆಯಲ್ಲಿ ಭಕ್ತರು ಶಾಹೀ ಸ್ನಾನ ಮಾಡಿದ್ದಾರೆ.

ಪಾವಿತ್ರ್ಯ, ಧಾರ್ಮಿಕತೆಯ ಜತೆಗೆ ಈ ಬಾರಿ ಕುಂಭ ಮೇಳದಲ್ಲಿ ಆಧುನಿಕತೆಯೂ ಮೇಳೈಸಿದೆ. ನೈರ್ಮಲ್ಯ, ರಕ್ಷಣೆ ಮತ್ತು ಆಧುನಿಕತೆ ಬೆರೆತ ಕಾರ್ಯಕ್ರಮ ಇದು ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿಕೊಂಡಿದೆ. ಕಾರ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆಯನ್ನು (ಎಐ) ವ್ಯಾಪಕವಾಗಿ ಬಳಸಲಾಗಿದೆ. ಭಕ್ತರ ಅನುಕೂಲಕ್ಕಾಗಿ ಡಿಜಿಟಲ್ ಪ್ರವಾಸಿ ನಕ್ಷೆಗಳನ್ನು ರೂಪಿಸಲಾಗಿದೆ. ಎಐ ಮೂಲಕ ಶೌಚಾಲಯಗಳ ನೈರ್ಮಲ್ಯವನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ. ಜತೆಗೆ, ಎಐ ಪ್ರೇರಿತ ಸ್ಮಾರ್ಟ್‌ಫೋನ್‌ಗಳ ಮೂಲಕ ರಕ್ಷಣಾ ವ್ಯವಸ್ಥೆಯನ್ನು ಸಜ್ಜುಗೊಳಿಸಲಾಗಿದೆ.

ಈ ಮೇಳವು ಭಾರತದ ಪ್ರಾಚೀನ ಧಾರ್ಮಿಕ ಪರಂಪರೆಯನ್ನು ಜಗತ್ತಿಗೆ ಸಾರಲಿದೆ. ಇದು ಕೇವಲ ಒಂದು ಧಾರ್ಮಿಕ ಕಾರ್ಯಕ್ರಮವಲ್ಲ; ಬದಲಿಗೆ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಏಕತೆಯ ಸಂಕೇತ ಎಂದು ಉತ್ತರ ಪ್ರದೇಶ ಸರ್ಕಾರ ಪ್ರತಿಪಾದಿಸಿದೆ.

10,000 ಎಕರೆ ಮಹಾಕುಂಭ ಮೇಳ ನಡೆಯಲಿರುವ ಪ್ರದೇಶದ ವಿಸ್ತೀರ್ಣ

4,500 ಎಕರೆ ವಾಹನ ನಿಲುಗಡೆಗೆ ಗುರುತಿಸಲಾಗಿರುವ ಪ್ರದೇಶದ ವಿಸ್ತೀರ್ಣ

55 ಮೇಳ ನಡೆಯುವ ಸ್ಥಳದಲ್ಲಿ ಸ್ಥಾಪಿಸಿರುವ ಪೊಲೀಸ್ ಠಾಣೆಗಳು

45,000 ಭದ್ರತೆಗೆ ನಿಯೋಜಿಸಿರುವ ಪೊಲೀಸ್ ಸಿಬ್ಬಂದಿ

3,000 ಭದ್ರತೆಗಾಗಿ ಅಳವಡಿಸಿರುವ ಕ್ಯಾಮೆರಾಗಳು

30 ಸಂಗಮ ಪ್ರದೇಶ ಮತ್ತು ಸುತ್ತಮುತ್ತ ನಿರ್ಮಿಸಿರುವ ತಾತ್ಕಾಲಿಕ ಸೇತುವೆಗಳು

67 ಸಾವಿರ ಕುಂಭಮೇಳಕ್ಕಾಗಿ ಅಳವಡಿಸಿರುವ ಬೀದಿ ದೀಪಗಳು

1.50 ಲಕ್ಷ ಮೇಳ ನಡೆಯುವ ಪ್ರದೇಶದಲ್ಲಿ ನಿರ್ಮಿಸಿರುವ ಶೌಚಾಲಯಗಳು



ಸಂಗಮದತ್ತ ಸಾಗುತ್ತಿರುವ ಸಾಧುಗಳು

12 ವರ್ಷಕ್ಕೆ ಒಂದು ಬಾರಿ

ಮಹಾಕುಂಭ ಮೇಳವು ಪ್ರತಿ 12 ವರ್ಷಗಳಿಗೊಮ್ಮೆ ನಡೆಯುತ್ತದೆ. ಕಳೆದ ಬಾರಿ 2013ರಲ್ಲಿ ಪ್ರಯಾಗ್‌ರಾಜ್‌ನಲ್ಲಿಯೇ ಮಹಾಕುಂಭ ಮೇಳ ನಡೆದಿತ್ತು. ಪ್ರಯಾಗ್‌ರಾಜ್ ಸೇರಿದಂತೆ ದೇಶದ ಪ್ರಮುಖ ನಾಲ್ಕು ಧಾರ್ಮಿಕ ಸ್ಥಳಗಳಲ್ಲಿ ಮೂರು ವರ್ಷಗಳಿಗೊಮ್ಮೆ ಸರದಿಯಲ್ಲಿ ಕುಂಭಮೇಳ ನಡೆಯುತ್ತದೆ.

ಉತ್ತರಾಖಂಡದ ಹರಿದ್ವಾರದ ಗಂಗಾ ನದಿ ತೀರದಲ್ಲಿ, ಮಧ್ಯಪ್ರದೇಶದ ಉಜ್ಜಯಿನಿಯ ಶಿಪ್ರಾ ನದಿ ತೀರದಲ್ಲಿ, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಗೋದಾವರಿ ನದಿ ತೀರದಲ್ಲಿ ಮತ್ತು ಉತ್ತರಪ್ರದೇಶದ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ (ಯಮುನೆ, ಗಂಗಾ ಮತ್ತು ಗುಪ್ತಗಾಮಿನಿಯಾಗಿ ಹರಿಯುವ ಸರಸ್ವತಿ ನದಿಗಳು ಕೂಡುವ ಪ್ರದೇಶ) ಕುಂಭ ಮೇಳ ನಡೆಯುತ್ತದೆ.

ಈ ನಾಲ್ಕು ಪ್ರದೇಶಗಳಲ್ಲೇ ಯಾಕೆ ಕುಂಭಮೇಳ ನಡೆಯುತ್ತದೆ ಎನ್ನುವುದಕ್ಕೆ ಪುರಾಣದ ಕಥೆಯೊಂದಿದೆ. ಸಮುದ್ರ ಮಥನದ ವೇಳೆ ಬಂದ ಅಮೃತ ಕಲಶವನ್ನು ವಿಷ್ಣುವು ಮೋಹಿನಿಯ ರೂಪದಲ್ಲಿ ಹೊತ್ತುಕೊಂಡು ಹೋಗುವಾಗ ಸಂಭವಿಸಿದ ಘರ್ಷಣೆಯಲ್ಲಿ ಅಮೃತದ ನಾಲ್ಕು ಹನಿಗಳು ಪ್ರಯಾಗ, ಹರಿದ್ವಾರ, ನಾಸಿಕ್ ಮತ್ತು ಉಜ್ಜಯಿನಿಗಳಲ್ಲಿರುವ ತೀರ್ಥದಲ್ಲಿ ಬಿದ್ದವು. ಈ ನಾಲ್ಕು ತೀರ್ಥಗಳು ಪವಿತ್ರವಾಗಿದ್ದು, ಇಲ್ಲಿ ಪವಿತ್ರ ಸ್ನಾನ ಮಾಡಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬುದು ಹಿಂದೂಗಳ ನಂಬಿಕೆ.

ಆರು ವರ್ಷಗಳಿಗೊಮ್ಮೆ ಅರ್ಧ ಕುಂಭಮೇಳ ನಡೆಯುತ್ತದೆ. 2019ರಲ್ಲಿ ಪ್ರಯಾಗ್‌ರಾಜ್‌ನಲ್ಲೇ ಅರ್ಧ ಕುಂಭಮೇಳ ನಡೆದಿತ್ತು. ಹಿಂದೂ ಕ್ಯಾಲೆಂಡರ್ ಅನುಸಾರ ಸೂರ್ಯ, ಚಂದ್ರ ಮತ್ತು ಗುರುಗ್ರಹದ ಚಲನೆಯನ್ನು ಆಧರಿಸಿ ಕುಂಭಮೇಳ ನಡೆಯುವ ಸ್ಥಳ, ದಿನಾಂಕವನ್ನು ನಿಗದಿಪಡಿಸಲಾಗುತ್ತದೆ.

ಮಹಾ ಕುಂಭಮೇಳ ನಡೆಯುವ ಸ್ಥಳ



ಐತಿಹಾಸಿಕ ಹಿನ್ನೆಲೆ

ಪೌರಾಣಿಕ ಹಿನ್ನೆಲೆ ಹೊರತಾಗಿ, ಕ್ರಿ.ಪೂ 4ನೇ ಶತಮಾನದಲ್ಲಿ ಮೌರ್ಯ, ಗುಪ್ತರ ಆಡಳಿತದಲ್ಲಿ ಕುಂಭ ಮೇಳ ನಡೆದಿರುವ ಬಗ್ಗೆ ದಾಖಲೆಗಳಿವೆ ಎಂದು ಹೇಳುತ್ತದೆ ಉತ್ತರ ಪ್ರದೇಶ ಸರ್ಕಾರ ರೂಪಿಸಿರುವ ಕುಂಭ ಮೇಳಕ್ಕೆ ಸಂಬಂಧಿಸಿದ ವೆಬ್‌ಸೈಟ್. ನಂತರ ಬಂದ ರಾಜರು ಕೂಡ ಕುಂಭ ಮೇಳಕ್ಕೆ ಪ್ರೋತ್ಸಾಹ ನೀಡುತ್ತಾ ಬಂದರು. ಮೊಘಲರ ಆಡಳಿತದಲ್ಲೂ ಕುಂಭ ಮೇಳ ನಡೆಯುತ್ತಿತ್ತು. ಅಕ್ಬರ್ ಸಕ್ರಿಯವಾಗಿ ಇದರಲ್ಲಿ ತೊಡಗಿಸಿಕೊಳ್ಳುತ್ತಿದ್ದ ಎಂಬುದಕ್ಕೆ ಇತಿಹಾಸದಲ್ಲಿ ದಾಖಲೆಗಳಿವೆ. ಬ್ರಿಟಿಷ್ ಆಡಳಿತ ಕೂಡ ಈ ಉತ್ಸವಕ್ಕೆ ಪ್ರೋತ್ಸಾಹ ನೀಡಿತ್ತು.

ಎಂಟನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ಕುಂಭ ಮೇಳದಲ್ಲಿ ಹೆಚ್ಚೆಚ್ಚು ಸಾಧು ಸಂತರು ಒಟ್ಟಾಗಿ ಪಾಲ್ಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು ಎಂದೂ ಹೇಳಲಾಗುತ್ತಿದೆ.

1947ರಲ್ಲಿ ಸ್ವಾತಂತ್ರ್ಯ ಬಂದ ನಂತರ, ಸರ್ಕಾರವೇ ಕುಂಭ ಮೇಳವನ್ನು ಆಯೋಜಿಸುತ್ತಿದೆ. ಕುಂಭ ಮೇಳದಲ್ಲಿ ಸಾಧು ಸಂತರ 13 ಅಖಾಡಾಗಳು (ಗುಂಪು) ಸಕ್ರಿಯವಾಗಿ ಭಾಗವಹಿಸುತ್ತವೆ. ನಾಗಾ–ಸಾಧುಗಳು, ಅಘೋರಿಗಳು ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳ ಸಾಧು ಸಂತರು ಈ ಕುಂಭಮೇಳದಲ್ಲಿ ಭಾಗವಹಿಸುವುದು ವಿಶೇಷ.

ಆಧಾರ:ಪಿಟಿಐ, ಕುಂಭ ಮೇಳ ವೆಬ್‌ಸೈಟ್

‘ಒಂದು ರಾಷ್ಟ್ರ, ಒಂದು ಚುನಾವಣೆ’ ಬಗ್ಗೆ ಉಪನ್ಯಾಸ

ಕುಂಭ ಮೇಳದಲ್ಲಿ ಹರಿದ್ವಾರ ಮೂಲದ ‘ದಿವ್ಯ ಪ್ರೇಮ ಸೇವಾ ಮಿಷನ್’ ಸಂಸ್ಥೆ ಏಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿದೆ. ಅವುಗಳ ಪೈಕಿ ವಿವಾದಾತ್ಮಕವಾದ ‘ಒಂದು ರಾಷ್ಟ್ರ, ಒಂದು ಚುನಾವಣೆ’ಯೂ ಒಂದು ವಿಷಯವಾಗಿದೆ. ಮಹಾಕುಂಭ ಮೇಳದ ಮುನ್ನಾ ದಿನವಾದ ಭಾನುವಾರದಂದು ಉಪನ್ಯಾಸ ಸರಣಿ ಆರಂಭವಾಗಿದ್ದು, ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ‘ಸ್ವಾಮಿ ವಿವೇಕಾನಂದ: ಸನಾತನ ಧರ್ಮದ ವಿಶ್ವ ದೃಷ್ಟಿ’ (ಸನಾತನ್ ಧರ್ಮಕಿ ವೈಶ್ವಿಕ್ ದೃಷ್ಟಿ) ಎನ್ನುವ ವಿಷಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಜನವರಿ 18ರಂದು ‘ಒಂದು ರಾಷ್ಟ್ರ, ಒಂದು ಚುನಾವಣೆ: ವಿಕಸಿತ ಭಾರತ ಮತ್ತು ಆರ್ಥಿಕ, ರಾಜನೀತಿ ಸುಧಾರಣೆ’ ಬಗ್ಗೆ ಉಪನ್ಯಾಸವಿದ್ದು, ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡುವಂತೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಆಹ್ವಾನ ಪತ್ರ ಕಳಿಸಲಾಗಿದೆ ಎಂದು ‘ದಿವ್ಯ ಪ್ರೇಮ ಸೇವಾ ಮಿಷನ್’ ತಿಳಿಸಿದೆ.

ಸಿನಿ ಬಿಟ್

‘ಕೇಳೋ ಮಚ್ಚಾ’ ಎನ್ನುತ್ತಿರುವ ಅಜನೀಶ್

ಅಜನೀಶ್ ಲೋಕನಾಥ್ ನಿರ್ಮಿಸಿ, ಸಿ.ಆರ್. ಬಾಬಿ ನಿರ್ದೇಶನದ ‘ಜಸ್ಟ್ ಮ್ಯಾರೀಡ್’ ಚಿತ್ರದ ‘ಕೇಳೋ ಮಚ್ಚಾ’ ಹಾಡನ್ನು ಜನವರಿ 14ರಂದು ಕಿಚ್ಚ ಸುದೀಪ ಬಿಡುಗಡೆ ಮಾಡಲಿದ್ದಾರೆ.

‘ಅಭಿಮಾನಿಯಾಗಿ ಹೋದೆ’ ಎಂಬ ಮಾಧುರ್ಯ ಗೀತೆಯನ್ನು ಈ ಮೊದಲು ಬಿಡುಗಡೆ ಮಾಡಿದ್ದೆವು. ಇದೀಗ ಪಾರ್ಟಿ ಹಾಡನ್ನು ನೀಡುತ್ತಿದ್ದೇವೆ. ವಿವಿಧ ಭಾವನೆಗಳನ್ನು ಮೂಡಿಸುವ ಹಾಡುಗಳು ಚಿತ್ರದಲ್ಲಿವೆ ಎನ್ನುತ್ತಾರೆ ನಿರ್ದೇಶಕರು.

‘ಕೇಳೋ ಮಚ್ಚಾ’ ಹಾಡಿಗೆ ನಾಗಾರ್ಜುನ ಶರ್ಮಾ ಸಾಹಿತ್ಯವಿದ್ದು, ನಕಾಶ್ ಅಜೀಜ್ ಧ್ವನಿಯಾಗಿದ್ದಾರೆ. ಅಜನೀಶ್ ಸಂಗೀತ ಸಂಯೋಜನೆಯಿದೆ. ಕೌಟುಂಬಿಕ ಬಾಂಧವ್ಯಗಳ ಮೌಲ್ಯವನ್ನು ತಿಳಿಸುವ ರೊಮ್ಯಾಂಟಿಕ್ ಡ್ರಾಮಾದಲ್ಲಿ ಶೈನ್ ಶೆಟ್ಟಿ, ಅಂಕಿತಾ ಅಮರ್, ಶ್ರುತಿ ಹರಿಹರನ್, ದೇವರಾಜ್, ಶ್ರುತಿ, ಅನೂಪ್ ಭಂಡಾರಿ, ಅಚ್ಯುತ್ ಕುಮಾರ್ ಮುಂತಾದವರಿದ್ದಾರೆ.

ಸಿನಿಮಾ ಶೀರ್ಷಿಕೆಯಾಯ್ತು KA-11-1977

ಜಗದೀಶ್ ಕೊಪ್ಪ ನಿರ್ದೇಶಿಸುತ್ತಿರುವ ’KA-11-1977’ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಂದ್ರಶೇಖರ ಕಂಬಾರ ಶೀರ್ಷಿಕೆ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಜಗದೀಶ್ ಕೊಪ್ಪ ಈ ಹಿಂದೆ ಶರಣ್ ಮೊದಲ ಬಾರಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದ ’ಕಾಲೇಜ್ ಕಾಲೇಜ್’ ಮತ್ತು ’ಥ್ಯಾಂಕ್ಸ್’ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದರು. ಉದ್ಯಮಿ ಹೆಚ್.ಪ್ರಕಾಶ್ ಬಂಡವಾಳ ಹೂಡುತ್ತಿದ್ದಾರೆ. ’ನಟ ನವೀನ್ ಕೃಷ್ಣ ನಟಿಸುವ ಜೊತೆಗೆ ಸಂಭಾಷಣೆ ಬರೆಯುತ್ತಿದ್ದಾರೆ, ಸಂಗಮೇಶ ಉಪಾಸೆ, ಶಿವಕುಮಾರ ಆರಾಧ್ಯ, ರೀಮಾ, ತಾರಾ, ಬೇಬಿ ರಚನಾ ಮುಂತಾದವರು ತಾರಾಗಣದಲ್ಲಿದ್ದಾರೆ’ ಎನ್ನುತ್ತಾರೆ ನಿರ್ದೇಶಕರು.

ಪಳನಿ.ಡಿ.ಸೇನಾಪತಿ ಸಂಗೀತ ಸಂಯೋಜನೆ, ರೇಣುಕುಮಾರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಇದೇ ತಿಂಗಳಲ್ಲಿ ಮುಹೂರ್ತ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಮಹಾ ಸಮ್ಮಿಲನ

• ವಚನಾನಂದ ಸ್ವಾಮೀಜಿ



ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ ಮಹಾ ಕುಂಭಮೇಳವು ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಸಮ್ಮಿಲನ. ಪವಿತ್ರ ನದಿಗಳಾದ ಗಂಗಾ, ಯಮುನಾ ಮತ್ತು ವೇದಕಾಲದ ನದಿ, ಈಗ ಗುಪ್ತಗಾಮಿನಿಯಾಗಿರುವ ಸರಸ್ವತಿ ಸಂಗಮ ಪ್ರಯಾಗ್‌ರಾಜ್. ಇದು ಹಿಂದೂಗಳಿಗೆ ಅತಿ ಪವಿತ್ರ. ಕುಂಭಮೇಳದ ಮಹತ್ವ ವೇದ, ಪುರಾಣಗಳಲ್ಲಿ ವರ್ಣಿತವಾಗಿದೆ. ಈ ಸಂಗಮದಲ್ಲಿ ಕುಂಭಮೇಳ ಕಾಲದಲ್ಲಿ ಮೀಯುವುದರಿಂದ ಎಲ್ಲ ಪಾಪಗಳ ವಿಮೋಚನೆಯಾಗಿ, ಜನನ ಮರಣ ಚಕ್ರ ಕಡಿದು, ಮೋಕ್ಷ ಸಾಧ್ಯವೆಂಬ ನಂಬಿಕೆ ನಮ್ಮದು.

ಕುಂಭಮೇಳವು ಭಾರತದ ಧಾರ್ಮಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲ, ಖಗೋಳ ಮತ್ತು ಜ್ಯೋತಿಷ್ಯಶಾಸ್ತ್ರದ ದೃಷ್ಟಿಯಿಂದಲೂ ಮಹತ್ವಪೂರ್ಣ. ಇದರ ಆಯೋಜನೆ ಗ್ರಹಗಳು ಮತ್ತು ನಕ್ಷತ್ರಗಳ ವಿಶಿಷ್ಟ ಸ್ಥಾನವನ್ನಾಧರಿಸಿದೆ. ಈ ಅವಧಿ ಗುರುಗ್ರಹವು ರಾಶಿಚಕ್ರದ 12 ರಾಶಿಗಳಲ್ಲಿ ಒಮ್ಮೆ ಸಂಪೂರ್ಣ ಚಕ್ರವನ್ನು ಪೂರ್ಣಗೊಳಿಸುವ ಕಾಲವನ್ನು ಪ್ರತಿನಿಧಿಸುತ್ತದೆ. ಕುಂಭಮೇಳದ ಸಮಯದಲ್ಲಿ ಗುರುವು ಮೇಷ ರಾಶಿಯಿಂದ ಕುಂಭ ರಾಶಿಗೆ ಪ್ರವೇಶಿಸುತ್ತಾನೆ. ಸೂರ್ಯನು ಮಕರ ರಾಶಿಯಲ್ಲಿರುತ್ತಾನೆ ಮತ್ತು ಚಂದ್ರನು ಕುಂಭ ರಾಶಿಯಲ್ಲಿ ಪ್ರವೇಶಿಸುತ್ತಾನೆ. ಇದು ಅತ್ಯಂತ ಪವಿತ್ರ ಪುಣ್ಯ ಪರ್ವಕಾಲ.

ವೇದಗಳಲ್ಲಿ ನದಿಗಳ ಮಹತ್ವ ಮತ್ತು ಅವುಗಳ ಪಾವಿತ್ರ್ಯವನ್ನು ಉದ್ಧರಿಸಲಾಗಿದೆ. ಆಧುನಿಕ ಇತಿಹಾಸದಲ್ಲಿ ಚಾಣಕ್ಯ ಚಂದ್ರಗುಪ್ತರ ಕಾಲದಲ್ಲಿ ಇದರ ಉಲ್ಲೇಖ ಬರುತ್ತದೆ. ಶಂಕರಾಚಾರ್ಯರು ಇದನ್ನು ಇನ್ನೂ ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಿದರು.

ಕುಂಭಮೇಳದಲ್ಲಿ ಭಾಗವಹಿಸುವ ಪ್ರಮುಖ ಸಂಘಟನೆಗಳನ್ನು ಅಖಾಡಾಗಳು ಎನ್ನಲಾಗುತ್ತದೆ. ಪ್ರತಿಯೊಂದು ಕುಂಭಮೇಳದಲ್ಲಿಯೂ ವಿವಿಧ ಅಖಾಡಾಗಳ ಸದಸ್ಯರು, ವಿಶೇಷವಾಗಿ ನಾಗಾ ಸಾಧುಗಳು ಶೋಭಾಯಾತ್ರೆಯಲ್ಲಿ ಭಾಗವಹಿಸುತ್ತಾರೆ ಭಾರತದ ಎಲ್ಲ ಮತ ಪಂಥಗಳಿಗೂ ಪ್ರಾತಿನಿಧ್ಯವಿರುವುದು ಮೇಳದ ವಿಶೇಷಗಳಲ್ಲೊಂದು.

ಲೇಖಕ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಅಧ್ಯಕ್ಷ

ದೇಶ ಸೇವೆಯೇ ಈಶ ಸೇವೆ!

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಮಲಪ್ರಭಾ ಮತ್ತು ಕೃಷ್ಣೆ ಕೂಡಿದ್ದಕ್ಕೆ ಕೂಡಲ ಸಂಗಮವಾಯ್ತು. ಆದರೆ, ನಿಜವಾದ ಕೂಡಲ ಸಂಗಮ ಯಾವುದೆಂದರೆ, ಯಾವುದೇ ಜಾತಿ ಧರ್ಮ ಮೇಲು ಕೀಳು ಎಂಬ ಭೇದವಿಲ್ಲದೆ ಎಲ್ಲ ಜನರೂ ಒಂದೆಡೆ ಸೇರಿದರೆ ಅದೇ ನಿಜವಾದ ಕೂಡಲ ಸಂಗಮ. ದೇಶ ಸೇವೆಯೇ ಈಶ ಸೇವೆ ಎಂದು ಒಂದಾಗುವುದು ಸಂಗಮ. ದೇಶ ಕಟ್ಟುವ ಕಾರ್ಯ ಅತ್ಯಂತ ಪವಿತ್ರ ಕಾರ್ಯ. ಹಿಂದಿ ಸಾಹಿತ್ಯದ ಶ್ರೇಷ್ಠ ಕವಿ ಹೂವಿನ ಆಸೆಯ ಬಗ್ಗೆ ಒಂದು ಕವಿತೆ ಬರೀತಾರೆ. ಆ ಕವಿತೆಯಲ್ಲಿ ಹೂವು ಹೂವುಗಾರನಿಗೆ ಹೇಳುತ್ತದೆ: ‘ನನ್ನ ಬದುಕು ಪವಿತ್ರ ಆಗಬೇಕು ಎಂದರೆ ದೇವರ ತಲೆಯ ಮೇಲೆ ನಾನು ಬಿದ್ದರೆ ಪವಿತ್ರ ಆಗೋದಿಲ್ಲ. ಪ್ರೇಮಿಗಳ ಕೈ ತಲುಪಿದರೂ ನಾನು ಪವಿತ್ರ ಆಗೋದಿಲ್ಲ. ದೇಶವನ್ನು ಕಟ್ಟಬೇಕು ಅಂತ ದೇಶ ಭಕ್ತರು ಸಾಗುತ್ತಾರಲ್ಲ. ಆ ದಾರಿಯಲ್ಲಿ ನನ್ನನ್ನು ಬಿಸಾಕು. ದೇಶಭಕ್ತರ ಕಾಲಿನ ಮಣ್ಣು ನನಗೆ ತಾಗಿದರೆ ನಾನು ಪವಿತ್ರ ಆಗುತ್ತೇನೆ’.

ಭಾರತದ ಸಂಸ್ಕೃತಿ ಪವಿತ್ರವಾದದ್ದು. ಪುರಾತನ ನಾಗರಿಕತೆಯ ಬಗ್ಗೆ ಮಾತನಾಡುವಾಗಲೆಲ್ಲ ನಾವು ಈಜಿಪ್ಟ್, ಗ್ರೀಕ್ ಮುಂತಾದ ನಾಗರಿಕತೆಗಳ ಬಗ್ಗೆ ಹೇಳುತ್ತೇವೆ. ಆದರೆ ಅಲ್ಲಿ ನಾಗರಿಕತೆ ಅಂಬೆಗಾಲು ಇಡುತ್ತಿರುವಾಗಲೇ ಇಲ್ಲಿ ಅತ್ಯಂತ ಶ್ರೇಷ್ಠ ವಿಶ್ವವಿದ್ಯಾಲಯಗಳಿದ್ದವು. ಸಿಗ್ಮಂಡ್ ಫ್ರಾಯ್ಡ್‌ನಂತಹವರು ಮನೋವಿಜ್ಞಾನದ ಬಗ್ಗೆ ಹೇಳುವುದಕ್ಕೆ ಮೊದಲೇ ಪತಂಜಲಿ ಈ ಬಗ್ಗೆ ಸಾಕಷ್ಟು ಹೇಳಿದ್ದರು. ಆಧುನಿಕ ವೈದ್ಯಕೀಯ ಪದ್ಧತಿ ಜಾರಿಗೆ ಬರುವುದಕ್ಕೆ ಬಹಳ ಮುಂಚೆಯೇ ಇಲ್ಲಿ ವೈದ್ಯಕೀಯ ಪದ್ಧತಿ ಪ್ರಬಲವಾಗಿ ಬೆಳೆದಿತ್ತು. ಬ್ರಿಟಿಷ್ ಕೌನ್ಸಿಲ್‌ನಲ್ಲಿ ಸಂವಿಧಾನವನ್ನು ಒಪ್ಪುವುದಕ್ಕೆ ಒಂದು ಶತಮಾನಕ್ಕೆ ಮೊದಲೇ ಇಲ್ಲಿ ಧಾರ್ಮಿಕ ಸಂವಿಧಾನ ಬಸವಣ್ಣನ ನೇತೃತ್ವದಲ್ಲಿ ಜಾರಿಗೆ ಬಂದಿತ್ತು. ಅಂತಹ ಹಿರಿಮೆಯನ್ನು ಹೊಂದಿದ ದೇಶ ಭಾರತ. ಧಾರವಾಡದ ಕುಮಾರಸ್ವಾಮೀಜಿಗೆ ಯಾರೋ, ‘ನೀವು ನಮ್ಮ ದೇಶದ ಸಂಸ್ಕೃತಿ ಬಹಳ ಚೆನ್ನಾಗಿದೆ ಅಂತೀರಿ. ಆದರೆ, ಅದನ್ನು ಇಲ್ಲಿದ್ದವರೇ ಅನುಸರಿಸುವುದಿಲ್ಲ. ಆದರೆ, ವಿದೇಶಿಗರು ಗೌರವಿಸುತ್ತಾರೆ ಯಾಕೆ?’ ಅಂತ ಕೇಳಿದರಂತೆ. ಅದಕ್ಕೆ ಕುಮಾರಸ್ವಾಮಿಗಳು ‘ಮೋಡ ಕಟ್ಟಿದಲ್ಲೆಲ್ಲ ಮಳೆ ಆಗೋದಿಲ್ಲ. ಮೋಡ ಒಂದು ಕಡೆ ಕಟ್ಟತೈತಿ. ಮಳೆ ಇನ್ನೊಂದು ಕಡೆ ಸುರೀತೈತಿ. ಹಾಗೆಯೇ ಸಂಸ್ಕೃತಿಯ ಮೋಡ ಇಲ್ಲಿ ಕಟ್ಟಿತು. ಮಳೆ ವಿದೇಶದಲ್ಲಿ ಸುರೀತು’ ಅಂತ. ಮ್ಯಾಕ್ಸ್ ಮುಲ್ಲರ್ ಒಂದೆಡೆ ಹೇಳುತ್ತಾನೆ, ‘ನನಗೆ ಮುಂದಿನ ಜನ್ಮ ಅನ್ನುವುದು ಇದ್ದರೆ ನಾನು ಭಾರತದಲ್ಲಿ ಹುಟ್ಟಬೇಕು’ ಅಂತ.

ದಕ್ಷಿಣ ಆಫ್ರಿಕಾದ ಕ್ರಿಕೆಟಿಗ ಜಾಂಟಿ ರೋಡ್ಸ್ ಕ್ರಿಕೆಟ್ ಆಡಲು ಬಂದು ಈ ದೇಶದ ಪ್ರೇಮಿಯಾಗಿಬಿಟ್ಟ. ಅವನ ಪತ್ನಿ ಗರ್ಭಿಣಿಯಾದಾಗ ತನ್ನ ಮಗು ದಕ್ಷಿಣ ಆಫ್ರಿಕಾದಲ್ಲಿ ಹುಟ್ಟಬಾರದು ಅಂತ ಪತ್ನಿಯನ್ನು ಭಾರತಕ್ಕೆ ಕರೆದುಕೊಂಡು ಬರ್ತಾನೆ. ಆಕೆ ಇಲ್ಲಿಯೇ ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವಿಗೆ ಇಂಡಿಯಾ ಅಂತ ಹೆಸರಿಡುತ್ತಾನೆ. ಅಂದರೆ, ಅವರು ನಮ್ಮ ದೇಶವನ್ನು ಅಷ್ಟು ಪ್ರೀತಿ ಮಾಡ್ತಾರೆ. ನಮಗೂ ನಮ್ಮ ದೇಶದ ಬಗ್ಗೆ ಪ್ರೀತಿ ಇರಬೇಕಲ್ಲ. ಹಲವಾರು ಕೊರತೆಗಳು, ಲೋಪದೋಷಗಳು ಇದ್ದರೂ ನಮ್ಮ ದೇಶದ ಸಂಸ್ಕೃತಿಯ ಶ್ರೇಷ್ಠ ಗುಣಗಳನ್ನು ನಾವು ಪ್ರೀತಿಸಬೇಕು ಮತ್ತು ಆರಾಧಿಸಬೇಕು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 13, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪೂರ್ಣಿಮಾ ಗಂ.27-57 ನಕ್ಷತ್ರ: ಆರ್ದ್ರಾ ಗಂ. 10-38 ಯೋಗ: ಐಂದ್ರ ಗಂ. 06-44 ನಂತರ ವೈಧೃತಿ ಗಂ. 28-39 ಕರಣ: ವಿಷ್ಟಿ ಗಂ. 16-27, ಧನು ಮಾಸದ 28 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 07-01 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 12 ರಜಬ್, ದಿನ ವಿಶೇಷ : ಪೌಷಿ ಪೂರ್ಣಿಮಾ, ಭೋಗಿ (ದ.ಭಾರತ), ಆರುದ್ರ ದರ್ಶನಮ್ (ಪುರ್ವಾರುಣೋದಯ) (ದ. ಭಾರತ), ಲೊಹ್ರಿ, ಪುಷ್ಯಾಭಿಷೇಕ ಯಾತ್ರ, ಅದೃಷ್ಟ ಸಂಖ್ಯೆ : 8, 10

ಮೇಷ: ಸ್ಪರ್ಧಾತ್ಮಕ ವಿಚಾರಗಳಲ್ಲಿ ಪ್ರಬಲರಾದ ಮತ್ತು ಚಾಣಾಕ್ಷರಾದ ಪ್ರತಿಸ್ಪರ್ಧಿಗಳು ಎದುರಾಗುವರು. ಹಿರಿಯ ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ. ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಅನಿವಾರ್ಯ.

ವೃಷಭ: ಕೇವಲ ವೃತ್ತಿಯಲ್ಲಿ ಅಲ್ಲದೆ, ಪ್ರವೃತ್ತಿಯಿಂದಲೂ ಹೆಸರನ್ನು ಸಂಪಾದನೆ ಮಾಡುವಂತಾಗಲಿದೆ. ಕಮಿಷನ್ ವ್ಯವಹಾರ ನಡೆಸುವವರಿಗೆ ಲಾಭಾಂಶ ವೃದ್ಧಿ. ವೈವಾಹಿಕ ಜೀವನ ಸುಖಮಯವಾಗಿರಲಿದೆ.

ಮಿಥುನ: ಇನ್ನೊಬ್ಬರನ್ನು ನೋಡಿ ಅಸೂಯೆ ಪಡುವ ನಿಮ್ಮ ವ್ಯಕ್ತಿತ್ವವನ್ನು ಬದಲಿಸಿಕೊಳ್ಳುವುದು ಅಭಿವೃದ್ಧಿಗೆ ಕಾರಣವಾಗುತ್ತದೆ. ಸಜ್ಜನರ ಭೇಟಿಯಿಂದ ಹಾಗೂ ಸಹವಾಸದಿಂದ ಕಾರ್ಯಗಳು ಕೈಗೂಡುವುದು.

ಕರ್ಕಾಟಕ: ನೂತನ ಸಂಬಂಧ ಬೆಳೆಸುವ ವಿಚಾರವಾಗಿ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿರುವುದಿಲ್ಲ. ತಂದೆಯ ಅಥವಾ ಹಿರಿಯರ ಮಾತಿಗೆ ಎದುರಾಡಬೇಡಿ. ಶ್ರೇಯಸ್ಸಿಗೆ ಅಡ್ಡಿಯಾಗುವುದು. ವಸ್ತ್ರ ಖರೀದಿ ಯೋಗವಿದೆ.

ಸಿಂಹ: ಹಣವನ್ನು ಸಂಪಾದಿಸುವ ಬಗ್ಗೆ ಎಷ್ಟು ಗಮನಹರಿಸುವಿರೋ ಗಳಿಸಿದ ಹಣವನ್ನು ಬಳಕೆ ಮಾಡುವ ಬಗ್ಗೆಯೂ ಅಷ್ಟೇ ಗಮನಹರಿಸಿ. ಗುತ್ತಿಗೆ ಆಧಾರಿತ ಉದ್ಯೋಗ ನಡೆಸುವವರಿಗೆ ಜನಬಲದ ಸಮಸ್ಯೆ ಎದುರಾಗಬಹುದು.

ಕನ್ಯಾ: ಶತ್ರುಗಳ ಉಪಟಳ ತಡೆಯಲು ತಂತ್ರಗಾರಿಕೆ ಮಾಡಬೇಕಾಗುತ್ತದೆ. ರಾಜಕೀಯ ಪಕ್ಷವೊಂದಕ್ಕೆ ಸೇರಲು ಒತ್ತಾಯ ಬರುವುದು. ಕೃಷಿಕರು ಮಿಶ್ರ ಕೃಷಿ ಪದ್ಧತಿ ಅನುಸರಿಸಿದರೆ ಲಾಭವಾಗಲಿದೆ.

ತುಲಾ: ಷೇರುಗಳನ್ನು ಕೊಳ್ಳುವಲ್ಲಿ ಲೆಕ್ಕಾಚಾರ ವ್ಯತ್ಯಾಸವಾಗಲಿದೆ. ಗಮನವಿರಲಿ. ಈ ದಿನ ಸಂಸಾರ ನಿರ್ವಹಣೆ ಸುಲಭವೆನಿಸುವುದು. ಉಸಿರಾಟದ ಸಮಸ್ಯೆ ಎದುರಾಗಬಹುದು, ನಿರ್ಲಕ್ಷ್ಯ ಬೇಡ.

ವೃಶ್ಚಿಕ: ಕೆಲವರು ನಿಮ್ಮನ್ನು ಅಪಹಾಸ್ಯ ಮಾಡುವ ಅಥವಾ ಕೆಣಕುವಂಥ ಪ್ರಯತ್ನಕ್ಕೆ ಹೋಗುವರು. ವಾಹನ ಚಾಲನೆಯಲ್ಲಿ ಅಥವಾ ವಾಹನದಲ್ಲಿ ಪ್ರಯಾಣಿಸುವಾಗ ಜಾಗ್ರತರಾಗಿರಿ. ರಫ್ತು ವ್ಯಾಪಾರದ ಒಪ್ಪಂದ ಲಾಭ ತರಲಿದೆ.

ಧನು: ಜವಳಿ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚು ಲಾಭ ಪಡೆಯಬಹುದು. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ. ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ.

ಮಕರ: ಬಂಧುಗಳಲ್ಲಿ ಅನಗತ್ಯ ವಾದ–ವಿವಾದಗಳು ಬೇಡ. ಈಗಾಗಲೇ ಕಳೆದುಕೊಂಡಿರುವ ವಿಶ್ವಾಸವನ್ನು ಪುನಃ ಸಂಪಾದಿಸುವ ಬಗ್ಗೆ ಗಮನಹರಿಸಿ. ಖಾದ್ಯ ತೈಲಗಳ ಹಾಗೂ ಸಿಹಿ ತಿನಿಸುಗಳ ಮಾರಾಟದವರಿಗೆ ಲಾಭವಿರುವುದು.

ಕುಂಭ: ಅಚ್ಚುಕಟ್ಟಾದ ಕೆಲಸಗಳಿಂದ ನಿಮ್ಮ ಮೇಲಿನ ಅಭಿಪ್ರಾಯಗಳು ಬದಲಾಗುವುದು. ಧಾರ್ಮಿಕ ಕಾರ್ಯಗಳಿಂದ ದೊರಕುವ ಸತ್ಫಲಗಳು ಅನುಭವಕ್ಕೆ ಬರಲಿವೆ. ಜೀವನ ಶೈಲಿಯಲ್ಲಿ ಧಾರ್ಮಿಕತೆ ಅಳವಡಿಸಿಕೊಳ್ಳಿರಿ.

ಮೀನ: ಸಮೀಪವರ್ತಿಗಳ ಸಲಹೆಗಳಿಂದ ವಹಿವಾಟುಗಳಲ್ಲಿನ ಆದಾಯದಲ್ಲಿ ಏರಿಕೆ ಕಾಣಲಿರುವಿರಿ. ಎಲೆಕ್ಟ್ರಿಕಲ್ ವಸ್ತುಗಳ ವ್ಯಾಪಾರ ಆರಂಭಿಸುವ ಬಗ್ಗೆ ಯೋಚಿಸಬಹುದು. ಸಂತಾನ ಸುದ್ದಿ ಕೇಳಿ ಬರುವುದು.

ಪದಬಂಧ 5921

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರತ್ನದಂಥ ಚುಂಬನ! (2)
2.ಮುಪ್ಪನ್ನು ಹೋಗಲಾಡಿಸಿ ಯೌವ್ವನವನ್ನು ತರುವ ಆಯುರ್ವೇದ ಚಿಕಿತ್ಸೆ (4)
5.ಕುದುರೆ ಬಾಯಿಗೆ ಕಟ್ಟಿದ ಉಕ್ಕಿನ ತುಂಡು (4)
7.ಆಸ್ಪತ್ರೆಯನ್ನು ಹೀಗೂ ಹೇಳುತ್ತಾರೆ (4)
8.ಕುದುರೆ ಸವಾರ ಇಲ್ಲಿದ್ದಾನೆ (3)
9.ಉಯ್ಯಾಲೆ ಇಲ್ಲಿದೆ (3)
11.ಚಿತ್ತವೃತ್ತಿಯ ತೀವ್ರತೆ (4)
13.ಮರದೊಳಗೆ ಸುತ್ತುತ್ತಿರುವ ದುಂಬಿ (4)
15.ಕಾರ್ಯನಿರ್ವಾಹಕನ ಸ್ಥಾನ (4)
16.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1.ದುಮುಗುಟ್ಟುತ್ತಿರುವ ಅಜ್ಜ (3)
2.ಕಾಯಿಯ ಹೂರಣ ತಂದಿರುವ ಉದ್ದೇಶ (3)
3.ಕರುವನ್ನು ಮಾರುವಾತನ ಷರತ್ತು (3)
4.ಗೆಲುವನ್ನು ಪಡೆದವನೀತ (4)
6.ಕಾವು ಬಡಿದರೂ ತೋರಿಸಿದ ಡೌಲು! (3)
8.ದೌತ್ಯ ಅಥವಾ ಸಂಧಾನ (4)
10.ಕಾಯ ಬಗ್ಗಿಸಿ ಮಾಡಿದ ಕಾರ್ಯ (3)
12.ಬಾಣ ಬಿದ್ದಿರುವ ಸಮುದ್ರ! (3)
13.ಕನ್ನಡಿಗನು ಹಿಡಿದಿರುವ ಲೆನ್ಸು (3)
14.ಮಣಿ ಧರಿಸಿದ ಚಲುವೆ (3)



5920ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 3.ಕಡಗ 5.ರತ್ನಾಕರ 7.ಜಾಗರ 10.ಅತಿಕ್ರಮಪ್ರವೇಶ 13.ಸಂತುಷ್ಟ 16.ಸ್ವಯಾರ್ಜಿತ 18.ಗಟಾರ 19.ಟಗರು

ಮೇಲಿಂದ ಕೆಳಕ್ಕೆ:
1.ಆಪದ್ಭಂದು 2.ಬರ 3.ಕರ 4.ಗದಗ 6.ಕಪ್ಪ 7.ಜಾತವೇದ 8.ರಜ್ಜು 9.ಜಾತಿಭ್ರಷ್ಟ 11.ಕಸಂ 12.ತಲೆಮಾರು 14.ತುರಗ 15.ದಿಯಾ 16.ಸ್ವರ 17.ತಟ

ಸುಡೊಕು 6306

		7	1		2		6	
				3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6305 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಸುರಕ್ಷತೆಯಲ್ಲಿ ಕೊನೆಯ ಸ್ಥಾನ: ಅವತಾರ್ ಸಮೀಕ್ಷಾ ವರದಿ

ಕೆಲಸ ಮಾಡುವ ಮಹಿಳೆಯರಿಗೆ ಬೆಂಗಳೂರು ಅತ್ಯುತ್ತಮ ನಗರ

ಚೆನ್ನೈ (ಪಿಟಿಐ): 'ಕೆಲಸ ಮಾಡುವ ಮಹಿಳೆಯರಿಗೆ ಅತ್ಯುತ್ತಮ ನಗರ ಎಂಬ ಹೆಗ್ಗಳಿಕೆಗೆ ಬೆಂಗಳೂರು ಪಾತ್ರವಾಗಿದ್ದು, ಅಗ್ರಸ್ಥಾನ ಪಡೆದಿದೆ' ಎಂದು ಅವತಾರ್ ಸಮೂಹದ–2024ರ ವರದಿ ಹೇಳಿದೆ.

ಆದರೆ, ಸುರಕ್ಷತೆಯ ವಿಚಾರದಲ್ಲಿ ಮಾತ್ರ ಬೆಂಗಳೂರು ಕೊನೆಯ ಸ್ಥಾನದಲ್ಲಿದೆ. ಈ ವಿಷಯದಲ್ಲಿ ತಿರುವನಂತಪುರ, ಮುಂಬೈ ಮತ್ತು ಹೈದರಾಬಾದ್ ಮೊದಲ ಸ್ಥಾನದಲ್ಲಿವೆ. ಕೊಚ್ಚಿ, ಗುರುಗ್ರಾಮ ಕೊನೆಯ ಸ್ಥಾನಗಳಲ್ಲಿವೆ ಎಂದು ತಿಳಿಸಿದೆ.

ದಕ್ಷಿಣ ಭಾರತದ ಒಟ್ಟು 16 ನಗರಗಳು ಅಗ್ರ 25ರಲ್ಲಿದ್ದರೆ, ತಮಿಳುನಾಡಿನ ಎಂಟು ನಗರಗಳು ಸಹ ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ), ವಿಶ್ವ ಬ್ಯಾಂಕ್, ಅಪರಾಧ ದಾಖಲೆಗಳು ಸೇರಿದಂತೆ ವಿವಿಧ ಮಾಹಿತಿಯನ್ನು ಒಟ್ಟುಗೂಡಿಸಿ ವರದಿ ಸಿದ್ಧಪಡಿಸಲಾಗಿದೆ. ದೇಶದ 60 ನಗರಗಳ 1,672 ಮಹಿಳೆಯರು ಸಮೀಕ್ಷೆಯಲ್ಲಿ ಭಾಗವಹಿಸಿದ್ದರು ಎಂದು ಹೇಳಿದೆ.

ಮುಖ್ಯಾಂಶಗಳು

- ಪಟ್ಟಿಯಲ್ಲಿ ದಕ್ಷಿಣ ಭಾರತದ 16 ನಗರಗಳಿಗೆ ಸ್ಥಾನ
- ಸಮೀಕ್ಷೆಯಲ್ಲಿ ದೇಶದ 60 ನಗರಗಳಿಂದ 1,672 ಮಹಿಳೆಯರು ಭಾಗಿ
- ಸರ್ಕಾರಿ ಸಂಸ್ಥೆಗಳ ದಕ್ಷತೆಯಲ್ಲಿ ತಿರುವನಂತಪುರಕ್ಕೆ ಮೊದಲ ಸ್ಥಾನ

ಸಾಮಾಜಿಕವಾಗಿ ಮತ್ತು ಕೈಗಾರಿಕೆಗಳಲ್ಲಿ ಮಹಿಳೆಯರ ಒಳಗೊಳ್ಳುವಿಕೆಯಲ್ಲಿ ಬೆಂಗಳೂರು ಮೊದಲ ಸ್ಥಾನ ಪಡೆದಿದೆ. ನಂತರ ಚೆನ್ನೈ, ಮುಂಬೈ, ಹೈದರಾಬಾದ್, ದೆಹಲಿ ಮತ್ತು ಕೊಯಮತ್ತೂರು ಸೇರಿವೆ. ಪ್ರತಿ ನಗರ ಪಡೆದ ಒಟ್ಟಾರೆ ಅಂಕಗಳ ಆಧಾರದ ಮೇಲೆ ಮತ್ತು ಅವತಾರ್ ಸಮೂಹದ ಸಂಶೋಧನೆ ಹಾಗೂ ಸರ್ಕಾರದ ಅಂಕಿ ಅಂಶಗಳನ್ನು ಆಧರಿಸಿ ನಗರಗಳನ್ನು ಶ್ರೇಣೀಕರಿಸಲಾಗಿದೆ. ಮಹಿಳೆಯರ ಒಳಗೊಳ್ಳುವಿಕೆಯಲ್ಲಿ ರಾಜ್ಯಗಳ ಪೈಕಿ ಕೇರಳವು 20.89 ಅತಿ ಹೆಚ್ಚು ಅಂಕಗಳೊಂದಿಗೆ ಮುಂಚೂಣಿಯಲ್ಲಿದೆ. ತೆಲಂಗಾಣ 20.57, ಮಹಾರಾಷ್ಟ್ರ 19.93, ತಮಿಳುನಾಡು 19.38 ಮತ್ತು ಕರ್ನಾಟಕ 17.50 ಅಂಕ ಪಡೆದಿವೆ.

ಕೌಶಲ ಮತ್ತು ನಗರಗಳಲ್ಲಿ ಮಹಿಳೆಯರಿಗೆ ಉದ್ಯೋಗ ನೀಡಿಕೆಯಲ್ಲಿ ಗುರುಗ್ರಾಮ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಮುಂಬೈ, ಬೆಂಗಳೂರು ನಂತರದ ಸ್ಥಾನಗಳಲ್ಲಿವೆ. ಚೆನ್ನೈ, ಹೈದರಾಬಾದ್ ಮತ್ತು ತಿರುವನಂತಪುರ ಹಿಂದುಳಿದಿವೆ ಎಂದು ಹೇಳಿದೆ.

ಸರ್ಕಾರಿ ಸಂಸ್ಥೆಗಳ ದಕ್ಷತೆಯಲ್ಲಿ ತಿರುವನಂತಪುರ ಮೊದಲ ಸ್ಥಾನದಲ್ಲಿದ್ದರೆ, ಪುಣೆ ಎರಡನೇ ಸ್ಥಾನದಲ್ಲಿದೆ ಎಂದು ವರದಿ ಹೇಳಿದೆ.

ಸಾಫ್ಟ್‌ವೇರ್ ನವೀಕರಣ: ಆ್ಯಂಡ್ರಾಯ್ಡ್ ಐಫೋನ್ ಬಳಕೆದಾರರಿಗೆ ತೊಂದರೆ

ನವದೆಹಲಿ (ಪಿಟಿಐ): ಇತ್ತೀಚಿನ ಸಾಫ್ಟ್‌ವೇರ್ ನವೀಕರಣದಿಂದಾಗಿ ದೇಶದಲ್ಲಿನ ಶೇ 60ರಷ್ಟು ಐಫೋನ್ ಬಳಕೆದಾರರು ಮತ್ತು ಶೇ 40ರಷ್ಟು ಆ್ಯಂಡ್ರಾಯ್ಡ್ ಫೋನ್ ಬಳಕೆದಾರರು ಸೇವೆಗಳಲ್ಲಿ ಸಮಸ್ಯೆಗಳನ್ನು ಅನುಭವಿಸಿದ್ದಾರೆ ಎಂದು ಲೋಕಲ್ ಸರ್ಕಲ್ ಸಂಸ್ಥೆ ವರದಿ ಭಾನುವಾರ ತಿಳಿಸಿದೆ.

ಕರೆ ವೈಫಲ್ಯವು ಐಫೋನ್ ಬಳಕೆದಾರರು ಎದುರಿಸುತ್ತಿರುವ ದೊಡ್ಡ ಸಮಸ್ಯೆಯಾಗಿದೆ. ಸಾಮಾನ್ಯ ಕರೆ ಅಥವಾ ಆ್ಯಪ್ ಆಧರಿತ ಕರೆ ಮಾಡುವಾಗ ಕರೆ ವಿಫಲಗೊಳ್ಳುತ್ತಿದೆ. ಆ್ಯಂಡ್ರಾಯ್ಡ್ ಬಳಕೆದಾರರಿಗೆ ಆ್ಯಪ್‌ಗಳು ನಿಷ್ಕ್ರಿಯಗೊಳ್ಳುತ್ತಿವೆ ಎಂದು ತಿಳಿಸಿದೆ.

10 ಆ್ಯಪಲ್ ಐಫೋನ್ ಬಳಕೆದಾರರಲ್ಲಿ 6 ಐಫೋನ್ ಬಳಕೆದಾರರು ಐಒಎಸ್ 18 ಅನ್ನು ಅಪ್‌ಗ್ರೇಡ್ ಮಾಡಿಕೊಂಡಿದ್ದಾರೆ. ಐಒಎಸ್ 18 ಎನ್ನುವುದು ಅತ್ಯಾಧುನಿಕ ಕಾರ್ಯಾಚರಣಾ ವ್ಯವಸ್ಥೆಯಾಗಿದ್ದು, ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಭಾರತದಲ್ಲಿ ಬಿಡುಗಡೆಯಾಗಿತ್ತು.

ಕಳೆದ ವರ್ಷದ ನವೆಂಬರ್ 12ರಿಂದ ಡಿಸೆಂಬರ್ 26ರ ಅವಧಿಯಲ್ಲಿ ದೇಶದ 322 ಜಿಲ್ಲೆಗಳಿಂದ 47 ಸಾವಿರಕ್ಕೂ ಹೆಚ್ಚು ಪ್ರತಿಕ್ರಿಯೆಗಳನ್ನು ಗ್ರಾಹಕರಿಂದ ಪಡೆಯಲಾಗಿತ್ತು. 31 ಸಾವಿರ ಪ್ರತಿಕ್ರಿಯೆಗಳು ಆ್ಯಪಲ್ ಐಫೋನ್‌ಗೆ ಸಂಬಂಧಿಸಿದ್ದರೆ, 16 ಸಾವಿರ ಪ್ರತಿಕ್ರಿಯೆಗಳು ಆ್ಯಂಡ್ರಾಯ್ಡ್ ಫೋನ್‌ಗೆ ಸಂಬಂಧಿಸಿವೆ ಎಂದು ವರದಿ ಹೇಳಿದೆ.

ಆ್ಯಂಡ್ರಾಯ್ಡ್ 15 ನವೀಕರಣ ಮಾಡಿಕೊಂಡಿರುವ 10 ಬಳಕೆದಾರರಲ್ಲಿ 4 ಬಳಕೆದಾರರು ಸಮಸ್ಯೆ ಎದುರಿಸುತ್ತಿದ್ದಾರೆ. 10 ಆ್ಯಪಲ್ ಐಫೋನ್ ಬಳಕೆದಾರರಲ್ಲಿ ಸುಮಾರು 9 ಜನರು ತಾವು ಎದುರಿಸುತ್ತಿರುವ ತೊಂದರೆಗೆ ಐಒಎಸ್ ಅಪ್‌ಡೇಟ್ ಕಾರಣವೆಂದು ಸಮೀಕ್ಷೆಯಲ್ಲಿ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಮತ್ತು ಭೂಶಾಂತಿ ಆಹ್ವಾನ ಪತ್ರಿಕೆ

ಶ್ರೀ ಶಂಕರೇಗೌಡರು
ಶ್ರೀ ನೇರಲಕೆರಮ್ಮ ದೇವಿ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷರು
ನಿಧನ: 05-01-2025ನೇ ಭಾನುವಾರ
ತಾ|| 15/01/2025ನೇ ಬುಧವಾರ ಬೆಳಿಗ್ಗೆ 8:00ಕ್ಕೆ ಹಾಲುತುಪ್ಪ ಹಾಗೂ 11:00 ಗಂಟೆಗೆ ಉತ್ತರ ಕ್ರಿಯಾಧಿ ಮತ್ತು ಭೂಶಾಂತಿ ಕಾರ್ಯಗಳನ್ನು ಪಿ. ನೇರಲಕೆರೆ ಗ್ರಾಮದ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದ್ದು, ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲು ವಿನಂತಿ.
ಇಂತಿ ದುಃಖಭಾಗಿಗಳು :
ಮೃತರ ಪತ್ನಿ ರೋಹಿಣಿ, ಗಂಡುಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಪಿ. ನೇರಲಕೆರೆ ಗ್ರಾಮಸ್ಥರು ಹಾಗೂ ಬಂಧುವರ್ಗದವರು

ಐದು ಕಂಪನಿಗಳ ಎಂ–ಕ್ಯಾಪ್ ₹1.85 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಇಳಿಕೆಯಿಂದ ಪ್ರಮುಖ 10 ಕಂಪನಿಗಳ ಪೈಕಿ 5 ಕಂಪನಿಗಳ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹1.85 ಲಕ್ಷ ಕೋಟಿ ಕರಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹70,479 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹12.67 ಲಕ್ಷ ಕೋಟಿಗೆ ಇಳಿದಿದೆ. ಐಟಿಸಿ ₹46,481 ಕೋಟಿ, ಎಸ್‌ಬಿಐ ₹44,935 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹12,179 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹11,877 ಕೋಟಿ ಕರಗಿದೆ.

ಟಿಸಿಎಸ್ ಮಾರುಕಟ್ಟೆ ಮೌಲ್ಯಕ್ಕೆ ₹60,168 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹15.43 ಲಕ್ಷ ಕೋಟಿಯಾಗಿದೆ. ಎಚ್‌ಸಿಎಲ್ ₹13,120 ಕೋಟಿ, ಇನ್ಫೊಸಿಸ್ ₹11,792 ಕೋಟಿ, ಭಾರ್ತಿ ಏರ್‌ಟೆಲ್ ₹8,999 ಕೋಟಿ, ಹಿಂದುಸ್ತಾನ್ ಯುನಿಲಿವರ್ ಮಾರುಕಟ್ಟೆ ಮೌಲ್ಯಕ್ಕೆ ₹8,564 ಕೋಟಿ ಸೇರ್ಪಡೆಯಾಗಿದೆ.

ಟ್ರಂಪ್ ಪದಗ್ರಹಣ: ಜೈಶಂಕರ್ ಭಾಗಿ

ನವದೆಹಲಿ (ಪಿಟಿಐ): ಅಮೆರಿಕದ 47ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಜ.20ರಂದು ಅಧಿಕಾರ ಸ್ವೀಕರಿಸಲಿದ್ದು, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಭಾರತದ ಪ್ರತಿನಿಧಿಯಾಗಿ ಪದಗ್ರಹಣ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

ವಿದೇಶಾಂಗ ಸಚಿವರು ತಮ್ಮ ಅಮೆರಿಕ ಭೇಟಿಯ ಸಂದರ್ಭದಲ್ಲಿ ಟ್ರಂಪ್ ಆಡಳಿತದ ನೂತನ ಪ್ರತಿನಿಧಿ ಗಳೊಂದಿಗೆ ಸಭೆ ನಡೆಸಲಿದ್ದಾರೆ ಎಂದು ಸಚಿವಾಲಯವು ಭಾನುವಾರ ತಿಳಿಸಿದೆ. ಇದೇ ವೇಳೆ ಉಪಾಧ್ಯಕ್ಷರಾಗಿ ಜೆ.ಡಿ. ವ್ಯಾನ್ಸ್ ಅಧಿಕಾರ ಸ್ವೀಕರಿಸಲಿದ್ದಾರೆ. ಇವರು ಆಂಧ್ರಪ್ರದೇಶದ ಅಳಿಯ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Hotel

ಸಹಾಯಕರು ಬೇಕಾಗಿದ್ದಾರೆ. (45 ವರ್ಷದೊಳಗಿನ ಪುರುಷರು) ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಭಾರತಪರಂಪರ ದರ್ಶನ: 10.2.25 7ದಿನ ನವಗ್ರಹಸಹಿತ ರಾಮೇಶ್ವರಂ. 8.3.25 7ದಿನ ಕಾಶಿ,ಅಯೋಧ್ಯ,ಗಯಾ. 17.3.25 11ದಿನ ಮುಕ್ತಿನಾಥ್ ಸಹಿತ ಕಾಶಿ,ಅಯೋಧ್ಯ. ಪ್ರಕಾಶ್ ಹೆಬ್ಬಾರ್ 9448792891.

21.1.2025, 4 ದಿನಗಳು ಮಂತ್ರಾಲಯ, ಶ್ರೀಶೈಲ, ಮಹಾನಂದಿ, ಅಹೋಬಲ, ಯಾಗಂಟಿ, ಸಾಕ್ಷಿಗಣಪತಿ,ಇತ್ಯಾದಿ. ಓಂ ಸಾಯಿ ರಾಮ್ ಟೂರ್ಸ್, 9481433157

ಸೋಮನಾಥ್ ದ್ವಾರಕಾ ಮಾತ್ರಗಯಾ,ಉಜ್ಜಯಿನಿ ಓಂಕಾರೇಶ್ವರ್ 07.02.2025 14.02.2025 ರಿಂದ 10 ದಿನಗಳು. ಅಯೋಧ್ಯ ಪ್ರಯಾಗ್ ರಾಜ್ ಕಾಶಿ,ಗಯಾ, ಬೈದ್ಯನಾಥಧಾಮ್ 06.03.2025 ರಿಂದ 7 ದಿನಗಳು. ಅಹಮದಾಬಾದ್ ಬುಜ್ ಕಚ್‌ಆಫ್‌ರನ್ ಸೋಮನಾಥ್ ದ್ವಾರಕಾ,ಮೊಢೇರ 10 ದಿನಗಳು. ಜೈಪುರ್ ಬಿಕನೇರ್,ಜೈಸಲ್‌ಮೇರ್ ಜೋದ್‌ಪುರ್ ಮೌಂಟ್‌ಅಬು ಉದಯಪುರ್,ಪುಷ್ಕರ್ 10 ದಿನಗಳು. ಗ್ವಾಲಿಯರ್ ಖಜರಾಹೋ ಮಾರ್ಬಲ್‌ರಾಕ್ಸ್ ಜಬಲ್‌ಪುರ್ ಉಜ್ಜಯಿನಿ,ಓಂಕಾರೇಶ್ವರ್ ಇಂದೋರ್ 10ದಿನಗಳು. 27.03.2025 10.04.2025 18.04.2025 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

14.02.2025 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. 06.03.2025 ಕಾಶಿ,ಅಯೋಧ್ಯ ಬುದ್ಧಗಯಾ,ಅಲಹಾಬಾದ್. 02.04.2025 ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಗುಲ್ಮಾರ್ಗ್. 23.04.2025 ಚಾರ್-ಧಾಮ್ ಸಮೇತ ಪ್ರವಾಸ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 9448508708 9686708171

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
BOOK NOW
@ 500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಮಾರುಕಟ್ಟೆ ಮೌಲ್ಯ ಪತ್ತೆ ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಭಾರತೀಯ ಷೇರು ಮಾರುಕಟ್ಟೆಯಲ್ಲಿನ ಕಂಪನಿಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಒಂದನೆಯದು ಲಾರ್ಜ್ ಕ್ಯಾಪ್, ಎರಡನೆಯದು ಮಿಡ್ ಕ್ಯಾಪ್ ಮತ್ತು ಮೂರನೆಯದು ಸ್ಮಾಲ್ ಕ್ಯಾಪ್. ಈ ಮೂರು ರೀತಿಯ ವಿಂಗಡಣೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಮೊದಲಿಗೆ ಮಾರ್ಕೆಟ್ ಕ್ಯಾಪ್ ಎಂದರೆ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಕಂಪನಿಯೊಂದರ ಮೌಲ್ಯ ಎಷ್ಟು ಎಂದು ತಿಳಿಸುವ ಮಾನದಂಡವನ್ನು ಸರಳವಾಗಿ ಮಾರುಕಟ್ಟೆ ಮೌಲ್ಯ (ಮಾರ್ಕೆಟ್ ಕ್ಯಾಪಿಟಲೈಸೇಷನ್) ಅಂತ ಕರೆಯಬಹುದು. ಮಾರುಕಟ್ಟೆ ಮೌಲ್ಯ ಮೂಲಕ ಕಂಪನಿ ಯಾವ ಗಾತ್ರದ್ದು ಅಥವಾ ಎಷ್ಟು ದೊಡ್ಡದು ಎಂದು ತಿಳಿಯಬಹುದು. ನಿರ್ದಿಷ್ಟ ಕಂಪನಿಯೊಂದರ ಒಟ್ಟು ಷೇರುಗಳನ್ನು ಆ ಕಂಪನಿಯ ಷೇರಿನ ಪ್ರಸುತ ಬೆಲೆಯೊಂದಿಗೆ ಗುಣಿಸಿದಾಗ ಮಾರುಕಟ್ಟೆ ಮೌಲ್ಯ ತಿಳಿಯುತ್ತದೆ. ಕಂಪನಿಯ ಷೇರಿನ ಬೆಲೆಯಲ್ಲಿ ಏರಿಳಿತವಾದಾಗ ಮಾರುಕಟ್ಟೆ ಮೌಲ್ಯವೂ ಬದಲಾಗುತ್ತದೆ.

ಮಾರುಕಟ್ಟೆ ಮೌಲ್ಯ ತಿಳಿಯಲು ಸೂತ್ರ: (ಕಂಪನಿಯೊಂದರ ಒಟ್ಟು ಷೇರುಗಳು) x (ಷೇರಿನ ಪ್ರಸ್ತುತ ಬೆಲೆ) = (ಮಾರುಕಟ್ಟೆ ಮೌಲ್ಯ).

ಉದಾಹರಣೆ 1: 2025ರ ಜನವರಿಯಂದು ಎಂಆರ್‌ಎಫ್ ಕಂಪನಿಯ ಒಟ್ಟು ಷೇರುಗಳ ಸಂಖ್ಯೆ 42,41,114. ಜನವರಿ 9ರಂತೆ ಎಂಆರ್‌ಎಫ್ ಷೇರಿನ ಬೆಲೆ ₹1,18,885. ಈಗ 42,41,114 ಅನ್ನು ₹1,18,885ರೊಂದಿಗೆ ಗುಣಿಸಿದಾಗ ₹50,420 ಕೋಟಿ ಆಗುತ್ತದೆ. ಅಂದರೆ ಈ ಲೆಕ್ಕಾಚಾರದಂತೆ ಎಂಆರ್‌ಎಫ್ ಕಂಪನಿಯ ಮಾರುಕಟ್ಟೆ ಮೌಲ್ಯ 2025ರ ಜನವರಿ 9ಕ್ಕೆ ಅನ್ವಯವಾಗುವಂತೆ ₹50,420 ಕೋಟಿ.

ಉದಾಹರಣೆ 2: 2025ರ ಜನವರಿಯಲ್ಲಿ ಜೆ.ಕೆ ಪೇಪರ್ ಕಂಪನಿಯ ಒಟ್ಟು ಷೇರುಗಳ ಸಂಖ್ಯೆ 16,93,14,888. ಜನವರಿ 9ರಂತೆ ಜೆ.ಕೆ ಪೇಪರ್ ಷೇರಿನ ಬೆಲೆ ₹405.90. ಈಗ 169,314,888 ಅನ್ನು ₹405.90ರೊಂದಿಗೆ ಗುಣಿಸಿದಾಗ ಸುಮಾರು ₹6,872 ಕೋಟಿ ಆಗುತ್ತದೆ. ಅಂದರೆ ಈ ಲೆಕ್ಕಾಚಾರದಂತೆ ಜೆ.ಕೆ ಪೇಪರ್ ಕಂಪನಿಯ ಮಾರುಕಟ್ಟೆ ಮೌಲ್ಯ 2025ರ ಜನವರಿ 9ಕ್ಕೆ ಅನ್ವಯವಾಗುವಂತೆ ₹6,872 ಕೋಟಿ.

ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ನಿರ್ಧಾರಕ್ಕೆ ಮಾರುಕಟ್ಟೆ ಮೌಲ್ಯ ಆಧಾರ: ಷೇರು ಮಾರುಕಟ್ಟೆಯಲ್ಲಿರುವ ನಿರ್ದಿಷ್ಟ ಕಂಪನಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಮಿತಿಯಲ್ಲಿ ಬರುವುದೋ ಎನ್ನುವುದನ್ನು ಅರಿಯಲು ಮಾರುಕಟ್ಟೆ ಮೌಲ್ಯ ಆಧಾರವಾಗುತ್ತದೆ. ಷೇರುಪೇಟೆ ನಿಯಂತ್ರಣ ಮಂಡಳಿಯ ಪ್ರಕಾರ ಷೇರುಪೇಟೆ ಸೂಚ್ಯಂಕಕ್ಕೆ ಸೇರ್ಪಡೆಗೊಂಡಿರುವ ಅಗ್ರಮಾನ ನೂರು ದೊಡ್ಡ ಕಂಪನಿಗಳು ಲಾರ್ಜ್ ಕ್ಯಾಪ್ ಷೇರುಗಳು ಎನಿಸಿ ಕೊಳ್ಳುತ್ತವೆ. ನಂತರದ 101 ರಿಂದ 250 ಒಳಗೆ ಬರುವ ಕಂಪನಿಗಳು ಮಿಡ್ ಕ್ಯಾಪ್ (ಮಧ್ಯಮ ಗಾತ್ರ) ಷೇರುಗಳಾಗುತ್ತವೆ. ಷೇರು ಮಾರುಕಟ್ಟೆಯಲ್ಲಿ 250ನೇ ಕ್ರಮಾಂಕದ ನಂತರ ಬರುವ ಷೇರುಗಳನ್ನು ಸ್ಮಾಲ್ ಕ್ಯಾಪ್ (ಸಣ್ಣ ಗಾತ್ರ) ಎಂದು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಲಾರ್ಜ್ ಕ್ಯಾಪ್ ಕಂಪನಿಗಳ ಮಾರುಕಟ್ಟೆ ಮೌಲ್ಯ ₹60 ಸಾವಿರ ಕೋಟಿಗಿಂತ ಹೆಚ್ಚಿಗೆ ಇರುತ್ತದೆ. ಮಿಡ್ ಕ್ಯಾಪ್ ಕಂಪನಿಗಳ ಮಾರುಕಟ್ಟೆ ಮೌಲ್ಯ ₹12 ಸಾವಿರ ಕೋಟಿಯಿಂದ ₹60 ಸಾವಿರ ಕೋಟಿಯ ಒಳಗೆ ಬರುತ್ತದೆ. ಇನ್ನು ₹12 ಸಾವಿರ ಕೋಟಿಗಿಂತ ಕಡಿಮೆ ಮಾರುಕಟ್ಟೆ ಮೌಲ್ಯ ಹೊಂದಿರುವ ಕಂಪನಿಗಳು ಸ್ಮಾಲ್ ಕ್ಯಾಪ್ ವ್ಯಾಪ್ತಿಗೆ ಸೇರುತ್ತವೆ.

ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗೆ ಉದಾಹರಣೆಗಳು: ಎಚ್‌ಡಿಎಫ್‌ಸಿ ಬ್ಯಾಂಕ್, ಏಷ್ಯನ್ ಪೇಂಟ್ಸ್, ರಿಲಯನ್ಸ್, ಹಿಂದುಸ್ತಾನ್ ಯುನಿಲಿವರ್, ಮಾರುತಿ ಸುಜುಕಿ, ಇನ್ಫೊಸಿಸ್ ಲಾರ್ಜ್ ಕ್ಯಾಪ್ ಕಂಪನಿಗಳಿಗೆ ಕೆಲ ಉದಾಹರಣೆಗಳು. ಅಶೋಕ್ ಲೇಲ್ಯಾಂಡ್, ಕೋಲ್ಗೇಟ್ ಪಾಮೋಲಿವ್ ಇಂಡಿಯಾ ಲಿಮಿಟೆಡ್, ಪಾಲಿಕ್ಯಾಬ್ ಇಂಡಿಯಾ ಲಿಮಿಟೆಡ್, ಅಪೋಲೊ ಟೈರ್ಸ್, ಬ್ಯಾಂಕ್ ಆಫ್ ಇಂಡಿಯಾ, ವೋಲ್ಟಾಸ್ ಮಿಡ್ ಕ್ಯಾಪ್ ಷೇರುಗಳ ವ್ಯಾಪ್ತಿಗೆ ಬರುತ್ತವೆ. ಇನ್ನು ಫಿನೋಲೆಕ್ಸ್ ಕೇಬಲ್ಸ್, ಪಿವಿಆರ್ ಐನಾಕ್ಸ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ನಾರಾಯಣ ಹೃದಯಾಲಯ, ಬಿಇಎಂಎಲ್ ಲಿಮಿಟೆಡ್, ಏಂಜಲ್ ಒನ್ ಸ್ಮಾಲ್ ಕ್ಯಾಪ್ ಕಂಪನಿಗಳಿಗೆ ಕೆಲ ಉದಾಹರಣೆಗಳು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಮಾರಾಟದ ಒತ್ತಡಕ್ಕೆ ನಲುಗಿದ ಷೇರುಪೇಟೆ

ಜನವರಿ 10ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸಿವೆ. 77,378 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.33ರಷ್ಟು ಇಳಿಕೆಯಾಗಿದೆ. 23,431 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.39 ರಷ್ಟು ತಗ್ಗಿದೆ. ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 5.77ರಷ್ಟು ಕುಸಿದಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 7.29 ರಷ್ಟು ಕೆಳಗಿಳಿದಿದೆ. ರೂಪಾಯಿ ಮೌಲ್ಯ ಕುಸಿತ, 3ನೇ ತ್ರೈಮಾಸಿಕ ಅವಧಿಯಲ್ಲಿ ಕಂಪನಿಗಳ ಗಳಿಕೆಗೆ ಹಿನ್ನಡೆಯಾಗಲಿದೆ ಎಂಬ ಅಂದಾಜು, ವಿದೇಶಿ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಮಾತ್ರ ಶೇ 4.42 ರಷ್ಟು ಗಳಿಸಿಕೊಂಡಿದ್ದು ಉಳಿದೆಲ್ಲ ಸೂಚ್ಯಂಕಗಳು ನೆಲಕಚ್ಚಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 8.07, ರಿಯಲ್ ಎಸ್ಟೇಟ್ ಶೇ 7.83, ಮಾಧ್ಯಮ ಶೇ 6.34, ಲೋಹ ಶೇ 5.35, ಬ್ಯಾಂಕ್ ನಿಫ್ಟಿ ಶೇ 4.42, ಫೈನಾನ್ಸ್ ಶೇ 4.24, ವಾಹನ ಉತ್ಪಾದನೆ ಶೇ 4.11, ಫಾರ್ಮಾ ಶೇ 3.79 ಮತ್ತು ಎಫ್‌ಎಂಸಿಜಿ ಶೇ 1.21 ರಷ್ಟು ಕುಸಿದಿವೆ.

ಇಳಿಕೆ – ಗಳಿಕೆ: ನಿಫ್ಟಿಯಲ್ಲಿ ಶ್ರೀರಾಮ್ ಫೈನಾನ್ಸ್ ಶೇ 12.73, ಟ್ರೆಂಟ್ ಶೇ 9.92, ಎನ್‌ಟಿಪಿಸಿ ಶೇ 9.31, ಟಾಟಾ ಸ್ಟೀಲ್ ಶೇ 7.88, ಅಲ್ಟ್ರಾಟೆಕ್ ಸಿಮೆಂಟ್ ಶೇ 7.52, ಅದಾನಿ ಎಂಟರ್‌ಪ್ರೈಸಸ್ ಶೇ 7.43, ಭಾರತ್ ಎಲೆಕ್ಟ್ರಾನಿಕ್ಸ್ ಶೇ 7.18, ಅದಾನಿ ಪೋರ್ಟ್ಸ್ ಶೇ 7.17, ಕೋಲ್ ಇಂಡಿಯಾ ಶೇ 6.42, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 6.35, ಬಿಪಿಸಿಎಲ್ ಶೇ 6.33 ಮತ್ತು ಇಂಡಸ್‌ಇಂಡ್ ಬ್ಯಾಂಕ್ ಶೇ 6.06 ರಷ್ಟು ಕುಸಿದಿವೆ.

ಟಿಸಿಎಸ್ ಶೇ 4.06, ಟಾಟಾ ಕನ್ಸ್ಯೂಮರ್ ಶೇ 3.47, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 2.48, ಬ್ರಿಟಾನಿಯಾ ಶೇ 2.1, ವಿಪ್ರೊ ಶೇ 2.09, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 1.9, ಒಎನ್‌ಜಿಸಿ ಶೇ 1.76, ಹಿಂದುಸ್ತಾನ್ ಯುನಿಲಿವರ್ ಶೇ 1.52, ಇನ್ಫೊಸಿಸ್ ಶೇ 1.37, ಏರ್‌ಟೆಲ್ ಶೇ 1.32, ಟೆಕ್ ಮಹೀಂದ್ರ ಶೇ 0.82 ಮತ್ತು ನೆಸ್ಲೆ ಇಂಡಿಯಾ ಶೇ 0.6ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಎಚ್‌ಸಿಎಲ್ ಟೆಕ್ನಾಲಜೀಸ್, ಏಂಜಲ್ ಒನ್, ಡೆಲ್ಟಾ ಕಾರ್ಪ್, ಸಿಯೆಟ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಇನ್ಫೊಸಿಸ್, ಎಕ್ಸಿಸ್ ಬ್ಯಾಂಕ್, ಹ್ಯಾವೆಲ್ಸ್ ಇಂಡಿಯಾ, ವಿಪ್ರೊ, ಕೋಟಕ್ ಮಹೀಂದ್ರ ಬ್ಯಾಂಕ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸಲಿವೆ. ಬಜೆಟ್ ಮಂಡನೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿ ದರದ ಕುರಿತಾಗಿ ಫೆಬ್ರುವರಿಯಲ್ಲಿ ಯಾವ ನಿರ್ಣಯ ತೆಗೆದುಕೊಳ್ಳಲಿದೆ ಎಂಬ ವಿಚಾರ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಛತ್ತೀಸಗಢದಲ್ಲಿ ₹65 ಸಾವಿರ ಕೋಟಿ ಹೂಡಿಕೆ: ಅದಾನಿ ಘೋಷಣೆ

ರಾಯಪುರ (ಪಿಟಿಐ): ಕೈಗಾರಿಕೋದ್ಯಮಿ ಗೌತಮ್ ಅದಾನಿ ಹಾಗೂ ಛತ್ತೀಸಗಢ ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ಭಾನುವಾರ ಭೇಟಿಯಾಗಿದ್ದಾರೆ. ಈ ವೇಳೆ ರಾಜ್ಯದಲ್ಲಿ ಅದಾನಿ ಸಮೂಹದ ಇಂಧನ ಹಾಗೂ ಸಿಮೆಂಟ್ ಕ್ಷೇತ್ರದಲ್ಲಿ ₹65 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಅದಾನಿ ಘೋಷಿಸಿದ್ದಾರೆ.

ರಾಜಧಾನಿ ರಾಯಪುರದಲ್ಲಿರುವ ಮುಖ್ಯಮಂತ್ರಿಗಳ ನಿವಾಸದಲ್ಲಿ ಭೇಟಿ ನಡೆಯಿತು ಎಂದು ರಾಜ್ಯ ಸಾರ್ವಜನಿಕ ಸಂಪರ್ಕ ಇಲಾಖೆ ಹೇಳಿದೆ.

ರಾಯಪುರ, ಕೊರ್ಬಾ ಹಾಗೂ ರಾಯಗಢದಲ್ಲಿರುವ ವಿದ್ಯುತ್ ಸ್ಥಾವರಗಳ ವಿಸ್ತರಣೆಗೆ ₹60 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಅದಾನಿ ಘೋಷಿಸಿದ್ದಾರೆ. ಇದರಿಂದ ಹೆಚ್ಚುವರಿಯಾಗಿ 6,120 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನೆ ಆಗಲಿದೆ.

ಅಲ್ಲದೆ ರಾಜ್ಯದಲ್ಲಿರುವ ಸಿಮೆಂಟ್ ತಯಾರಿಕಾ ಘಟಕಗಳ ವಿಸ್ತರಣೆಗೆ ₹5 ಸಾವಿರ ಕೋಟಿ ಹೂಡಿಕೆ ಮಾಡಲಿದೆ.

ಇದರ ಜೊತೆಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಶಿಕ್ಷಣ, ಆರೋಗ್ಯ, ಕೌಶಲ ಅಭಿವೃದ್ಧಿ ಮತ್ತು ಪ್ರವಾಸೋದ್ಯಮಕ್ಕೆ ಮುಂದಿನ ನಾಲ್ಕು ವರ್ಷಗಳಲ್ಲಿ ರಾಜ್ಯ ಸರ್ಕಾರಕ್ಕೆ ₹10 ಸಾವಿರ ಕೋಟಿ ನೀಡುವುದಾಗಿ ಅದಾನಿ ಹೇಳಿದ್ದಾಗಿ ಇಲಾಖೆ ತಿಳಿಸಿದೆ.

ಭದ್ರತೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಉದ್ಘಾಟಿಸಲಿರುವ ಸೋನಾಮಾರ್ಗ್‌ನ ಝಡ್-ಮೋರ್ಹ್ ಸುರಂಗ ಯೋಜನೆ ಬಳಿ ಭದ್ರತಾ ಸಿಬ್ಬಂದಿ ಕಾವಲು ಕಾಯುತ್ತಿರುವುದು– ಪಿಟಿಐ ಚಿತ್ರ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹508-677
ದ್ವಿತಳಿ (ಬಿ.ವಿ)	₹155-788

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ಬಾಂಗ್ಲಾ: 5 ಸ್ಥಳಗಳಲ್ಲಿ ತಂತಿ ಬೇಲಿ ನಿರ್ಮಾಣಕ್ಕೆ ವಿರೋಧ

ಗಡಿಯಲ್ಲಿ ಉದ್ವಿಗ್ನ: ಭಾರತದ ರಾಯಭಾರಿಗೆ ಸಮನ್ಸ್

ಢಾಕಾ (ಪಿಟಿಐ): ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿರುವ ಹಿನ್ನೆಲೆಯಲ್ಲಿ ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯವು ಭಾನುವಾರ ಭಾರತದ ರಾಯಭಾರಿ ಪ್ರಣಯ್ ವರ್ಮಾ ಅವರನ್ನು ಕಚೇರಿಗೆ ಕರೆಸಿಕೊಂಡು ಎಚ್ಚರಿಕೆ ನೀಡಿದೆ.

ದ್ವಿಪಕ್ಷೀಯ ಒಪ್ಪಂದ ಉಲ್ಲಂಘಿಸಿ ಭಾರತ-ಬಾಂಗ್ಲಾ ಗಡಿಯಲ್ಲಿ, ಐದು ಸ್ಥಳಗಳಲ್ಲಿ ತಂತಿ ಬೇಲಿ ನಿರ್ಮಿಸಲು ಭಾರತ ಪ್ರಯತ್ನಿಸುತ್ತಿದೆ ಎಂದು ಬಾಂಗ್ಲಾದೇಶ ಆರೋಪಿಸಿದ ಕೆಲವೇ ಗಂಟೆಗಳ ನಂತರ ಈ ಬೆಳವಣಿಗೆ ನಡೆದಿದೆ.

ವರ್ಮಾ ಅವರು ಸ್ಥಳೀಯ ಕಾಲಮಾನ ಮಧ್ಯಾಹ್ನ 3 ಗಂಟೆ ಸುಮಾರಿಗೆ ವಿದೇಶಾಂಗ ಸಚಿವಾಲಯಕ್ಕೆ ಭೇಟಿ ನೀಡಿದರು. ವಿದೇಶಾಂಗ ಕಾರ್ಯದರ್ಶಿ ಜಾಶಿಮ್ ಉದ್ದೀನ್ ಮತ್ತು ವರ್ಮಾ ಅವರು ಸುಮಾರು 45 ನಿಮಿಷ ಸಭೆ ನಡೆಸಿದರು ಎಂದು ಸರ್ಕಾರಿ ಸುದ್ದಿ ಸಂಸ್ಥೆ 'ಬಿಎಸ್‌ಎಸ್' ವರದಿ ಮಾಡಿದೆ.

ಸಭೆಯಲ್ಲಿ ನಡೆದಿರುವ ಚರ್ಚೆಯ ಬಗ್ಗೆ ಮಧ್ಯಂತರ ಸರ್ಕಾರವು ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆ ಮಾಡದಿದ್ದರೂ ಅಧಿಕಾರಿಗಳು ರಾಯಭಾರಿ ಕರೆಸಿದ್ದನ್ನು ದೃಢಪಡಿಸಿದೆ.

> **ಚಪೈನವಾಬ್‌ಗಂಜ್, ನೌಗಾಂವ್, ಲಾಲ್ಮೊನಿರ್ಹಾಟ್, ಟಿನ್ ಬಿಘಾ ಕಾರಿಡಾರ್ ಸೇರಿ 5 ಪ್ರದೇಶಗಳಲ್ಲಿ ಸಂಘರ್ಷ ಕಾಣಿಸಿದೆ. ಬಿಜಿಬಿ, ಸ್ಥಳೀಯರು ಬೇಲಿ ನಿರ್ಮಿಸದಂತೆ ತಡೆದಿದ್ದಾರೆ**
> **ಜಹಾಂಗೀರ್ ಆಲಂ ಚೌಧರಿ,**
> ಬಾಂಗ್ಲಾದೇಶದ ಗೃಹ ವ್ಯವಹಾರಗಳ ಸಲಹೆಗಾರ

ಸಭೆ ಮುಗಿಸಿ ಹೊರಬಂದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಪ್ರಣಯ್ ವರ್ಮಾ, 'ಭದ್ರತೆಗಾಗಿ ಗಡಿಯಲ್ಲಿ ಬೇಲಿ ನಿರ್ಮಿಸುವ ಸಂಬಂಧ ಉಭಯ ರಾಷ್ಟ್ರಗಳ ನಡುವೆ ಒಪ್ಪಂದಗಳಾಗಿವೆ' ಎಂದರು.

'ಗಡಿ ಕಾವಲು ಪಡೆಗಳಾದ ಬಿಎಸ್‌ಎಫ್ ಮತ್ತು ಬಿಜಿಬಿ (ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಮತ್ತು ಬಾರ್ಡರ್ ಗಾರ್ಡ್ ಬಾಂಗ್ಲಾದೇಶ) ಈ ನಿಟ್ಟಿನಲ್ಲಿ ಮಾತುಕತೆ ನಡೆಸುತ್ತಿವೆ. ಗಡಿಯುದ್ದಕ್ಕೂ ಅಪರಾಧಗಳನ್ನು ತಡೆಗಟ್ಟಲು ಪರಸ್ಪರ ಸಹಕಾರಿ ವಿಧಾನವಿದೆ. ಹಾಗಾಗಿ, ಈ ಒಪ್ಪಂದವನ್ನು ಕಾರ್ಯಗತಗೊಳಿಸುತ್ತೇವೆ. ಇದನ್ನು ಬಾಂಗ್ಲಾ ಕೂಡ ಅರ್ಥ ಮಾಡಿಕೊಳ್ಳುತ್ತದೆ ಎಂದು ನಾವು ನಿರೀಕ್ಷಿಸಿದ್ದೇವೆ' ಎಂದರು.

ಬಾಂಗ್ಲಾದೇಶದ ಗೃಹ ವ್ಯವಹಾರಗಳ ಸಲಹೆಗಾರ, ನಿವೃತ್ತ ಲೆಫ್ಟಿನೆಂಟ್ ಜನರಲ್ ಜಹಾಂಗೀರ್ ಆಲಂ ಚೌಧರಿ ಅವರು ಬಾಂಗ್ಲಾದೇಶ ಗಡಿ ಕಾವಲು ಪಡೆ ಮತ್ತು ಸ್ಥಳೀಯರ ತೀವ್ರ ವಿರೋಧದಿಂದಾಗಿ ಗಡಿಯಲ್ಲಿ ಮುಳ್ಳುತಂತಿ ಬೇಲಿ ನಿರ್ಮಾಣವನ್ನು ಭಾರತ ಸ್ಥಗಿತಗೊಳಿಸಿದೆ ಎಂದು ಶನಿವಾರವಷ್ಟೇ ಹೇಳಿದ್ದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಚೌಧರಿ, ಹಿಂದಿನ ಸರ್ಕಾರದ ಅವಧಿಯಲ್ಲಿ ಸಹಿ ಹಾಕಲಾದ ಕೆಲವು ಅಸಮಾನ ಒಪ್ಪಂದಗಳಿಂದಾಗಿ ಬಾಂಗ್ಲಾದೇಶ-ಭಾರತದ ಗಡಿಯಲ್ಲಿ ಹಲವು ಸಮಸ್ಯೆಗಳು ಉದ್ಭವಿಸಿವೆ ಎಂದು ಹೇಳಿದರು. ಬಾಂಗ್ಲಾದೇಶದ ಜತೆಗೆ ಹಂಚಿಕೊಂಡಿರುವ 4,156 ಕಿಲೋಮೀಟರ್ ಉದ್ದದ ಗಡಿಯಲ್ಲಿ ಭಾರತವು ಈಗಾಗಲೇ 3,271 ಕಿಲೋಮೀಟರ್‌ವರೆಗೆ ಬೇಲಿ ಹಾಕಿದೆ.

ಪಾಕಿಸ್ತಾನೀಯರಿಗೆ ವೀಸಾ ಸರಳಗೊಳಿಸಿದ ಬಾಂಗ್ಲಾ

ಲಾಹೋರ್ (ಪಿಟಿಐ): ಉಭಯ ದೇಶಗಳ ನಡುವೆ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಬಲಪಡಿಸುವ ಸಲುವಾಗಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಪಾಕಿಸ್ತಾನದ ಪ್ರಜೆಗಳಿಗೆ ವೀಸಾ ನೀಡುವ ಪ್ರಕ್ರಿಯೆ ಸರಳಗೊಳಿಸಿದೆ.

ವೀಸಾ ನೀಡುವಾಗ, ಪಾಕಿಸ್ತಾನದ ರಾಯಭಾರ ಕಚೇರಿ ಮುಖ್ಯಸ್ಥರು ಬಾಂಗ್ಲಾದೇಶದಿಂದ ಒಪ್ಪಿಗೆ ಪಡೆಯಬೇಕಿದ್ದ ಅಗತ್ಯವನ್ನು ಮಧ್ಯಂತರ ಸರ್ಕಾರವು ತೆಗೆದುಹಾಕಿದೆ. ಈ ವಿಷಯವನ್ನು ಬಾಂಗ್ಲಾದೇಶದ ಹೈ ಕಮಿಷನರ್ ಇಕ್ಬಾಲ್ ಹುಸೇನ್ ಅವರು ಶನಿವಾರ ಪಾಕಿಸ್ತಾನದ ವ್ಯಾಪಾರಿ ಸಮುದಾಯಕ್ಕೆ ತಿಳಿಸಿದರು.

ಉಭಯ ದೇಶಗಳ ಸಂಬಂಧ ಕಳೆದ ದಶಕದಲ್ಲಿ ತೃಪ್ತಿಕರವಾಗಿರಲಿಲ್ಲ. ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರವು ಪಾಕಿಸ್ತಾನದ ಜತೆಗಿನ ಸಂಬಂಧ ಸುಧಾರಿಸಲು ಉತ್ಸುಕವಾಗಿದೆ. ಎರಡೂ ದೇಶಗಳ ನಡುವೆ ವ್ಯಾಪಾರ ಮತ್ತು ಹೂಡಿಕೆ ಹೆಚ್ಚಿಸುವುದು ಪ್ರಮುಖ ಆದ್ಯತೆಯಾಗಬೇಕು ಎಂದು ಹುಸೇನ್ ಹೇಳಿರುವುದಾಗಿ 'ಡಾನ್ ನ್ಯೂಸ್' ವರದಿ ಮಾಡಿದೆ.

ಬಾಂಗ್ಲಾ– ಪಾಕಿಸ್ತಾನ ನಡುವಿನ ವ್ಯಾಪಾರ ಅವಕಾಶಗಳು ಹೆಚ್ಚು ಬಳಕೆಯಾಗದೆ ಉಳಿದಿವೆ. 18 ಕೋಟಿ ಜನಸಂಖ್ಯೆ ಇರುವ ಬಾಂಗ್ಲಾ ಪ್ರಮುಖ ಗ್ರಾಹಕ ಮಾರುಕಟ್ಟೆ ದೇಶವೂ ಆಗಿದೆ. ಪಾಕಿಸ್ತಾನವು ಇದರ ಲಾಭ ಪಡೆದುಕೊಳ್ಳಬಹುದು. ಬಾಂಗ್ಲಾದ ಮುಖ್ಯ ಸಲಹೆಗಾರರು ಪ್ರಾದೇಶಿಕ ಸಹಕಾರ ಹೆಚ್ಚಿಸಲು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ದಕ್ಷಿಣ ಏಷ್ಯಾದ ದೇಶಗಳ ನಡುವೆ ಹೆಚ್ಚಿನ ಸಹಯೋಗದ ಅಗತ್ಯವಿದೆ ಎಂದು ಹುಸೇನ್ ಒತ್ತಿಹೇಳಿದ್ದಾರೆ.

ಎಚ್‌ಎಂಪಿವಿ ಸೋಂಕಿನ ಪ್ರಮಾಣ ಇಳಿಕೆ: ಚೀನಾ

ಬೀಜಿಂಗ್ (ಎಪಿ): ಉತ್ತರ ಚೀನಾದಲ್ಲಿ ಎಚ್‌ಎಂಪಿವಿ ಸೋಂಕಿನ ಪ್ರಮಾಣ ಇಳಿಕೆಯಾಗಿದೆ ಎಂದು ಅಲ್ಲಿನ ಆರೋಗ್ಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಹ್ಯೂಮನ್ ಮೆಟಾನ್ಯುಮೋ ವೈರಸ್ (ಎಚ್‌ಎಂಪಿವಿ) ಹೊಸದಲ್ಲ. ಹಲವು ದಶಕಗಳಿಂದ ಅದು ಪ್ರಕೃತಿಯಲ್ಲಿದೆ' ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ನಡೆಸಿದ ಸುದ್ದಿಗೋಷ್ಠಿಯಲ್ಲಿ ಚೀನಾದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರದ ಸಂಶೋಧಕ ವಾಂಗ್ ಲಿಪಿಂಗ್ ಅವರು ಹೇಳಿದ್ದಾರೆ.

'ಎಚ್‌ಎಂಪಿವಿ ಸೋಂಕಿತರ ಸಂಖ್ಯೆಯಲ್ಲಿ ಏರಿಳಿತಗಳಾಗುತ್ತಿದ್ದು, ಉತ್ತರ ಚೀನಾದಲ್ಲಿ ಇಳಿಕೆಯಾಗಿದೆ. 14 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲೂ ಸೋಂಕಿನ ಪ್ರಮಾಣ ಕ್ಷೀಣಿಸಿದೆ' ಎಂದು ಹೇಳಿದ್ದಾರೆ.

'ಪ್ರಸ್ತುತ ಜನರಿಗೆ ಉಂಟಾಗುತ್ತಿರುವ ಉಸಿರಾಟದ ಸಮಸ್ಯೆಯು ಈ ಹಿಂದೆ ಇದ್ದ ರೋಗಕಾರಕಗಳಿಂದಲೇ ಉಂಟಾಗಿದೆ. ಹೊಸ ಸಾಂಕ್ರಾಮಿಕ ರೋಗ ಪತ್ತೆಯಾಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಲಾಸ್ ಏಂಜಲೀಸ್: ಸಾವಿನ ಸಂಖ್ಯೆ 16ಕ್ಕೆ ಏರಿಕೆ

ಬೆಂಕಿ ನಂದಿಸಲು ಹರಸಾಹಸ

ಲಾಸ್ ಏಂಜಲೀಸ್ (ಎಪಿ/ರಾಯಿಟರ್ಸ್): ಇಲ್ಲಿನ ಪೆಸಿಫಿಕ್ ಪ್ಯಾಲಿಸೈಡ್ಸ್ ಹಾಗೂ ಈಟನ್ ಕೆಯಾನ್ ಪ್ರದೇಶಗಳಲ್ಲಿ ಪ್ರಬಲವಾಗಿ ಉರಿಯುತ್ತಿರುವ ಕಾಳ್ಗಿಚ್ಚಿನಲ್ಲಿ ಕ್ರಮವಾಗಿ 5 ಮತ್ತು 11 ಮಂದಿ ಇಲ್ಲಿಯವರೆಗೆ ಮೃತಪಟ್ಟಿದ್ದಾರೆ. 'ಅಗ್ನಿಶಾಮಕ ದಳದ ಸಿಬ್ಬಂದಿಯು ಮನೆ ಮನೆಗೆ ತೆರಳಿ ಶೋಧ ಕಾರ್ಯ ನಡೆಸಲು ಸಾಧ್ಯವಾದರೆ ಸಾವಿನ ಸಂಖ್ಯೆ ಇನ್ನಷ್ಟು ಏರಬಹುದು' ಎಂದು ಅಧಿಕಾರಿಗಳು ಹೇಳಿದ್ದಾರೆ.

ಒಟ್ಟು ಐದು ಕಡೆ ವ್ಯಾಪಿಸಿರುವ ಕಾಳ್ಗಿಚ್ಚುಗಳ ಪೈಕಿ ಪೆಸಿಫಿಕ್ ಪ್ಯಾಲಿಸೈಡ್ಸ್ ಹಾಗೂ ಈಟನ್ ಕೆಯಾನ್ ನಗರಗಳಲ್ಲಿನ ಕಾಳ್ಗಿಚ್ಚು ಹೆಚ್ಚು ಪ್ರಬಲವಾಗಿದೆ ಮತ್ತು ದಿನೇ ದಿನೇ ವ್ಯಾಪಿಸುತ್ತಲೇ ಇದೆ. ಶನಿವಾರವೂ ಸಾವಿರಾರು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ದಟ್ಟ ಹೊಗೆಯಾಡುತ್ತಿರುವ ಕಾರಣ ಕ್ಯಾಲಿಫೋರ್ನಿಯಾದಲ್ಲಿ ಆರೋಗ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗಿದೆ.

'ಸಂತಾ ಅನಾ' ಸುಂಟರ ಗಾಳಿಯು ಶನಿವಾರ ಸಂಜೆಯಿಂದ ಮತ್ತೊಮ್ಮೆ ವೇಗವಾಗಿ ಬೀಸುತ್ತಿದೆ. ಗಂಟೆಗೆ 48 ಕಿ.ಮೀನಿಂದ 112 ಕಿ.ಮೀನಷ್ಟು ವೇಗವಾಗಿ ಚಲಿಸುತ್ತಿದೆ' ಎಂದು ಹವಾಮಾನ ಇಲಾಖೆ ಹೇಳಿದೆ. ಮಂಗಳವಾರ ಬೆಳಿಗ್ಗೆವರೆಗೂ ಇದೇ ಸ್ಥಿತಿ ಇರಲಿದೆ ಎಂದೂ ಹೇಳಿದೆ.

ಎರಡು ರೀತಿಯಲ್ಲಿ ಕಾಳ್ಗಿಚ್ಚನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ಒಂದು, ಹೆಲಿಕಾಪ್ಟರ್ ಮೂಲಕ ಬೆಟ್ಟ ಪ್ರದೇಶಗಳಲ್ಲಿ ಬೆಂಕಿಯನ್ನು ನಂದಿಸಲು ಕೆಂಪು ಬಣ್ಣದ ರಾಸಾಯನಿಕವನ್ನು ಸಿಂಪಡಿಸುತ್ತಿದ್ದಾರೆ. ಮತ್ತೊಂದೆಡೆ ತಳಮಟ್ಟದಲ್ಲಿ ಮನೆಗಳಿಗೆ ಹೊತ್ತಿಕೊಂಡಿರುವ ಬೆಂಕಿಯನ್ನು ನಂದಿಸುತ್ತಿದ್ದಾರೆ.

ಹಾಲಿವುಡ್ ಹಿಲ್ಸ್‌ನಲ್ಲಿ ಹೊತ್ತಿಕೊಂಡಿದ್ದ ಕಾಳ್ಗಿಚ್ಚನ್ನು ಸಂಪೂರ್ಣ ನಂದಿಸಲಾಗಿತ್ತು. ಜೊತೆಗೆ, ಸ್ಯಾನ್ ಫೆರ್ನಾಂಡೊ ಕಣಿವೆಯಲ್ಲಿ ಉರಿಯುತ್ತಿರುವ ಕಾಳ್ಗಿಚ್ಚನ್ನು ಶೇ 90ರಷ್ಟು ನಿಯಂತ್ರಿಸಲಾಗಿದೆ. ಆದರೆ, ಪೆಸಿಫಿಕ್ ಪ್ಯಾಲಿಸೈಡ್ಸ್‌ನ ಕಾಳ್ಗಿಚ್ಚು ವೇಗವಾಗಿ ವ್ಯಾಪಿಸುತ್ತಿರುವ ಕಾರಣ ಈ ಎರಡೂ ಪ್ರದೇಶಗಳಿಗೆ ಮತ್ತೊಮ್ಮೆ ಕಾಳ್ಗಿಚ್ಚು ಹಬ್ಬುವ ಆತಂಕ ಎದುರಾಗಿದೆ. ಹೆಚ್ಚು ಜನಸಂದಣಿ ಇರುವ ಈ ಪ್ರದೇಶಗಳಲ್ಲಿ ಈಗಾಗಲೇ ಜನರನ್ನು ಸ್ಥಳಾಂತರ ಮಾಡುವ ಕಾರ್ಯ ನಡೆಯುತ್ತಿದೆ.

ಪೆಸಿಫಿಕ್ ಪ್ಯಾಲಿಸೈಡ್ಸ್‌ನಲ್ಲಿ ವ್ಯಾಪಿಸಿರುವ ಕಾಳ್ಗಿಚ್ಚನ್ನು ನಂದಿಸುವ ಕಾರ್ಯ ನಡೆಯಿತು –ಎಎಫ್‌ಪಿ ಚಿತ್ರ

> **ಕಾಳ್ಗಿಚ್ಚು ಉರಿಯುತ್ತಲೇ ಇದೆ. ಬೆಂಕಿಯನ್ನು ಹೇಗೆ ನಂದಿಸಬೇಕು ಎಂಬುದು ಈ ಅದಕ್ಷ ರಾಜಕಾರಣಿಗಳಿಗೆ ಗೊತ್ತಿಲ್ಲ. ಇವರಿಗೆಲ್ಲ ಏನಾಗಿದೆ?**
> **ಡೊನಾಲ್ಡ್ ಟ್ರಂಪ್,**
> ಅಮೆರಿಕದ ಚುನಾಯಿತ ಅಧ್ಯಕ್ಷ

ಪ್ರಮುಖಾಂಶಗಳು

- ಕ್ಯಾಲಿಫೋರ್ನಿಯಾ ರಾಜ್ಯದ ಸುತ್ತ ಇರುವ ಏಳು ರಾಜ್ಯಗಳು ಕಾಳ್ಗಿಚ್ಚು ನಿಯಂತ್ರಿಸಲು ಸಹಕಾರ ನೀಡಲು ಮುಂದಾಗಿವೆ. ಅಮೆರಿಕದ ನೆರೆಯ ದೇಶಗಳಾದ ಕೆನಡಾ ಹಾಗೂ ಮೆಕ್ಸಿಕೊ ವೈಮಾನಿಕ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿವೆ
- ಲಾಸ್ ಏಂಜಲೀಸ್‌ನಲ್ಲಿರುವ ಜಾಗತಿಕವಾಗಿ ಪ್ರಸಿದ್ಧಿ ಪಡೆದಿರುವ 'ಗೆಟ್ಟಿ ಸೆಂಟರ್' ವಸ್ತುಸಂಗ್ರಹಾಲಯಕ್ಕೂ ಕಾಳ್ಗಿಚ್ಚು ವ್ಯಾಪಿಸುವ ಸಂಭವಿದೆ. ಚಿತ್ರಕಲೆ, ಇನ್‌ಸ್ಟಾಲೇಷನ್ ಕಲೆ ಸೇರಿದಂತೆ ವಿವಿಧ ಕಲೆಗಳನ್ನು ಇಲ್ಲಿ ಪೋಷಿಸಲಾಗುತ್ತಿದೆ. 1,400ನೇ ಇಸವಿಯ ಕಲಾಕೃತಿಗಳೂ ಇಲ್ಲಿವೆ. ಪ್ರಸಿದ್ಧ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯವು ಬೆಂಕಿಯ ಭೀತಿ ಎದುರಿಸುತ್ತಿದೆ
- ಸ್ಥಳಾಂತರಗೊಂಡ ಜನರು ಬೇರೆಡೆ ಮನೆಗಳನ್ನು ಬಾಡಿಗೆಗೆ ಪಡೆಯಲು ಮುಂದಾಗುತ್ತಿದ್ದಾರೆ. ಆದರೆ, ಮನೆಮಾಲೀಕರು ಎರಡು–ಮೂರು ಪಟ್ಟು ಹೆಚ್ಚಿನ ಬಾಡಿಗೆ ಕೇಳುತ್ತಿರುವುದು ಕಂಡುಬಂದಿದೆ
- ಬೆಂಕಿಯಿಂದ ಸುಟ್ಟ ತಮ್ಮ ಮನೆಗಳ ಬಳಿಗೆ ಯಾರೂ ಬರಬಾರದು ಎಂದು ಆಡಳಿತವು ಜನರಿಗೆ ಮನವಿ ಮಾಡಿದೆ. ಬೆಂಕಿ ಸಂಪೂರ್ಣ ಆರಿಲ್ಲ. ಜೊತೆಗೆ ಹೊಗೆಯು ಆರೋಗ್ಯ ಸಮಸ್ಯೆಯನ್ನು ತಂದೊಡ್ಡಬಹುದು ಎಂದಿದೆ

₹11.63 ಲಕ್ಷ ಕೋಟಿ: ಅಂದಾಜು ನಷ್ಟ

ಅಮೆರಿಕವು ತನ್ನ ಇತಿಹಾಸದಲ್ಲಿಯೇ ಈ ಕಾಳ್ಗಿಚ್ಚು ದುರಂತವು ತೀವ್ರವಾದುದಾಗಿದೆ. ಜೊತೆಗೆ, ದೇಶವು ಅನುಭವಿಸಿದ ನಷ್ಟದ ಪ್ರಮಾಣದಲ್ಲಿಯೂ ಈ ದುರಂತ ಮೊದಲ ಸ್ಥಾನದಲ್ಲಿದೆ. ಸಂಸ್ಥೆಯೊಂದರ ಪ್ರಾಥಮಿಕ ಅಂದಾಜಿನ ಪ್ರಕಾರ 135 ಬಿಲಿಯನ್ ಡಾಲರ್‌ನಿಂದ (ಸುಮಾರು ₹11.63 ಲಕ್ಷ ಕೋಟಿ) 150 ಬಿಲಿಯನ್ ಡಾಲರ್ (ಸುಮಾರು 12.92 ಲಕ್ಷ ಕೋಟಿ) ನಷ್ಟವಾಗಿದೆ.

ದೆಹಲಿ ವಿಧಾನಸಭಾ ಚುನಾವಣೆ: 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ನಡುವೆಯೇ ತೀವ್ರ ಪೈಪೋಟಿ

ಎಎಪಿಗೆ 'ಕೈ' ಘಟಾನುಘಟಿಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ ಕಾಂಗ್ರೆಸ್, 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳಾಗಿದ್ದರೂ ಈ ಬಾರಿಯ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎದುರಾಳಿಗಳಾಗಿವೆ.

ಎಎಪಿಯ ಘಟಾನುಘಟಿ ನಾಯಕರ ವಿರುದ್ಧ ಕಾಂಗ್ರೆಸ್ ಪಕ್ಷ ತನ್ನ ಪ್ರಭಾವಿ ನಾಯಕರನ್ನು ಕಣಕ್ಕಿಳಿಸಿದೆ.

ನವದೆಹಲಿ ಕ್ಷೇತ್ರದಲ್ಲಿ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ವಿರುದ್ಧ ಪಕ್ಷದ ಮಾಜಿ ಸಂಸದ ಸಂದೀಪ್ ದೀಕ್ಷಿತ್, ಕಾಲ್ಕಾಜಿ ಕ್ಷೇತ್ರದಿಂದ ಸ್ಪರ್ಧಿಸಿರುವ ಮುಖ್ಯಮಂತ್ರಿ ಆತಿಶಿ ವಿರುದ್ಧ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕಾ ಲಾಂಬಾ ಹಾಗೂ ಜಂಗಪುರದಲ್ಲಿ ಮತ್ತೊಬ್ಬ ಹಿರಿಯ ಮುಖಂಡ ಮನೀಷ್ ಸಿಸೋಡಿಯಾ ವಿರುದ್ಧ ಮಾಜಿ ಮೇಯರ್ ಫರ್ಹಾದ್ ಸೂರಿ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ಇಷ್ಟಾಗಿಯೂ, ಎಎಪಿ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಉಮೇದುವಾರರು ತಕ್ಕ ಪೈಪೋಟಿ ನೀಡುವರೇ ಎಂಬ ಅನುಮಾನ ರಾಜಕೀಯ ವಲಯದಲ್ಲಿ ವ್ಯಕ್ತವಾಗುತ್ತಿದೆ. ಈ ಹಿಂದಿನ ಮೂರು ಚುನಾವಣೆಗಳಲ್ಲಿ ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು 3,200ರಿಂದ 13,600 ಮತಗಳನ್ನು ಮಾತ್ರ ಪಡೆದಿದ್ದರು.

'ಈ ಮೂರು ಕ್ಷೇತ್ರಗಳನ್ನು ಗೆಲ್ಲಲೇಬೇಕಿದೆ. ಇದಕ್ಕಾಗಿ ಎಎಪಿ ವಿರುದ್ಧ ಸೆಣಸಬೇಕಿದೆ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡರೊಬ್ಬರು ಹೇಳುತ್ತಾರೆ.

ನವದೆಹಲಿ ಕ್ಷೇತ್ರ: ಈ ಕ್ಷೇತ್ರವನ್ನು ಸಂದೀಪ್ ದೀಕ್ಷಿತ್ ತಾಯಿ, ದೆಹಲಿಯ ಮುಖ್ಯಮಂತ್ರಿಯಾಗಿದ್ದ ಶೀಲಾ ದೀಕ್ಷಿತ್ ಪ್ರತಿನಿಧಿಸಿದ್ದರು. 2013ರಲ್ಲಿ ಶೀಲಾ ದೀಕ್ಷಿತ್, ಕೇಜ್ರಿವಾಲ್ ವಿರುದ್ಧ ಪರಾಭವಗೊಂಡರು.

ಈ ಕ್ಷೇತ್ರವನ್ನು ಪುನಃ ಗೆದ್ದುಕೊಂಡು ಬರುವ ಜವಾಬ್ದಾರಿಯನ್ನು ಸಂದೀಪ್ ಅವರಿಗೆ ಪಕ್ಷ ವಹಿಸಿದೆ. ಆದರೆ, 2020ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕೇವಲ 3,200 ಮತಗಳನ್ನು ಪಡೆದಿತ್ತು.

ಜಂಗಪುರ ಕ್ಷೇತ್ರ: ಈ ಕ್ಷೇತ್ರದಲ್ಲಿ ಮಾಜಿ ಮೇಯರ್ ಫರ್ಹಾದ್ ಸೂರಿ ಸ್ಪರ್ಧಿಸುತ್ತಿದ್ದರೆ, ಬಿಜೆಪಿಯಿಂದ ತರ್ವಿಂದರ್ ಸಿಂಗ್ ಮಾರ್ವಾ ಕಣಕ್ಕಿಳಿದಿದ್ದಾರೆ. ಇಲ್ಲಿ ಮೂರು ಬಾರಿ ಗೆದ್ದಿದ್ದ ಮಾರ್ವಾ, 2013ರಲ್ಲಿ ಪರಾಭವಗೊಂಡರು.

ಕಾಲ್ಕಾಜಿ ಕ್ಷೇತ್ರ: ಮುಖ್ಯಮಂತ್ರಿ ಆತಿಶಿ ಅವರು ಕಾಲ್ಕಾಜಿಯಲ್ಲಿ ಪ್ರತಿ ಚುನಾವಣೆಯಲ್ಲೂ ತಮ್ಮ ಮತಗಳಿಕೆ ಪ್ರಮಾಣ ಹೆಚ್ಚಿಸಿಕೊಂಡಿದ್ದಾರೆ.

ದೇಣಿಗೆ ಸಂಗ್ರಹಣೆಗೆ ಚಾಲನೆ

ಚುನಾವಣೆ ಎದುರಿಸಲು ಅಗತ್ಯವಿರುವ ಹಣವನ್ನು ಜನರಿಂದ ದೇಣಿಗೆ ಪಡೆಯಲು ಆರಂಬಿಸಿರುವ ಅಭಿಯಾನಕ್ಕೆ ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ಚಾಲನೆ ನೀಡಿದರು.

ಜನರ ಸಹಾಯದಿಂದ ₹40 ಲಕ್ಷ ಸಂಗ್ರಹಿಸಲು 'atishi.aamaadmiparty.org' ಎಂಬ ವೆಬ್‌ಸೈಟ್ ಅನ್ನು ಆತಿಶಿ ಭಾನುವಾರ ಪ್ರಾರಂಭಿಸಿದರು.

ಈ ವೇಳೆ ಮಾತನಾಡಿದ ಅವರು 'ವಾಮ ಮಾರ್ಗದಿಂದ ಚುನಾವಣೆಯಲ್ಲಿ ಗೆಲುವು ಸಾಧಿಸಲು ನನ್ನಂತಹ ಹುದ್ದೆಯಲ್ಲಿರುವ ವ್ಯಕ್ತಿಗೆ ₹40 ಲಕ್ಷ ಸಂಗ್ರಹಿಸುವುದು ಕಷ್ಟದ ಕೆಲಸವೇನಲ್ಲ. ಆದರೆ ನಾನು ಹಾಗೂ ಎಎಪಿಯು ಅಂತಹ ದಾರಿಗಳನ್ನು ಹುಡುಕುವುದಿಲ್ಲ' ಎಂದರು.

ಪ್ರಜಾ ಮತ ಜನತಂತ್ರದ ಹಬ್ಬ

ಮುಖ್ಯಾಂಶಗಳು

- 2013ರಿಂದ ಮೂರು ಕ್ಷೇತ್ರಗಳಲ್ಲಿ ಗೆಲ್ಲದ ಕಾಂಗ್ರೆಸ್
- ಕೇಜ್ರಿವಾಲ್ ಮಣಿಸುವ ಹೊಣೆ ಸಂದೀಪ್ ದೀಕ್ಷಿತ್ ಹೆಗಲಿಗೆ
- ಕಾಲ್ಕಾಜಿ: ಆತಿಶಿ ವಿರುದ್ಧ ಗೆಲುವೂ ಸುಲಭದ ತುತ್ತಲ್ಲ

'ಬಿಜೆಪಿ ಅಧಿಕಾರಕ್ಕೆ ಬಂದರೆ ಕೊಳೆಗೇರಿ ನೆಲಸಮ'

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ದೆಹಲಿಯಲ್ಲಿರುವ ಎಲ್ಲಾ ಕೊಳೆಗೇರಿಗಳನ್ನು ಧ್ವಂಸಗೊಳಿಸು ತ್ತದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಭಾನುವಾರ ಆರೋಪಿಸಿದರು.

'ಎಎಪಿಯು ಕೊಳೆಗೇರಿ ನಿವಾಸಿಗಳಿಗೆ ಕೊಳಕು ನೀರು ಪೂರೈಕೆ ಮಾಡುತ್ತಿದೆ. ಶೌಚಾಲಯದಂತಹ ಮೂಲಭೂತ ಸೌಕರ್ಯಗಳ ಕೊರತೆಯೊಂದಿಗೆ ಕಸದ ರಾಶಿಯಲ್ಲಿ ದಯನೀಯ ಸ್ಥಿತಿಯಲ್ಲಿ ಬದುಕುವಂತೆ ಮಾಡಿದೆ' ಎಂದು ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಹೇಳಿದ್ದರು.

ಅಮಿತ್ ಶಾ ಆರೋಪದ ಬೆನ್ನಲ್ಲೇ, ಶಾಕೂರ್ ಬಸ್ತಿಯಲ್ಲಿರುವ ಕೊಳೆಗೇರಿಯೊಂದಕ್ಕೆ ಭಾನುವಾರ ಮುಂಜಾನೆ ತೆರಳಿದ ಕೇಜ್ರಿವಾಲ್ ಅವರು, ಅಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಈ ವೇಳೆ ಮಾತನಾಡಿದ ಅವರು 'ಬಿಜೆಪಿಯು ಕೊಳೆಗೇರಿ ನಿವಾಸಿಗಳ ಕಲ್ಯಾಣಕ್ಕಿಂತ ಭೂ ಸ್ವಾಧೀನಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ. ಚುನಾವಣೆಯ ಮೊದಲು ಅವರಿಗೆ ನಿಮ್ಮ ಮತ ಬೇಕು. ಬಳಿಕ ನಿಮ್ಮ ಭೂಮಿ ಬೇಕಿದೆ. ಬಿಜೆಪಿಯು ಕೊಳೆಗೇರಿ ನಿವಾಸಿಗಳನ್ನು ಕೀಟಗಳಂತೆ ಕಾಣುತ್ತದೆ' ಎಂದು ಆರೋಪಿಸಿದರು.

'ಬಿಜೆಪಿಗೆ ಮತ ಹಾಕಿದರೆ, ಕೊಳೆಗೇರಿ ನಿವಾಸಿಗಳು ತಮ್ಮ ಆತ್ಮಹತ್ಯೆ ಪತ್ರಗಳಿಗೆ ಸಹಿ ಮಾಡಿದಂತೆ. ಬಿಜೆಪಿ ತನ್ನ ಸ್ನೇಹಿತನಿಗೆ (ಗೌತಮ್ ಅದಾನಿಯನ್ನು ಉಲ್ಲೇಖಿಸಿ) ನಿಮ್ಮ ಭೂಮಿಯನ್ನು ನೀಡುತ್ತದೆ' ಎಂದರು.

ಅರವಿಂದ ಕೇಜ್ರಿವಾಲ್ ಅವರು ದೆಹಲಿಯ ಶಾಕೂರ್ ಬಸ್ತಿಯಲ್ಲಿ ಭಾನುವಾರ ಮಾತನಾಡಿದರು ಪಿಟಿಐ ಚಿತ್ರ

ಕೇಜ್ರಿವಾಲ್ ಅವರಿಗೆ ವರ್ಷದ ಅತ್ಯುತ್ತಮ ವಿದೂಷಕ ಎಂಬ ಪ್ರಶಸ್ತಿಯನ್ನು ನೀಡಬೇಕು. ಅವರು ಮಾನಸಿಕ ಸ್ಥಿಮಿತವನ್ನು ಕಳೆದುಕೊಂಡಿದ್ದಾರೆ. ಈಚೆಗೆ ಅವರು ಬಿಜೆಪಿ ಪರವಾಗಿಯೇ ಹೇಳಿಕೆಗಳನ್ನು ನೀಡುತ್ತಿದ್ದಾರೆ

ಹರ್‌ದೀಪ್ ಸಿಂಗ್ ಪುರಿ, ಬಿಜೆಪಿ ನಾಯಕ

'ನಿರುದ್ಯೋಗಿಗಳಿಗೆ ಮಾಸಿಕ ₹8,500'

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ಎಲ್ಲಾ ವಿದ್ಯಾವಂತ ನಿರುದ್ಯೋಗಿಗಳಿಗೆ ಒಂದು ವರ್ಷದವರೆಗೆ ಮಾಸಿಕ ₹8,500 ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್, 'ಯುವ ಉಡಾನ್ ಯೋಜನೆ' ಅಡಿಯಲ್ಲಿ ನಿರುದ್ಯೋಗಿಗಳಿಗೆ ಆರ್ಥಿಕ ನೆರವು ನೀಡಲಾಗುವುದು. ಆದರೆ, ಇದು ಉಚಿತವಲ್ಲ. ಕಂಪನಿ, ಕಾರ್ಖಾನೆ ಅಥವಾ ಯಾವುದೇ ಸಂಸ್ಥೆಯಲ್ಲಿ ತಮ್ಮ ಕೌಶಲದಿಂದ ಕೆಲಸ ಮಾಡಬಲ್ಲ ಯುವಜನರು ಮಾತ್ರ ಈ ನೆರವು ಪಡೆಯುತ್ತಾರೆ. ಆಯಾ ಸಂಸ್ಥೆಯೇ ಅವರಿಗೆ ಹಣ ನೀಡುತ್ತದೆ' ಎಂದು ತಿಳಿಸಿದರು.

'ಇದು ಮನೆಯಲ್ಲಿ ಕುಳಿತು ಹಣ ಪಡೆಯುವಂತಹ ಯೋಜನೆಯಲ್ಲ. ಯುವಕರು ತರಬೇತಿ ಪಡೆದಿರುವ ಕ್ಷೇತ್ರಗಳಲ್ಲಿಯೇ ಕೆಲಸ ನಿರ್ವಹಿಸಲು ಬೇಕಾದ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದರಿಂದ ಅವರು ತಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಬಹುದು' ಎಂದು ಅವರು ಹೇಳಿದರು.

'ಪ್ಯಾರಿ ದೀದಿ ಯೋಜನೆ' ಅಡಿಯಲ್ಲಿ ಮಹಿಳೆಯರಿಗೆ ಮಾಸಿಕ ₹2,500 ಆರ್ಥಿಕ ನೆರವು ನೀಡುವುದಾಗಿ ಜನವರಿ 6ರಂದು ಕಾಂಗ್ರೆಸ್ ಘೋಷಿಸಿತು. 'ಜೀವನ ರಕ್ಷಾ ಯೋಜನೆ'ಯಡಿ ₹25 ಲಕ್ಷದವರೆಗೆ ಉಚಿತ ಆರೋಗ್ಯ ವಿಮೆ ನೀಡುವ ಭರವಸೆಯನ್ನೂ ನೀಡಿದೆ.

ಕಪಿಲ್ ಮಿಶ್ರಾಗೆ ಬಿಜೆಪಿ ಟಿಕೆಟ್

ಪ್ರಜಾವಾಣಿ ವಾರ್ತೆ

ಕಪಿಲ್ ಮಿಶ್ರಾ

ನವದೆಹಲಿ: ವಿವಾದಾತ್ಮಕ ಹೇಳಿಕೆಗಳಿಗೆ ಹೆಸರಾದ ಕಪಿಲ್ ಮಿಶ್ರಾ ಹಾಗೂ ದೆಹಲಿಯ ಮಾಜಿ ಮುಖ್ಯಮಂತ್ರಿ ಮದನ್‌ಲಾಲ್ ಖುರಾನಾ ಅವರ ಪುತ್ರ ಹರೀಶ್ ಖುರಾನಾ ಸೇರಿದಂತೆ 29 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಜೆಪಿ ಪ್ರಕಟಿಸಿದೆ.

ಒಟ್ಟು 58 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿರುವ ಬಿಜೆಪಿಯು, 12 ಕ್ಷೇತ್ರಗಳಲ್ಲಿ ಯಾರನ್ನೂ ಹೆಸರಿಸಿಲ್ಲ. ಜೆಡಿಯು ಸೇರಿದಂತೆ ಇತರ ಮಿತ್ರಪಕ್ಷಗಳು ಈ ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದು ಎನ್ನಲಾಗಿದ್ದು, ನಾಮಪತ್ರ ಸಲ್ಲಿಸಲು ಜ.17 ಕೊನೆ ದಿನ.

ಹಿಂದಿನ ವಿಧಾನಸಭೆಯಲ್ಲಿ ಬಿಜೆಪಿಯನ್ನು ಪ್ರತಿನಿಧಿಸುತ್ತಿದ್ದ ಏಳು ಶಾಸಕರಲ್ಲಿ ಐವರಿಗೆ ಮತ್ತೆ ಸ್ಪರ್ಧಿಸಲು ಅವಕಾಶ ಸಿಕ್ಕಿದ್ದು, ಗಾಂಧಿನಗರದ ಶಾಸಕ ಅನಿಲ್ ವಾಜಪೇಯಿ ಸೇರಿದಂತೆ ಇಬ್ಬರಿಗೆ ಟಿಕೆಟ್ ನಿರಾಕರಿಸಲಾಗಿದೆ.

ಎರಡನೇ ಪಟ್ಟಿಯಲ್ಲಿ ಐವರು ಸೇರಿದಂತೆ ಒಟ್ಟು ಏಳು ಮಹಿಳೆಯರಿಗೆ ಬಿಜೆಪಿಯಿಂದ ಟಿಕೆಟ್ ನೀಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಐವರು ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಯೊಂದಿಗೆ ಭಾನುವಾರ ನಡೆದ ಗುಂಡಿನ ಚಕಮಕಿಯಲ್ಲಿ ಐವರು ನಕ್ಸಲರು ಹತರಾಗಿದ್ದಾರೆ. ಮೃತರಲ್ಲಿ ಇಬ್ಬರು ಮಹಿಳಾ ನಕ್ಸಲರು ಇದ್ದಾರೆ.

ಇದರೊಂದಿಗೆ ರಾಜ್ಯದಲ್ಲಿ ಈ ವರ್ಷ ಇದುವರೆಗೆ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ 14 ಮಂದಿ ನಕ್ಸಲರು ಹತರಾಗಿದ್ದಾರೆ.

ಭದ್ರತಾ ಪಡೆಯ ಜಂಟಿ ತಂಡವು ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಇಂದ್ರಾವತಿ ರಾಷ್ಟ್ರೀಯ ಉದ್ಯಾನ ಪ್ರದೇಶದ ಅರಣ್ಯದಲ್ಲಿ ಬೆಳಿಗ್ಗೆ ಗುಂಡಿನ ಚಕಮಕಿ ನಡೆಯಿತು ಎಂದು ಬಸ್ತಾರ್ ವಲಯದ ಐಜಿಪಿ ಸುಂದರರಾಜ್ ಪಿ. ತಿಳಿಸಿದ್ದಾರೆ.

ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಮತ್ತು ಪೊಲೀಸ್ ಪಡೆಗಳನ್ನು ಒಳಗೊಂಡ ಭದ್ರತಾ ಪಡೆ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಗಣರಾಜ್ಯೋತ್ಸವಕ್ಕೆ ಇಂಡೊನೇಷ್ಯಾ ಅಧ್ಯಕ್ಷ ಅತಿಥಿ?

ನವದೆಹಲಿ (ಪಿಟಿಐ): ಈ ಬಾರಿಯ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಇಂಡೊನೇಷ್ಯಾದ ಅಧ್ಯಕ್ಷ ಪ್ರಬೊವೊ ಸುಬಿಯಾಂತೊ ಅವರನ್ನು ಅತಿಥಿಯಾಗಿ ಆಹ್ವಾನಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಭಾರತವು ಈ ವಿಷಯವನ್ನು ಪ್ರಸ್ತಾಪಿಸಿದ ನಂತರ ಸುಬಿಯಾಂತೊ ಅವರು ಭಾರತ ಪ್ರವಾಸ ಮುಗಿಸಿದ ತಕ್ಷಣ ಪಾಕಿಸ್ತಾನಕ್ಕೆ ಪ್ರಯಾಣಿಸುವ ಸಾಧ್ಯತೆಯಿಲ್ಲ. ತಮ್ಮ ಭೇಟಿಯ ವೇಳೆ ಸುಬಿಯಾಂತೊ ಅವರು ಪ್ರಧಾನಿ ನರೇಂದ್ರ ಮೋದಿ ಜತೆಗೆ ವಿಸ್ತೃತ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಗೃಹ ಸಚಿವಾಲಯದ ಜೊತೆ 17ಕ್ಕೆ ಮಣಿಪುರದ ಕುಕಿಗಳ ಸಭೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮೈತೇಯಿ ಸಮುದಾಯದ ಜೊತೆಗಿನ ಸಂಘರ್ಷಕ್ಕೆ ಕೊನೆ ಹಾಡುವ ಉದ್ದೇಶದಿಂದ ಇದೇ 17ರಂದು ಕುಕಿ ಸಮುದಾಯ ಸದಸ್ಯರನ್ನು ಒಳಗೊಂಡ ನಿಯೋಗವೊಂದು ಗೃಹ ಸಚಿವಾಲಯ ಅಧಿಕಾರಿಗಳನ್ನು ಭೇಟಿ ಮಾಡಿ, ಚರ್ಚಿಸಲಿದೆ.

ಇದು, ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷ ಕೊನೆಗಾಣಿಸುವ ನಿಟ್ಟಿನಲ್ಲಿನ ಪ್ರಮುಖ ಬೆಳವಣಿಗೆ ಎಂದು ಬಣ್ಣಿಸಲಾಗುತ್ತಿದೆ.

ಕೌನ್ಸಿಲ್ ಸದಸ್ಯರು ಚುರಚಾಂದಪುರದಲ್ಲಿ ನೂತನ ರಾಜ್ಯಪಾಲ ಅಜಯ ಕುಮಾರ್ ಭಲ್ಲಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿರುವುದು ಗಮನಾರ್ಹ.

ಕುಕಿ ಜೊ ಸಮುದಾಯಗಳನ್ನು ಪ್ರತಿನಿಧಿಸುವ ಪ್ರಮುಖ ಸಂಘಟನೆಗಳ ವೇದಿಕೆಯಾದ 'ಕುಕಿ ಜೊ ಕೌನ್ಸಿಲ್'ನ ನಿಯೋಗವು ನವದೆಹಲಿಯಲ್ಲಿ ಸಚಿವಾಲಯದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದೆ. ನಿಯೋಗದಲ್ಲಿ 8 ಸದಸ್ಯರಿರುವರು ಎಂದು ಕೌನ್ಸಿಲ್ ವಕ್ತಾರ ಗಿಂಜಾ ವುವಾಲ್‌ಜೊಂಗ್ 'ಪ್ರಜಾವಾಣಿ'ಗೆ ಭಾನುವಾರ ತಿಳಿಸಿದ್ದಾರೆ.

'ಕುಕಿ ಸಮುದಾಯಗಳಿರುವ ಪ್ರದೇಶಗಳನ್ನು ಒಳಗೊಂಡ ಕೇಂದ್ರಾಡಳಿತ ಪ್ರದೇಶ ರಚಿಸಬೇಕು ಹಾಗೂ 'ಪ್ರತ್ಯೇಕ ಆಡಳಿತ' ವ್ಯವಸ್ಥೆ ರೂಪಿಸಬೇಕು' ಎಂಬ ಪ್ರಮುಖ ಬೇಡಿಕೆಯನ್ನು ಅಂದಿನ ಸಭೆಯಲ್ಲಿ ಮಂಡಿಸಲಾಗುವುದು' ಎಂದು ತಿಳಿಸಿದ್ದಾರೆ.

'ಕುಕಿ ನ್ಯಾಷನಲ್ ಆರ್ಗನೈಸೇಷನ್ (ಕೆಎನ್‌ಒ) ಹಾಗೂ ಯುನೈಟೆಡ್ ಪೀಪಲ್ಸ್ ಫ್ರಂಟ್ (ಯುಪಿಎಫ್)ನ ಬೇಡಿಕೆಗಳನ್ನು ಕೌನ್ಸಿಲ್ ಬೆಂಬಲಿಸುತ್ತದೆ. ಈ ಎರಡು ಸಂಘಟನೆಗಳೊಂದಿಗೆ ಶೀಘ್ರವೇ ಮಾತುಕತೆ ಆರಂಭಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇವೆ' ಎಂದೂ ತಿಳಿಸಿದ್ದಾರೆ.

'ವಿಕಸಿತ ಭಾರತ: ಯುವಕರಲ್ಲಿದೆ ಸಾಮರ್ಥ್ಯ'

ಯುವ ನೇತಾರರ ಜೊತೆ ಸಂವಾದದಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ

ನವದೆಹಲಿ (ಪಿಟಿಐ): 'ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಬೇಕು ಎಂಬ ಗುರಿಯನ್ನು ತಲುಪುವುದು ಕಷ್ಟಸಾಧ್ಯ ಎಂಬ ಅಭಿಪ್ರಾಯವಿದೆ. ಆದರೆ, ಈ ಗುರಿ ಮುಟ್ಟುವ ಸಾಮರ್ಥ್ಯ ನಮ್ಮ ದೇಶದ ಯುವಕರಲ್ಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸ್ವಾಮಿ ವಿವೇಕಾನಂದ ಅವರ ಜಯಂತಿ ಅಂಗವಾಗಿ ಭಾನುವಾರ ಆಯೋಜಿಸಲಾಗಿದ್ದ 'ವಿಕಸಿತ ಭಾರತದ ಯುವ ನೇತಾರರ ಜೊತೆ ಸಂವಾದ' ಕಾರ್ಯಕ್ರಮದಲ್ಲಿ ಅವರು 3 ಸಾವಿರ ಯುವಕರೊಂದಿಗೆ ಸಂವಾದ ನಡೆಸಿದರು. ಈ ದಿನವನ್ನು 'ರಾಷ್ಟ್ರೀಯ ಯುವಕರ ಹಬ್ಬ'ವನ್ನಾಗಿ ಆಚರಿಸಲಾಗುತ್ತಿದೆ. ಜೊತೆಗೆ, ಪ್ರತೀ ವರ್ಷ ಈ ದಿನವನ್ನು 'ರಾಷ್ಟ್ರೀಯ ಯುವ ದಿನ'ವನ್ನಾಗಿ ಆಚರಿಸಲಾಗುತ್ತದೆ.

'2047ರವರೆಗಿನ ಈ 22 ವರ್ಷವು ಭಾರತದ ಮಟ್ಟಿಗೆ ಸುವರ್ಣ ಯುಗವಾಗಿರಲಿದೆ. ದೇಶವನ್ನು ಸರ್ಕಾರ ಮಾತ್ರವೇ ಮುನ್ನಡೆಸಲು ಸಾಧ್ಯವಿಲ್ಲ. 'ವಿಕಸಿತ ಭಾರತ'ಕ್ಕೆ ಮೋದಿ ಮಾತ್ರವೇ ನಾಯಕನಲ್ಲ. ಬದಲಿಗೆ ನೀವು, ಎಲ್ಲ ಯುವಕರು ನಾಯಕರೇ ಆಗಿದ್ದೀರಿ. ದೇಶದ ನೀತಿಗಳಲ್ಲಿ ನಿಮ್ಮ ಆಲೋಚನೆಗಳೂ ಇರಲಿವೆ' ಎಂದರು.

'ದೇಶವು ಮುಂದೆ ಮುಂದೆ ಸಾಗಲು ದೊಡ್ಡ ಮಟ್ಟದ ಗುರಿಗಳನ್ನು ಹಾಕಿಕೊಳ್ಳಬೇಕು. ಭಾರತವು ಈಗ ಇದನ್ನೇ ಮಾಡುತ್ತಿದೆ. ನೀವು ನಮ್ಮ ವಿಕಸಿತ ಭಾರತದ ಕನಸನ್ನು ನನಸು ಮಾಡಲಿದ್ದಾರೆ ಎನ್ನುವ ಭರವಸೆ ನನಗಿದೆ. ನೀವು ರೂಪಿಸುವ ವಿಕಸಿತ ಭಾರತವು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಲಿದೆ' ಎಂದರು.

ಪ್ರಧಾನಿ ಮೋದಿ ಅವರಿಗೆ ಯುವಕರೊಬ್ಬರು ತಮ್ಮ ಸಂಶೋಧನೆಗಳ ಮಾದರಿಗಳ ಪ್ರಾತ್ಯಕ್ಷಿಕೆ ನೀಡಿದರು ಪಿಟಿಐ ಚಿತ್ರ

ನಮ್ಮೆಲ್ಲಾ ಸಮಸ್ಯೆಗಳಿಗೆ ಯುವಕರು ಪರಿಹಾರ ನೀಡಬಹುದೆಂಬ ಭರವಸೆ ವಿವೇಕಾನಂದರಿಗೆ ಇತ್ತು. ನನಗೂ ಇದೆ. ಅದೊಂದು ರೀತಿ 'ಕುರುಡು ನಂಬಿಕೆ'

ನರೇಂದ್ರ ಮೋದಿ, ಪ್ರಧಾನಿ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಅನುಜ್ ಟಕ್ರಾಲ್ ಅಮೋಘ ಬೌಲಿಂಗ್

ಸೆಮಿಯಲ್ಲಿ ಕರ್ನಾಟಕಕ್ಕೆ ಹರಿಯಾಣ ಎದುರಾಳಿ

ವಡೋದರಾ (ಪಿಟಿಐ): ಈ ಸಲದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಹರಿಯಾಣ ಮುಖಾಮುಖಿಯಾಗಲಿದೆ.

ಭಾನುವಾರ ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಹರಿಯಾಣ ತಂಡವು 2 ವಿಕೆಟ್‌ಗಳಿಂದ ಗುಜರಾತ್ ಎದುರು ಜಯಿಸಿತು.

ಟಾಸ್ ಗೆದ್ದ ಹರಿಯಾಣ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನುಜ್ ಟಕ್ರಾಲ್ (39ಕ್ಕೆ3) ಮತ್ತು ನಿಶಾಂತ್ ಸಿಂಧು (40ಕ್ಕೆ3) ಬೌಲಿಂಗ್ ಮುಂದೆ ಕುಸಿದ ಗುಜರಾತ್ 45.2 ಓವರ್‌ಗಳಲ್ಲಿ 196 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ತಂಡವು ಒಂದು ಹಂತದಲ್ಲಿ 84 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು. ಆದರೆ, ಕೆಳಕ್ರಮಾಂಕದ ಬ್ಯಾಟರ್ ಹೇಮಂಗ್ ಪಟೇಲ್ (54; 62ಎ, 4X2, 6X5) ಅರ್ಧಶತಕ ಗಳಿಸಿ ಮೊತ್ತ ಹೆಚ್ಚಿಸುವಲ್ಲಿ ನೆರವಾದರು.

ಗುರಿ ಬೆನ್ನತ್ತಿದ ಹರಿಯಾಣ ತಂಡಕ್ಕೆ ಜಯ ಸುಲಭವಾಗಿ ದಕ್ಕಲಿಲ್ಲ. ಸ್ಪಿನ್ನರ್ ರವಿ ಬಿಷ್ಣೋಯಿ (46ಕ್ಕೆ4) ಅವರು ತೀವ್ರ ಪ್ರತಿರೋಧ ಒಡ್ಡಿದರು. ಆದರೆ ಹರಿಯಾಣದ ಹಿಮಾಂಶು ರಾಣಾ (66; 89ಎ, 4X10) ಅವರ ಬ್ಯಾಟಿಂಗ್ ಬಲದಿಂದ 44.2 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 201 ರನ್ ಗಳಿಸಿ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಗುಜರಾತ್: 45.2 ಓವರ್‌ಗಳಲ್ಲಿ 196 (ಆರ್ಯಾ ದೇಸಾಯಿ 23, ಊರ್ವಿಲ್ ಪಟೇಲ್ 23, ಚಿಂತನ್ ಗಜ 32, ಸೌರವ್ ಚೌಹಾಣ್ 23, ಹೇಮಂಗ್ ಪಟೇಲ್ 54, ಅನ್ಷುಲ್ ಕಾಂಭೋಜ್ 36ಕ್ಕೆ2, ಅನುಜ್ ಟಕ್ರಾಲ್ 39ಕ್ಕೆ3, ನಿಶಾಂತ್ ಸಿಂಧು 40ಕ್ಕೆ3) ಹರಿಯಾಣ: 44.2 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 201 (ಅರ್ಷ ರಂಗಾ 25, ಹಿಮಾಂಶು ರಾಣಾ 66, ಅಂಕಿತ್ ಕುಮಾರ್ 20, ಪಾರ್ಥ ವತ್ಸ 38, ನಿಶಾಂತ್ ಸಿಂಧು 21, ಅರ್ಜನ್ ನಾಗವಸ್ವಾಲ್ಲಾ 34ಕ್ಕೆ2, ರವಿ ಬಿಷ್ಣೋಯಿ 46ಕ್ಕೆ4) ಫಲಿತಾಂಶ: ಹರಿಯಾಣ ತಂಡಕ್ಕೆ 2 ವಿಕೆಟ್ ಜಯ.

ಕರುಣ್ ನಾಯರ್ ಟೂರ್ನಿಯಲ್ಲಿ ಐದನೇ ಶತಕ

ವಿದರ್ಭ ತಂಡವನ್ನು ಪ್ರತಿನಿಧಿಸುತ್ತಿರುವ ಬೆಂಗಳೂರಿನ ಕರುಣ್ ನಾಯರ್ ಅವರು ಈ ಸಲದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಐದನೇ ಶತಕ ದಾಖಲಿಸಿದರು.

ಮೋತಿಭಾಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಕರುಣ್ (ಅಜೇಯ 122; 82ಎ, 4X13, 6X5) ಮತ್ತು ಧ್ರುವ ಶೋರೆ (ಅಜೇಯ 118; 131ಎ, 4X10, 6X3) ಅವರಿಬ್ಬರ ದ್ವಿಶತಕದ ಜೊತೆಯಾಟದ ಬಲದಿಂದ ವಿದರ್ಭ ತಂಡವು 9 ವಿಕೆಟ್‌ಗಳಿಂದ ರಾಜಸ್ಥಾನ ವಿರುದ್ಧ ಗೆದ್ದಿತು.

ಸೆಮಿಫೈನಲ್‌ನಲ್ಲಿ ವಿದರ್ಭ ತಂಡವು ಮಹಾರಾಷ್ಟ್ರ ಎದುರು ಆಡಲಿದೆ.

ಟಾಸ್ ಗೆದ್ದ ವಿದರ್ಭ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶುಭಂ ಗರ್ವಾಲ್ (59; 59ಎ, 4X6, 6X4) ಮತ್ತು ಕಾರ್ತಿಕ್ ಶರ್ಮಾ (62; 61ಎ, 4X2, 6X4) ಅವರ ಅರ್ಧಶತಕಗಳ ಬಲದಿಂದ ರಾಜಸ್ಥಾನ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 291 ರನ್ ಗಳಿಸಿತು. ಅದಕ್ಕುತ್ತರವಾಗಿ ವಿದರ್ಭ ತಂಡವು 43.3 ಓವರ್‌ಗಳಲ್ಲಿ 1 ವಿಕೆಟ್‌ಗೆ 292 ರನ್ ಗಳಿಸಿ ಜಯಿಸಿತು.

ಈ ಟೂರ್ನಿಯಲ್ಲಿ ಕರುಣ್ 7 ಪಂದ್ಯಗಳಿಂದ ಒಟ್ಟು 664 ರನ್ ಕಲೆಹಾಕಿದ್ದಾರೆ. ಇದರೊಂದಿಗೆ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ. ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ (619ರನ್) ನಾಲ್ಕು ಶತಕ ಗಳಿಸಿದ್ದಾರೆ. ಅವರನ್ನು ಕರುಣ್ ಹಿಂದಿಕ್ಕಿದರು.

ವಿದರ್ಭ ತಂಡದ ಬ್ಯಾಟರ್ ಕರುಣ್ ನಾಯರ್

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ: 50 ಓವರ್‌ಗಳಲ್ಲಿ 8ಕ್ಕೆ 291 (ಮಹಿಪಾಲ್ ಲೊಮ್ರೊರ್ 32, ದೀಪಕ್ ಹೂಡಾ 45, ಶುಭಂ ಗರ್ವಾಲ್ 59, ಕಾರ್ತಿಕ್ ಶರ್ಮಾ 62, ಸಂಪ್ರೀತ್ ಜೋಶಿ 23, ದೀಪಕ್ ಚಾಹರ್ 31, ಯಶ್ ಠಾಕೂರ್ 39ಕ್ಕೆ4) ವಿದರ್ಭ: 43.3 ಓವರ್‌ಗಳಲ್ಲಿ 1 ವಿಕೆಟ್‌ಗೆ 292 (ಧ್ರುವ ಶೋರೆ ಔಟಾಗದೇ 118, ಯಶ್ ರಾಥೋಡ್ 39, ಕರುಣ್ ನಾಯರ್ ಔಟಾಗದೇ 122) ಫಲಿತಾಂಶ: ವಿದರ್ಭ ತಂಡಕ್ಕೆ 9 ವಿಕೆಟ್‌ಗಳ ಜಯ.

ಸೆಮಿಫೈನಲ್ ಪಂದ್ಯಗಳು

ಹರಿಯಾಣ–ಕರ್ನಾಟಕ (ಜ.15)

ವಿದರ್ಭ–ಮಹಾರಾಷ್ಟ್ರ (ಜ.16)

ಬಿಸಿಸಿಐಗೆ ಸೈಕಿಯಾ ಕಾರ್ಯದರ್ಶಿ

ಖಜಾಂಚಿಯಾಗಿ ಪ್ರಭತೇಜ್ ಭಾಟಿಯಾ ಅವಿರೋಧ ಆಯ್ಕೆ

ಮುಂಬೈ (ಪಿಟಿಐ): ದೇವಜೀತ್ ಸೈಕಿಯಾ ಮತ್ತು ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಕ್ರಮವಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸೈಕಿಯಾ

ಭಾಟಿಯಾ

ಭಾನುವಾರ ಇಲ್ಲಿ ನಡೆದ ಮಂಡಳಿಯ ಸರ್ವಸದಸ್ಯರ ವಿಶೇಷ ಸಭೆಯಲ್ಲಿ (ಎಸ್‌ಜಿಎಂ) ಅವರ ನೇಮಕ ನಡೆಯಿತು.

ಈ ಮೊದಲು ಕಾರ್ಯದರ್ಶಿಯಾಗಿದ್ದ ಜಯ್ ಶಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅಧ್ಯಕ್ಷರಾಗಿ ಕಳೆದ ಡಿಸೆಂಬರ್ 1ರಂದು ಅಧಿಕಾರ ವಹಿಸಿಕೊಂಡಿದ್ದರು. ಖಜಾಂಚಿಯಾಗಿದ್ದ ಆಶಿಶ್ ಶೆಲಾರ್ ಅವರು ಮಹಾರಾಷ್ಟ್ರ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಆದ್ದರಿಂದ ಇವರಿಬ್ಬರು ಬಿಸಿಸಿಐನಲ್ಲಿ ತಮ್ಮ ಹುದ್ದೆಗಳಿಂದ ಕೆಳಗಿಳಿದಿದ್ದರು.

ನೂತನ ಕಾರ್ಯದರ್ಶಿ ಸೈಕಿಯಾ ಅವರು ಅಸ್ಸಾಂ ರಾಜ್ಯದವರು. ಅವರು ಕಳೆದ ಡಿಸೆಂಬರ್ 1ರಿಂದ ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಜಂಟಿ ಕಾರ್ಯದರ್ಶಿಯೂ ಆಗಿದ್ದರು. ಈಗ ಆ ಹುದ್ದೆ ತೆರವಾಗಿದೆ. ಖಜಾಂಚಿ ಭಾಟಿಯಾ ಛತ್ತೀಸಗಡದವರು.

'ಪ್ರಮುಖ ಹುದ್ದೆಗಳಾದ ಕಾರ್ಯದರ್ಶಿ ಮತ್ತು ಖಜಾಂಚಿಯ ನೇಮಕವು ಅವಿರೋಧವಾಗಿ ಆಗಿದೆ' ಎಂದು ಚುನಾವಣಾಧಿಕಾರಿ ಎ.ಕೆ. ಜೋತಿ ತಿಳಿಸಿದ್ದಾರೆ.

ಜಯ್ ಶಾ ಅವರನ್ನು ವಿಶೇಷ ಸಭೆಯಲ್ಲಿ ಅಭಿನಂದಿಸಲಾಯಿತು.

ಸುದ್ದಿಗಾರರೊಂದಿಗೆ ಮಾತನಾಡಿದ ಮಂಡಳಿ ಉಪಾಧ್ಯಕ್ಷ ರಾಜೀವ ಶುಕ್ಲಾ, 'ಈಸಭೆಯ ಏಕೈಕ ಉದ್ದೇಶ ಕಾರ್ಯದರ್ಶಿ ಮತ್ತು ಖಜಾಂಚಿ ಚುನಾವಣೆಯಾಗಿತ್ತು. ಅದನ್ನು ಬಿಟ್ಟು ಬೇರೆ ಯಾವುದೇ ವಿಷಯ ಕುರಿತು ಚರ್ಚೆಯಾಗಿಲ್ಲ' ಎಂದರು.

'ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯ ಪಂದ್ಯಗಳ ಆಯೋಜನೆಯ ಸ್ಥಳಗಳನ್ನು ಶೀಘ್ರದಲ್ಲಿಯೇ ನಿರ್ಧರಿಸಲಾಗುವುದು' ಎಂದು ತಿಳಿಸಿದರು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವ ಭಾರತ ತಂಡದ ಆಯ್ಕೆಯ ಕುರಿತ ಸಭೆ ಇದೇ 18 ಮತ್ತು 19ರಂದು ನಡೆಯಲಿದೆ ಎಂದೂ ತಿಳಿಸಿದರು.

ಮಾರ್ಚ್ 23ರಿಂದ ಐಪಿಎಲ್

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯು ಮಾರ್ಚ್ 23ರಿಂದ ಆರಂಭವಾಗಲಿದೆ. ಈ ಋತುವಿನಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನೀತಿ ಸಂಹಿತೆಯನ್ನು ಐಪಿಎಲ್ ಆಟಗಾರರೂ ಪಾಲಿಸುವುದು ಕಡ್ಡಾಯವಾಗಲಿದೆ.

ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯ ಪಂದ್ಯಗಳು ಈ ಬಾರಿ ನಾಲ್ಕು ನಗರಗಳಲ್ಲಿ ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದ್ದಾರೆ.

'ಇಲ್ಲಿಯವರೆಗೆ ಐಪಿಎಲ್ ಸಮಿತಿಯು ತನ್ನದೇ ಆದ ನಿಯಮಾವಳಿಗಳನ್ನು ಪಾಲಿಸುತ್ತಿತ್ತು. ಆದರೆ ಇನ್ನು ಮುಂದೆ ಐಸಿಸಿ ನೀತಿಸಂಹಿತೆ ಜಾರಿಯಾಗಲಿದೆ. ಲೆವೆಲ್ 1, 2 ಅಥವಾ 3ರ 'ಅಪರಾಧ' ಗಳಿಗೆ ಐಸಿಸಿಯ ಅಂತರರಾಷ್ಟ್ರೀಯ ಟಿ20 ನಿಯಮಗಳ ಪ್ರಕಾರ ಶಿಕ್ಷೆ ವಿಧಿಸಲಾಗುವುದು' ಎಂದು ಐಪಿಎಲ್ ಕಾರ್ಯಕಾರಿ ಸದಸ್ಯರೊಬ್ಬರು ತಿಳಿಸಿದ್ದಾರೆ.

ಡಬ್ಲ್ಯುಪಿಎಲ್ ಪಂದ್ಯಗಳು ಲಖನೌ, ಮುಂಬೈ, ಬರೋಡಾ ಮತ್ತು ಬೆಂಗಳೂರಿನಲ್ಲಿ ಆಯೋಜನೆಗೊಳ್ಳುವ ಸಾಧ್ಯತೆ ಇದೆ.

ಪಂಜಾಬ್ ಕಿಂಗ್ಸ್‌ಗೆ ಶ್ರೇಯಸ್ ನಾಯಕ

ಬೆಂಗಳೂರು: ಬಲಗೈ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಮುಂಬೈನ 30 ವರ್ಷದ ಶ್ರೇಯಸ್ ಅವರನ್ನು ಈಚೆಗೆ ನಡೆದಿದ್ದ ಮೆಗಾ ಹರಾಜಿನಲ್ಲಿ ಅವರನ್ನು ಪಂಜಾಬ್ ತಂಡವು ಖರೀದಿಸಿತ್ತು.

'ನಾಯಕತ್ವ ವಹಿಸಿಕೊಳ್ಳುತ್ತಿರುವುದು ತುಂಬಾ ಸಂತಸ ತಂದಿದೆ. ತಂಡದ ಮ್ಯಾನೇಜ್‌ಮೆಂಟ್ ನನ್ನ ಮೇಲಿಟ್ಟಿರುವ ವಿಶ್ವಾಸ ಉಳಿಸಿಕೊಳ್ಳುವಂತೆ ಆಡುತ್ತೇನೆ' ಎಂದು ಶ್ರೇಯಸ್ ಹೇಳಿದ್ದಾರೆ.

'ಶ್ರೇಯಸ್ ಬುದ್ಧಿವಂತ ಆಟಗಾರ. ಪರಿಸ್ಥಿತಿಯನ್ನು ಚೆನ್ನಾಗಿ ಅರಿತು ಅದಕ್ಕೆ ತಕ್ಕಂತೆ ಸ್ಪಂದಿಸುತ್ತಾರೆ. ಅವರಿಗೆ ಉತ್ತಮ ಅನುಭವವಿದೆ. ಯಶಸ್ವಿ ನಾಯಕರೂ ಹೌದು' ಎಂದು ತಂಡದ ಕೋಚ್ ರಿಕಿ ಪಾಂಟಿಂಗ್ ಹೇಳಿದ್ದಾರೆ.

2024ರ ಐಪಿಎಲ್ ಟೂರ್ನಿಯಲ್ಲಿ ಶ್ರೇಯಸ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ಚಾಂಪಿಯನ್ ಆಗಿತ್ತು. ರಣಜಿ ಟ್ರೋಫಿ ಮತ್ತು ಇರಾನಿ ಟ್ರೋಫಿ ಜಯಿಸಿದ ಮುಂಬೈ ತಂಡದಲ್ಲಿ ಅವರು ಆಡಿದ್ದರು. ಅವರ ನಾಯಕತ್ವ ದಲ್ಲಿ ಮುಂಬೈ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಜಯಿಸಿತ್ತು.

ಕೊಕ್ಕೊ ವಿಶ್ವಕಪ್‌ಗೆ ಇಂದು ಚಾಲನೆ

ನವದೆಹಲಿ (ಪಿಟಿಐ): ಭಾರತದ ಆತಿಥ್ಯದಲ್ಲಿ ಇದೇ 13ರಿಂದ ನಡೆಯುವ ಚೊಚ್ಚಲ ಕೊಕ್ಕೊ ವಿಶ್ವಕಪ್ ಟೂರ್ನಿಗೆ ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣ ಸಜ್ಜಾಗಿದೆ.

ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಒಟ್ಟು 23 ತಂಡಗಳು ಭಾಗಹಿಸುತ್ತಿದ್ದು, ಇದೇ 19ರಂದು ಫೈನಲ್ ಹಣಾಹಣಿ ನಡೆಯಲಿದೆ.

ಆತಿಥೇಯ ಭಾರತದ ಪುರುಷರ ತಂಡವು ಸೋಮವಾರ ನೇಪಾಳ ತಂಡದೊಂದಿಗೆ ಅಭಿಯಾನ ಆರಂಭಿಸಲಿದೆ. ಭಾರತ ಸೇರಿದಂತೆ ನೇಪಾಳ, ಪೆರು, ಬ್ರೆಜಿಲ್ ಮತ್ತು ಭೂತಾನ್ ತಂಡಗಳು ಎ ಗುಂಪಿನಲ್ಲಿವೆ. ಜ.16ಕ್ಕೆ ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಳ್ಳಲಿದೆ. 17ರಿಂದ ಪ್ಲೇ ಆಫ್ ಹಂತದ ಸ್ಪರ್ಧೆಗಳು ಆರಂಭವಾಗಲಿದೆ.

ಮಹಿಳೆಯರ ವಿಭಾಗದಲ್ಲಿ ಭಾರತ 14ರಂದು ದಕ್ಷಿಣ ಕೊರಿಯಾ ತಂಡದೊಂದಿಗೆ ಅಭಿಯಾನ ಆರಂಭಿಸಲಿದೆ. ಪ್ರತೀಕ್ ವೈಕರ್ ಮತ್ತು ಪ್ರಿಯಾಂಕಾ ಇಂಗ್ಲೆ ಕ್ರಮವಾಗಿ ಭಾರತದ ಪುರುಷರ ಮತ್ತು ಮಹಿಳೆಯರ ತಂಡವನ್ನು ಮುನ್ನಡೆಸುವರು.

ಮಹಿಳೆಯರ 19 ವರ್ಷದೊಳಗಿನವರ ವಿಭಾಗದ ಏಕದಿನ ಟ್ರೋಫಿ

ಇರಾ ಜಾಧವ್ ತ್ರಿಶತಕ ದಾಖಲೆ

ಪ್ರಜಾವಾಣಿ ವಾರ್ತೆ

ಆಲೂರು, ಬೆಂಗಳೂರು: ಮುಂಬೈ ತಂಡದ ಆರಂಭಿಕ ಬ್ಯಾಟರ್ ಇರಾ ಜಾಧವ್ ಅವರು ಮಹಿಳೆಯರ 19 ವರ್ಷದೊಳಗಿನವರ ವಿಭಾಗದ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ತ್ರಿಶತಕ ದಾಖಲಿಸಿದರು.

ಈ ವಯೋಮಿತಿಯ ವಿಭಾಗದಲ್ಲಿ ತ್ರಿಶತಕ ಗಳಿಸಿದ ದೇಶದ ಮೊದಲ ಆಟಗಾರ್ತಿಯೆಂಬ ಹೆಗ್ಗಳಿಕೆಗೆ ಪಾತ್ರರಾದರು. ಭಾನುವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮೇಘಾಲಯ ವಿರುದ್ಧ ನಡೆದ ಪಂದ್ಯದಲ್ಲಿ ಅವರು 346 ರನ್ ಗಳಿಸಿದರು. 157 ಎಸೆತಗಳಲ್ಲಿ, 42 ಬೌಂಡರಿಮತ್ತು 16 ಸಿಕ್ಸರ್‌ಗಳನ್ನು ಸಿಡಿಸಿದರು. ಇರಾ ಮತ್ತು ತಂಡದ ನಾಯಕಿ ಹರ್ಲೀ ಗಾಲಾ (116; 79ಎಸೆತ) ಎರಡನೇ ವಿಕೆಟ್ ಜೊತೆಯಾಟದಲ್ಲಿ 274 ರನ್ ಸೇರಿಸಿದರು. ತಂಡವು 3 ವಿಕೆಟ್‌ಗಳಿಗೆ 563 ರನ್ ಗಳಿಸಿತು.

ಆದರೆ ಅನುಭವಿಗಳಿಲ್ಲದ ಮೇಘಾಲಯ ತಂಡವು ಕೇವಲ 19 ರನ್‌ಗಳಿಗೆ ಆಲೌಟ್ ಆಯಿತು. ಅದರಲ್ಲಿ ಆರು ಬ್ಯಾಟರ್‌ಗಳು ಖಾತೆಯನ್ನೇ ತೆರೆಯಲಿಲ್ಲ. ಇದರೊಂದಿಗೆ ಮುಂಬೈ ತಂಡವು 544 ರನ್‌ಗಳ ಬೃಹತ್ ಅಂತರದ ಜಯ ಗಳಿಸಿ, ದಾಖಲೆ ಬರೆಯಿತು.

ತ್ರಿಶತಕ ಗಳಿಸಿದ ಮುಂಬೈ 19 ವರ್ಷದೊಳಗಿನ ಮಹಿಳಾ ಕ್ರಿಕೆಟ್ ತಂಡದ ಇರಾ ಜಾಧವ್ –ಬಿಸಿಸಿಐ ಡೊಮೆಸ್ಟಿಕ್ ಎಕ್ಸ್ ಚಿತ್ರ

ದಿಗ್ಗಜ ಸಚಿನ್ ತೆಂಡೂಲ್ಕರ್, ವಿನೋದ್ ಕಾಂಬ್ಳಿ ಮತ್ತು ಅಜಿತ್ ಅಗರಕರ್ ಅವರು ಓದಿರುವ ಶಾರದಾಶ್ರಮ ವಿದ್ಯಾಮಂದಿರದ ವಿದ್ಯಾರ್ಥಿನಿಯಾಗಿರುವ ಇರಾ ಅವರಿಗೆ ಇನ್ನೂ 14 ವರ್ಷ ವಯಸ್ಸು. ಯೂತ್ ಲಿಸ್ಟ್ ಎ ವಿಭಾಗದಲ್ಲಿ ಇದು ಭಾರತದ ಆಟಗಾರ್ತಿ ಗಳಿಸಿದ ಗರಿಷ್ಠ ವೈಯಕ್ತಿಕ ಸ್ಕೋರ್ ಆಗಿದೆ. 2010ರಲ್ಲಿ ದಕ್ಷಿಣ ಆಫ್ರಿಕಾದ ಲಿಝೆಲ್ ಲೀ ಅವರು 427 ರನ್ ಗಳಿಸಿದ್ದು, ದೇಶಿ ಕ್ರಿಕೆಟ್‌ನ ದಾಖಲೆಯಾಗಿದೆ.

ಈಚೆಗೆ ನಡೆದಿದ್ದ ಡಬ್ಲ್ಯುಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಇರಾ ಜಾಧವ್ ಅವರನ್ನು ಯಾವುದೇ ತಂಡವೂ ಖರೀದಿಸಿರಲಿಲ್ಲ. 19 ವರ್ಷದೊಳಗಿನವರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಅವರನ್ನು ಕಾಯ್ದಿಟ್ಟ ಆಟಗಾರ್ತಿಯನ್ನಾಗಿ ಆಯ್ಕೆ ಮಾಡಲಾಗಿದೆ.

ಕರ್ನಾಟಕ ತಂಡಕ್ಕೆ ಜಯ

ತಲಾ ಮೂರು ವಿಕೆಟ್ ಗಳಿಸಿದ ವಂದಿತಾ ರಾವ್ ಮತ್ತು ವೇದವರ್ಷಿಣಿ ಅವರ ಉತ್ತಮ ಬೌಲಿಂಗ್‌ನಿಂದ ಕರ್ನಾಟಕದ 19 ವರ್ಷದೊಳಗಿನ ಮಹಿಳೆಯರ ತಂಡವು ಚಂಡೀಗಡದ ವಿರುದ್ಧ 5 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಚಂಡೀಗಡ: 40.2 ಓವರ್‌ಗಳಲ್ಲಿ 152 (ದೀಪ್ತಿ ವಾಲಿಯಾ 66, ತೈಶಾ ಮಂಚಂದಾ 22, ಸಮೈರಾ ಠಾಕೂರ್ 22, ವಂದಿತಾ ರಾವ್ 29ಕ್ಕೆ3, ವೇದವರ್ಷಿಣಿ 18ಕ್ಕೆ3) ಕರ್ನಾಟಕ: 34 ಓವರ್‌ಗಳಲ್ಲಿ 5ಕ್ಕೆ153 (ಶ್ರೇಯಾ ಚವ್ಹಾಣ 50, ಬಿ.ಜಿ. ತೇಜಸ್ವಿನಿ 31,ತರುಣಿಕಾ 36ಕ್ಕೆ2) ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್ ಜಯ.

ಸಿಸಿಸಿಎ ಚೈರೋಸ್ ಭೀಮಯ್ಯ ಹಾಕಿ ಫೈವ್ಸ್ ಟೂರ್ನಿಯ ಪ್ರಶಸ್ತಿ ಗೆದ್ದ ಬಾಯ್ಸ್ ಸ್ಪೋರ್ಟ್ಸ್ ಕಂಪೆನಿ ಎಂಇಜಿ ತಂಡ

ಹಾಕಿ ಫೈವ್ಸ್: ಎಂಇಜಿ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಯ್ಸ್ ಸ್ಪೋರ್ಟ್ಸ್ ಕಂಪೆನಿ ಎಂಇಜಿ ತಂಡವು ಆರನೇ ಆವೃತ್ತಿಯ ಸಿಸಿಸಿಎ ಚೈರೋಸ್ ಭೀಮಯ್ಯ ಹಾಕಿ ಫೈವ್ಸ್ ಟೂರ್ನಿಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಎಫ್‌ಎಂಕೆಎಂಸಿ ಹಾಕಿ ಮೈದಾನದಲ್ಲಿ ಹಾಕಿ ಕರ್ನಾಟಕ ಆಶ್ರಯದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಎಂಜಿಇ ತಂಡವು 4–0 ಗೋಲುಗಳಿಂದ ಡಿವೈಇಎಸ್ 'ಬಿ' ತಂಡವನ್ನು ಮಣಿಸಿ ಚಾಂಪಿಯನ್ ಕಿರೀಟದೊಂದಿಗೆ ₹70 ಸಾವಿರ ಬಹುಮಾನವನ್ನು ತನ್ನದಾಗಿಸಿಕೊಂಡಿತು.

ರನ್ನರ್ ಅಪ್ ಡಿವೈಇಎಸ್ ತಂಡ ₹50 ಸಾವಿರ ಗೆದ್ದಿತು. ಎಜಿಒಆರ್‌ಸಿ ಮತ್ತು ಎಡಬ್ಲ್ಯುಆರ್ ಹುಬ್ಬಳ್ಳಿ ತಂಡವು ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು.

ಸೆಮಿಫೈನಲ್‌ನಲ್ಲಿ ಎಂಇಜಿ ತಂಡವು 7–6ರಿಂದ ಎಜಿಒಆರ್‌ಸಿ ತಂಡವನ್ನು; ಡಿವೈಇಎಸ್ 3–2ರಿಂದ ಹುಬ್ಬಳ್ಳಿ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತ್ತು.

ಕ್ವಾರ್ಟರ್ ಫೈನಲ್‌ನಲ್ಲಿ ಎಜಿಒಆರ್‌ಸಿ 8–6ರಿಂದ ಭೀಮಾಸ್ ವಿರುದ್ಧ; ಎಂಇಜಿ 8–1ರಿಂದ ಹೈ ಫ್ಲೈಯರ್ಸ್ ವಿರುದ್ಧ; ಹುಬ್ಬಳ್ಳಿ 3–3 (2–1)ರಿಂದ ಡಿವೈಇಎಸ್ ಎ ವಿರುದ್ಧ; ಡಿವೈಇಎಸ್ ಬಿ 3–2ರಿಂದ ಕೂರ್ಗ್ ಹಾಕ್ಸ್ ವಿರುದ್ಧ ಗೆಲುವು ಸಾಧಿಸಿತ್ತು.

ಎಂಇಜಿಯ ಸಚಿನ್ ಸರಣಿಯ ಆಟಗಾರ, ಡಿವೈಇಎಸ್‌ನ ಚೇತನ್ ಕುಮಾರ್ ಉತ್ತಮ ಗೋಲ್‌ಕೀಪರ್ ಗೌರವಕ್ಕೆ ಪಾತ್ರವಾದರು.

ಸಬಲೆಂಕಾ, ಜ್ವೆರೇವ್ ಶುಭಾರಂಭ

ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿ: ಎರಡನೇ ಸುತ್ತಿಗೆ ಝೆಂಗ್, ರೂಡ್

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ ಅವರು ಭಾನುವಾರ ಆರಂಭಗೊಂಡ ಆಸ್ಟ್ರೇಲಿಯನ್ ಓಪನ್‌ನಲ್ಲಿ ಶುಭಾರಂಭ ಮಾಡಿದರು.

ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಸಬಲೆಂಕಾ 6-3, 6-2ರಿಂದ ಅಮೆರಿಕದ ಸ್ಲೋನ್ ಸ್ಟೀಫನ್ಸ್ ಅವರನ್ನು ನಿರಾಯಾಸವಾಗಿ ಸೋಲಿಸಿ, ಎರಡನೇ ಸುತ್ತು ಪ್ರವೇಶಿಸಿದರು.

2017ರ ಅಮೆರಿಕ ಓಪನ್ ಚಾಂಪಿಯನ್ ಸ್ಟೀಫನ್ಸ್ ಅವರನ್ನು 71 ನಿಮಿಷಗಳಲ್ಲಿ ಮಣಿಸಿದ ಬೆಲಾರಸ್‌ನ ಆಟಗಾರ್ತಿ ಎರಡನೇ ಸುತ್ತಿನಲ್ಲಿ ಶ್ರೇಯಾಂಕರಹಿತ ಆಟಗಾರ್ತಿ ಜೆಸಿಕಾ ಬೌಜಸ್ ಮನೈರೊ (ಸ್ಪೇನ್) ಅವರನ್ನು ಎದುರಿಸಲಿದ್ದಾರೆ.

26 ವರ್ಷ ವಯಸ್ಸಿನ ಸಬಲೆಂಕಾ ಅವರು ಮೆಲ್ಬರ್ನ್ ಪಾರ್ಕ್‌ನಲ್ಲಿ ಹ್ಯಾಟ್ರಿಕ್ ಕಿರೀಟ ಮುಡಿಗೇರಿಸಿಕೊಳ್ಳುವ ಛದಲ್ಲಿದ್ದಾರೆ. ಅದು ಸಾಧ್ಯವಾದರೆ ಸ್ವಿಟ್ಜರ್ಲೆಂಡ್‌ನ ಮಾರ್ಟಿನಾ ಹಿಂಗಿಸ್ (1997-99) ನಂತರ ಸತತ ಮೂರು ಪ್ರಶಸ್ತಿ ಗೆದ್ದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು.

ಹಾಲಿ ರನ್ನರ್ ಅಪ್, ಚೀನಾದ ಝೆಂಗ್ ಅವರು 7-6 (7/3), 6-1ರಿಂದ ರೊಮೇನಿಯಾದ ಅಂಕಾ ಟೊಡೋನಿ ಅವರನ್ನು ಹಿಮ್ಮೆಟ್ಟಿಸಿ ಮುಂದಿನ ಸುತ್ತು ಪ್ರವೇಶಿಸಿದರು. 22 ವರ್ಷ ವಯಸ್ಸಿನ ಝೆಂಗ್ ಅವರಿಗೆ ಮೊದಲ ಸೆಟ್‌ನಲ್ಲಿ 110ನೇ ಕ್ರಮಾಂಕದ ಟೊಡೋನಿ ಅವರಲ್ಲಿ ಪ್ರಬಲ ಸ್ಪರ್ಧೆ ಎದುರಾಯಿತು. ಅದನ್ನು ಟೈ ಬ್ರೇಕರ್‌ನಲ್ಲಿ ಗೆದ್ದ ಚೀನಾ ಆಟಗಾರ್ತಿ, ಎರಡನೇ ಸೆಟ್‌ನಲ್ಲಿ ಪಾರಮ್ಯ ಮೆರೆದು ಮುನ್ನಡೆದರು.

ಮೂರು ಡಬ್ಲ್ಯುಟಿಎ ಕಿರೀಟಗಳನ್ನು ಮುಡಿಗೇರಿಸಿಕೊಂಡಿರುವ ಅವರು, ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟವನ್ನು ಎದುರು ನೋಡುತ್ತಿದ್ದಾರೆ.

ಜ್ವೆರೇವ್ ಶುಭಾರಂಭ: ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೇವ್ ಅವರು ಎರಡನೇ ಸುತ್ತಿಗೆ ಮುನ್ನಡೆದರು.

27 ವರ್ಷ ವಯಸ್ಸಿನ ಜ್ವೆರೇವ್ 6-4, 6-4, 6-4ರಿಂದ ಫ್ರಾನ್ಸ್‌ನ ವೈಲ್ಡ್‌ಕಾರ್ಡ್ ಸ್ಪರ್ಧಿ ಲ್ಯೂಕಾಸ್ ಪೌಲ್ಲೆ ಅವರನ್ನು ಸೋಲಿಸಿದರು. ಜರ್ಮನಿಯ ಆಟಗಾರ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಪ್ರಯತ್ನದಲ್ಲಿದ್ದಾರೆ. ಆರನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ (ನಾರ್ವೆ) 6-3, 1-6, 7-5, 2-6, 6-1ರ ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಸ್ಪೇನ್‌ನ ಜೌಮ್ ಮುನಾರ್ ಅವರನ್ನು ಮಣಿಸಿದರು. ಜಪಾನ್‌ನ ಅನುಭವಿ ಆಟಗಾರ ಕೀ ನಿಶಿಕೋರಿ ಅವರು ನಾಲ್ಕು ಗಂಟೆ 6 ನಿಮಿಷ ನಡೆದ ಐದು ಸೆಟ್‌ಗಳ ಮ್ಯಾರಥಾನ್ ಪಂದ್ಯದಲ್ಲಿ 4-6, 6-7 (4/7), 7-5, 6-2, 6-3ರಿಂದ ಬ್ರೆಜಿಲ್‌ನ ಥಿಯಾಗೊ ಮೊಂಟೆರೊ ಅವರನ್ನು ಸೋಲಿಸಿದರು.

ಹಬೀಬ್ ಮೈಲಿಗಲ್ಲು: ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಪ್ರಧಾನ ಸುತ್ತಿನಲ್ಲಿ ಸ್ಥಾನ ಪಡೆದ ಲೆಬನಾನ್‌ನ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹದಿ ಹಬೀಬ್ ಅವರು ಎರಡನೇ ಸುತ್ತು ಪ್ರವೇಶಿಸುವ ಮೂಲಕ ಮತ್ತೊಂದು ಮೈಲಿಗಲ್ಲು ನಿರ್ಮಿಸಿದರು. ಮೊದಲ ಸುತ್ತಿನಲ್ಲಿ ಅವರು 7-6 (4), 6-4, 7-6 (6)ರಿಂದ ಚೀನಾದ ಬು ಯುಂಚೋಕೆಟ್ ಅವರನ್ನು ಮಣಿಸಿದರು.

ಮಳೆಯಿಂದಾಗಿ ಮೊದಲ ದಿನದ ಕೆಲ ಪಂದ್ಯಗಳಿಗೆ ಅಡಚಣೆ ಉಂಟಾಯಿತು.

ಬೆಲಾರಸ್‌ನ ಅರಿನಾ ಸಬಲೆಂಕಾ –ಎಎಫ್‌ಪಿ ಚಿತ್ರ

ಮೊದಲ ಸುತ್ತಿನಲ್ಲೇ ಸುಮಿತ್ ನಗಾಲ್ ನಿರ್ಗಮನ

ಮೆಲ್ಬರ್ನ್ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಸುಮಿತ್ ನಗಾಲ್ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

26 ವರ್ಷ ವಯಸ್ಸಿನ ನಗಾಲ್ 3-6, 1-6, 5-7ರಿಂದ 25ನೇ ಕ್ರಮಾಂಕದ ಥಾಮಸ್ ಮಚಾಕ್ (ಝೆಕ್ ರಿಪಬ್ಲಿಕ್) ಅವರಿಗೆ ಶರಣಾದರು.

ಕಳೆದ ವರ್ಷ ಮುಖ್ಯಸುತ್ತಿನಲ್ಲಿ ತಮಗಿಂತ ಉನ್ನತ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಸೋಲಿಸಿ ಎರಡನೇ ಸುತ್ತು ತಲುಪಿದ್ದ ನಗಾಲ್ ಈ ಬಾರಿ ನಿರಾಸೆ ಮೂಡಿಸಿದರು.

ಪುರುಷರ ಡಬಲ್ಸ್‌ನ ಹಾಲಿ ಚಾಂಪಿಯನ್ ಭಾರತದ ರೋಹನ್ ಬೋಪಣ್ಣ ಅವರು ಈ ಬಾರಿ ಕೊಲಂಬಿಯಾದ ನಿಕೋಲಸ್ ಬ್ಯಾರಿಯೆಂಟೋಸ್ ಅವರೊಂದಿಗೆ ಕಣಕ್ಕೆ ಇಳಿಯುವರು.

ಭಾರತದ ಯೂಕಿ ಭಾಂಬ್ರಿ, ಎನ್. ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಬೊಲ್ಲಿಪಲ್ಲಿ ಅವರು ತಮ್ಮ ಜೊತೆಗಾರರೊಂದಿಗೆ ಸ್ಪರ್ಧಾ ಕಣದಲ್ಲಿದ್ದಾರೆ.

ಮಹಿಳಾ ಕ್ರಿಕೆಟ್: ಮಂದಾನ ಪಡೆ ಗರಿಷ್ಠ ರನ್ ದಾಖಲೆ; ಐರ್ಲೆಂಡ್‌ಗೆ ನಿರಾಶೆ

ಜೆಮಿಮಾ ಶತಕ: ಭಾರತಕ್ಕೆ ಸರಣಿ

ರಾಜ್‌ಕೋಟ್ (ಪಿಟಿಐ): ಅಂತರ ರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜೆಮಿಮಾ ರಾಡ್ರಿಗಸ್ ತಮ್ಮ ಚೊಚ್ಚಲ ಶತಕ ದಾಖಲಿಸಿದರು.

ತಮ್ಮ ವೃತ್ತಿಜೀವನದ 41ನೇ ಏಕದಿನ ಪಂದ್ಯವಾಡಿದ ಮುಂಬೈ ಆಟಗಾರ್ತಿ ಜೆಮಿಮಾ (102; 91ಎ, 4X12) ಅವರ ಶತಕದ ಬಲದಿಂದ ತಂಡವು ಐರ್ಲೆಂಡ್ ಎದುರು 116 ರನ್‌ಗಳಿಂದ ಗೆದ್ದಿತು. ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಭಾರತ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಸ್ಮೃತಿ ಮಂದಾನ (73; 54ಎ) ಮತ್ತು ಪ್ರತೀಕಾ ರಾವಲ್ (67; 61ಎ) ಅವರು ಅಮೋಘ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 156 ರನ್ ಕಲೆಹಾಕಿದರು. ಈ ಗಟ್ಟಿ ಅಡಿಪಾಯದ ಮೇಲೆ ಹರ್ಲೀನ್ ಡಿಯೊಲ್ (89; 84ಎ, 4X12) ಮತ್ತು ಜೆಮಿಮಾ ರನ್‌ಗಳ ಸೌಧ ಕಟ್ಟಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 183 ರನ್ ಸೇರಿಸಿದರು. ಜೆಮಿಮಾ ಅವರು 91 ಎಸೆತಗಳಲ್ಲಿ ಶತಕದ ಗಡಿ ದಾಟಿದರು.

ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 370 ರನ್‌ಗಳ ಮೊತ್ತ ಗಳಿಸಿತು. ಇದು ಏಕದಿನ ಕ್ರಿಕೆಟ್‌ನಲ್ಲಿ ಭಾರತ ತಂಡದ ಗರಿಷ್ಠ ರನ್ ದಾಖಲೆಯಾಗಿದೆ. 2017ರಲ್ಲಿ ಇದೇ ತಂಡದ ವಿರುದ್ಧ 2 ವಿಕೆಟ್‌ಗೆ 358 ರನ್ ಗಳಿಸಿದ್ದು ಈವರೆಗಿನ ದಾಖಲೆಯಾಗಿತ್ತು.

ಭಾರತದ ಜೆಮಿಮಾ ರಾಡ್ರಿಗಸ್ –ಪಿಟಿಐ ಚಿತ್ರ

ಕಠಿಣ ಗುರಿ ಬೆನ್ನಟ್ಟಿದ ಐರ್ಲೆಂಡ್ ತಂಡಕ್ಕೆ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 254 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಕ್ರಿಸ್ಟಿನಾ ಕೌಲ್ಟರ್ ರೀಲಿ (80; 113ಎ) ಅರ್ಧಶತಕ ಗಳಿಸಿದರು.

ಭಾರತದ ಬೌಲರ್‌ಗಳಾದ ದೀಪ್ತಿ ಶರ್ಮಾ 3 ಮತ್ತು ಪ್ರಿಯಾ ಮಿಶ್ರಾ 2 ವಿಕೆಟ್‌ಗಳನ್ನು ಗಳಿಸಿದರು.

ಸಾವಿರ ರನ್: ಜೆಮಿಮಾ ಅವರು ಏಕದಿನ ಕ್ರಿಕೆಟ್‌ನಲ್ಲಿ ಒಂದು ಸಾವಿರ ರನ್ ಗಳಿಸಿದವರ ಕ್ಲಬ್ ಸೇರಿದರು. 24 ವರ್ಷದ ಜೆಮಿಮಾ ಅವರ ಖಾತೆಯಲ್ಲಿ 6 ಅರ್ಧಶತಕಗಳು ಇವೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5ಕ್ಕೆ370 (ಸ್ಮೃತಿ ಮಂದಾನ 73, ಪ್ರತೀಕಾ ರಾವಲ್ 67, ಹರ್ಲೀನ್ ಡಿಯೊಲ್ 89, ಜೆಮಿಮಾ ರಾಡ್ರಿಗಸ್ 102, ಒರ್ಲಾ ಪ್ರೆಂಡರ್‌ಗಸ್ಟ್ 75ಕ್ಕೆ2, ಅರ್ಲೀನ್ ಕೆಲಿ 82ಕ್ಕೆ2) ಐರ್ಲೆಂಡ್: 50 ಓವರ್‌ಗಳಲ್ಲಿ 7ಕ್ಕೆ254 (ಸಾರಾ ಫೋರ್ಬ್ಸ್ 38, ಕಾಲ್ಟರ್ ರೀಲಿ 80, ಲಾರಾ ಡೆಲನಿ 37, ಲೀ ಪಾಲ್ ಔಟಾಗದೆ 27, ಪ್ರಿಯಾ ಮಿಶ್ರಾ 53ಕ್ಕೆ2, ದೀಪ್ತಿ ಶರ್ಮಾ 37ಕ್ಕೆ3) **ಫಲಿತಾಂಶ:** ಭಾರತ ತಂಡಕ್ಕೆ 116 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಜೆಮಿಮಾ ರಾಡ್ರಿಗಸ್.

ಚಾಂಪಿಯನ್ಸ್ ಟ್ರೋಫಿ: ಶಕೀಬ್, ಲಿಟ್ಟನ್ ಕೈಬಿಟ್ಟ ಬಾಂಗ್ಲಾ ತಂಡ

ಢಾಕಾ (ಪಿಟಿಐ): ಬಾಂಗ್ಲಾದೇಶದ ಅನುಭವಿ ಆಲ್‌ರೌಂಡರ್ ಶಕೀಬ್ ಅಲ್ ಹಸನ್, ತಮ್ಮ ಬೌಲಿಂಗ್ ಶೈಲಿಯ ಎರಡನೇ ಪರೀಕ್ಷೆಯಲ್ಲೂ ವಿಫಲವಾಗಿದ್ದಾರೆ. ಇದರಿಂದಾಗಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ತಂಡವನ್ನು ಸೇರುವ ಕನಸು ಭಗ್ನಗೊಂಡಿದೆ.

ಇಂಗ್ಲೆಂಡ್‌ನ ಲೌಬರೊ ವಿಶ್ವವಿದ್ಯಾಲಯದಲ್ಲಿ ಶಕೀಬ್ ಈ ಹಿಂದೆ ಬೌಲಿಂಗ್ ಶೈಲಿಯ ಪರೀಕ್ಷೆಗೆ ಒಳಗಾಗಿ ವಿಫಲರಾಗಿದ್ದರು. ಹೀಗಾಗಿ, ದೇಶೀಯ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಅಮಾನತುಗೊಂಡಿದ್ದಾರೆ. ಕಳೆದ ತಿಂಗಳು ಚೆನ್ನೈನ ಶ್ರೀರಾಮ ಚಂದ್ರ ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್‌ನಲ್ಲಿ ಅವರು ಮರುಪರೀಕ್ಷೆ ಒಳಗಾಗಿ, ಅಲ್ಲೂ ವಿಫಲರಾಗಿದ್ದಾರೆ.

ಈ ಮಧ್ಯೆ ಚಾಂಪಿಯನ್ಸ್ ಟ್ರೋಫಿಗೆ ತಂಡವನ್ನು ಪ್ರಕಟಿಸಲಾಗಿದೆ. ಲಿಟ್ಟನ್ ದಾಸ್ ಅವರಿಗೂ ಕೊಕ್ ನೀಡಲಾಗಿದೆ.

ತಂಡ: ನಜ್ಮುಲ್ ಹುಸೇನ್ ಶಾಂತೊ (ನಾಯಕ), ಸೌಮ್ಯ ಸರ್ಕಾರ್, ತಂಝಿದ್ ಹಸನ್, ತೌಹಿದ್ ಹೃದಯ್, ಮುಷ್ಫಿಕರ್ ರಹೀಂ, ಮೊಹಮ್ಮದ್ ಮಹಮ್ಮದುಲ್ಲಾ ರಿಯಾದ್, ಜೇಕರ್ ಅಲಿ, ಮೆಹಿದಿ ಹಸನ್ ಮಿರಾಜ್, ರಿಶಾದ್ ಹುಸೇನ್, ತಸ್ಕಿನ್ ಅಹ್ಮದ್, ಮುಸ್ತಫಿಜುರ್ ರೆಹಮಾನ್, ಪರ್ವೇಜ್ ಹುಸೇನ್, ನಸುಮ್ ಅಹ್ಮದ್, ತಂಜಿಮ್ ಹಸನ್ ಸಕೀಬ್, ನಹೀದ್ ರಾಣಾ.

ಕಿವೀಸ್ ತಂಡಕ್ಕೆ ಸ್ಯಾಂಟನರ್ ನಾಯಕ

ವೆಲ್ಲಿಂಗ್ಟನ್ (ಎಎಫ್‌ಪಿ): ಅನುಭವಿಗಳಾದ ಕೇನ್ ವಿಲಿಯಮ್ಸನ್, ಡೆವೊನ್ ಕಾನ್ವೆ ಅವರನ್ನು ಒಳಗೊಂಡಂತೆ ಚಾಂಪಿಯನ್ಸ್ ಟ್ರೋಫಿಗೆ ನ್ಯೂಜಿಲೆಂಡ್ ತಂಡವನ್ನು ಪ್ರಕಟಿಸಲಾಗಿದೆ.

ತಂಡ: ಮಿಚೆಲ್ ಸ್ಯಾಂಟನರ್ (ನಾಯಕ), ವಿಲ್ ಯಂಗ್, ಡೆವೊನ್ ಕಾನ್ವೆ, ರಚಿನ್ ರವೀಂದ್ರ, ಕೇನ್ ವಿಲಿಯಮ್ಸನ್, ಮಾರ್ಕ್ ಚಾಪ್ಮನ್, ಡೇರಿಲ್ ಮಿಚೆಲ್, ಟಾಮ್ ಲೇಥಂ, ಗ್ಲೆನ್ ಫಿಲಿಪ್ಸ್, ಮೈಕೆಲ್ ಬ್ರೇಸ್‌ವೆಲ್, ನೇಥನ್ ಸ್ಮಿತ್, ಮ್ಯಾಟ್ ಹೆನ್ರಿ, ಲಾಕಿ ಫರ್ಗ್ಯುಸನ್, ಬೆನ್ ಸಿಯರ್ಸ್, ವಿಲ್ ಓ ಆರ್ಕೂರ್.